

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 26 ಭಾನುವಾರ 2023

ಸಂಪುಟ: 44 | ಸಂಚಿಕೆ: 219 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..

₹4



ಮೈಸೂರಲ್ಲಿ 900ಕ್ಕೂ ಅಧಿಕ

ಭ್ರೂಣ ಹತ್ಯೆ

"ಭ್ರೂಣಹತ್ಯೆ ಪ್ರಕರಣದಲ್ಲಿ ಬಂಧಿತನಾಗಿರುವ ಚೆನ್ನೈನ ವೈದ್ಯ ತುಳಸಿರಾಮ್ ಮೈಸೂರಿನ ಮೆಡಿಕಲ್ ಕಾಲೇಜೊಂದರಲ್ಲಿ ವ್ಯಾಸಂಗ ಮಾಡಿದ್ದ. ಈ ಸಂದರ್ಭದಲ್ಲೇ ಮಾತಾ ಆಸ್ಪತ್ರೆಯ ವೈದ್ಯ ಡಾ. ಚಂದನ್ ಬಲ್ಲಾಳ್ ಸಂಪರ್ಕ ಹೊಂದಿದ್ದ ಈತ, ವೈದ್ಯಕೀಯ ಶಿಕ್ಷಣ ಮುಗಿಸಿದ ನಂತರ ಚೆನ್ನೈಗೆ ತೆರಳಿದ್ದನಾದರೂ ಮತ್ತೆ ಮೈಸೂರಿಗೆ ಆಗಮಿಸಿ ಡಾ. ಚಂದನ್ ಬಲ್ಲಾಳ್ ಜೊತೆಗೂಡಿ ಭ್ರೂಣ ಹತ್ಯೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂಬುದು ಪೊಲೀಸರ ವಿಚಾರಣೆ ವೇಳೆ ತಿಳಿದುಬಂದಿದೆ.

● ಕಳೆದ 3 ವರ್ಷದಿಂದ ಮೈಸೂರಿನ 2 ಆಸ್ಪತ್ರೆಗಳಲ್ಲಿ ನೀಚ ಕೃತ್ಯ ● ಚೆನ್ನೈನ ವೈದ್ಯ ಸೇರಿ 8 ಮಂದಿ ಬಂಧನ; ಮೈಸೂರು ವೈದ್ಯ ನಾಪತ್ತೆ ● ಮಂಡ್ಯದ ಆಲೆಮನೆಯಲ್ಲಿ ಸ್ಕ್ಯಾನಿಂಗ್; ಹೆಣ್ಣು ಭ್ರೂಣವೆಂದು ಖಚಿತವಾದರೆ ಮೈಸೂರಿಗೆ ಕರೆತಂದು ಆ ಭ್ರೂಣ ಹತ್ಯೆ!



ಮೈಸೂರು, ನ. 25(ಬಿಎಲ್‌ಯು)– ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ಭ್ರೂಣ ಹತ್ಯೆ ಜಾಲವೊಂದನ್ನು ಭೇದಿಸಿದ್ದು, ಕಳೆದ 3 ವರ್ಷಗಳಿಂದ ಮೈಸೂರಿನ 2 ಆಸ್ಪತ್ರೆಗಳಲ್ಲಿ ಸುಮಾರು 900ಕ್ಕೂ ಹೆಚ್ಚು ಭ್ರೂಣ ಹತ್ಯೆ ನಡೆದಿದೆ ಎಂಬುದು ಬೆಳಕಿಗೆ ಬಂದಿದೆ. ಈ ಪ್ರಕರಣದಲ್ಲಿ ಚೆನ್ನೈನ ವೈದ್ಯ ಸೇರಿದಂತೆ 8 ಮಂದಿಯನ್ನು ಬಂಧಿಸಿದ್ದು, ಮೈಸೂರಿನ ವೈದ್ಯನೋರ್ವ ತಲೆಮರೆಸಿಕೊಂಡಿದ್ದಾನೆ.

ಚೆನ್ನೈನ ವೈದ್ಯ ಡಾ. ತುಳಸಿರಾಮ್(41), ಮೈಸೂರಿನ ಉದಯಗಿರಿಯಲ್ಲಿರುವ ಮಾತಾ ಆಸ್ಪತ್ರೆಯ ವೈದ್ಯ ಡಾ. ಚಂದನ್ ಬಲ್ಲಾಳ್ ಪತ್ನಿಯೂ ಆದ ಈ ಆಸ್ಪತ್ರೆಯ ವ್ಯವಸ್ಥಾಪಕಿ, ನಾಯ್ಡುನಗರ ನಿವಾಸಿ ಸಿ.ಎಂ.ಮೀನಾ(38), ಇದೇ ಆಸ್ಪತ್ರೆಯ ರಿಸೆಪ್ಷನಿಸ್ಟ್, ಮಂಡಿ ಮೊಹಲ್ಲಾ ನಿವಾಸಿ ರಿಜ್ಮಾಖಾನುಮ್(38), ಲ್ಯಾಬ್ ಟೆಕ್ನಿಷಿಯನ್ ನಿಸಾರ್, ಮಧ್ಯವರ್ತಿಗಳಾದ ಶಿವಲಿಂಗೇಗೌಡ ಅಲಿಯಾಸ್ ಶಿವ, ನಯನ್‌ಕುಮಾರ್ ಅಲಿಯಾಸ್ ನಯನ್, ವೀರೇಶ್, ನವೀನ್‌ಕುಮಾರ್ ಬಂಧಿತರಾಗಿದ್ದು, ಡಾ.ಚಂದನ್ ಬಲ್ಲಾಳ್ ತಲೆಮರೆಸಿಕೊಂಡಿದ್ದಾನೆ.

"ಉದಯಗಿರಿ ಪೊಲೀಸ್ ಠಾಣೆ ಸರಹದ್ದಿನ ಕ್ಯಾತಮಾರನಹಳ್ಳಿ ರಸ್ತೆಯಲ್ಲಿದ್ದ ಮಾತಾ ಆಸ್ಪತ್ರೆ ಕಳೆದ ಸುಮಾರು 3 ತಿಂಗಳಿಂದ ಬಂದ್ ಆಗಿರುವುದು ಗೊತ್ತಾಗಿದೆ. ಈ ಆಸ್ಪತ್ರೆ ಏಕೆ ಬಂದ್ ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಬೆಂಗಳೂರಿನ ಪೊಲೀಸರು ಈ ಆಸ್ಪತ್ರೆ ಮೇಲೆ ದಾಳಿ ನಡೆಸಿದ್ದರು ಎಂಬುದರ ಬಗ್ಗೆಯೂ ನಮಗೆ ಯಾವುದೇ ಮಾಹಿತಿ ಬಂದಿಲ್ಲ ಎಂದು ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈ ಜಾಲದ ಕಿಂಗ್‌ಪಿನ್ ಶಿವಲಿಂಗೇಗೌಡ ತನ್ನೊಂದಿಗೆ ಮೂವರನ್ನು ಸೇರಿಸಿಕೊಂಡು ಬೆಂಗಳೂರಿನ ಕೆಲ ಲ್ಯಾಬ್‌ಗಳ ಸಿಬ್ಬಂದಿಯ ಸಂಪರ್ಕ ಹೊಂದಿ, ಭ್ರೂಣಲಿಂಗ ಪತ್ತೆಗೆ ಪ್ರಯತ್ನಿಸುತ್ತಿದ್ದ ದಂಪತಿಯನ್ನು ಗುರುತಿಸಿ, ಗರ್ಭಿಣಿ ಸ್ತ್ರೀಯರನ್ನು ಮಂಡ್ಯದ ಆಲೆಮನೆಯೊಂದಕ್ಕೆ ಕರೆತಂದು ಅಲ್ಲಿನ ಶೆಡ್‌ನಲ್ಲಿ ಇಟ್ಟುಕೊಂಡಿದ್ದ ಸ್ಕ್ಯಾನಿಂಗ್ ಯಂತ್ರದಿಂದ ಭ್ರೂಣಲಿಂಗ ಪತ್ತೆ ಮಾಡುತ್ತಿದ್ದ. ಹೆಣ್ಣು ಭ್ರೂಣವಿರುವುದು ಕಂಡುಬಂದು, ಸದರಿ ಭ್ರೂಣವನ್ನು ತೆಗೆದುಹಾಕಲು ಚೆನ್ನೈನ ವೈದ್ಯ ಡಾ. ತುಳಸಿರಾಮ್ ಮೂಲಕ ಮೈಸೂರಿನ ಉದಯಗಿರಿ ಪೊಲೀಸ್ ಠಾಣಾ ಸರಹದ್ದಿನ ಮಾತಾ ಆಸ್ಪತ್ರೆಯ ವೈದ್ಯ ಡಾ. ಚಂದನ್ ಬಲ್ಲಾಳ್ ಬಳಿಗೆ ಕರೆದೊಯ್ಯುತ್ತಿದ್ದ. ನಂತರ ಉದಯಗಿರಿಯ ಮಾತಾ ಆಸ್ಪತ್ರೆ ಅಥವಾ ಡಾ. ರಾಜ್‌ಕುಮಾರ್ ರಸ್ತೆಯಲ್ಲಿರುವ ಆಯುರ್ವೇದಿಕ್ ಪೈಲ್ಸ್ ಡೇ ಕೇರ್ ಸೆಂಟರ್‌ನಲ್ಲಿ ಭ್ರೂಣಹತ್ಯೆ ಮಾಡಿಸುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ಈ ತಂಡವು ಕಳೆದ 3 ವರ್ಷಗಳಿಂದ

● 9ನೇ ಪುಟಕ್ಕೆ

ಬಿಜೆಪಿ ಜೊತೆಗೆ ನನ್ನ ಸಂಬಂಧ ಮುಗಿದ ಅಧ್ಯಾಯ

ಬೆಂಗಳೂರು, ನ.25–ಬಿಜೆಪಿ ಜೊತೆಗೆ ನನ್ನ ಸಂಬಂಧ ನೂರಕ್ಕೆ ನೂರು ಮುಗಿದ ಅಧ್ಯಾಯ ಎಂದು ಗಂಗಾವತಿ ಕ್ಷೇತ್ರದ ಕೆಆರ್‌ಪಿಪಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಹೇಳಿದರು. ವಿಧಾನಸಭೆ ಚುನಾವಣೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಜೆಪಿಗೆ ಗಾಲಿ ಜನಾರ್ದನ ರೆಡ್ಡಿ ಅವರು ಕಟ್ಟಿದ ಕೆಆರ್‌ಪಿಪಿ ಪಕ್ಷ ದೊಡ್ಡ ಹೊಡೆತ ನೀಡಿತ್ತು ಇದರಿಂದಾಗಿ ಎಚ್ಚೆತ್ತ ಬಿಜೆಪಿ, ಗಾಲಿ ಜನಾರ್ದನ ರೆಡ್ಡಿ ಅವರನ್ನು ಪಕ್ಷಕ್ಕೆ ಮರು ಸೇರ್ಪಡೆ ಮಾಡಲು ಮುಂದಾಗಿದ್ದಾರೆ. ಈ ಬಗ್ಗೆ ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಜನಾರ್ದನ ರೆಡ್ಡಿ, ಬಿಜೆಪಿಗೆ ಮರಳಿ ಹೋಗುವುದನ್ನು ನಾನು ಕನಸು ಮನಸಿನಲ್ಲೂ ಯೋಚನೆ ಮಾಡಲ್ಲ. ಕೆಆರ್‌ಪಿಪಿ ಪಕ್ಷ ಸ್ಥಾಪಿಸಿದಾಗ ಯಾರೆಲ್ಲಾ ಎಷ್ಟೇ ಪ್ರಯತ್ನಿಸಿದರೂ ಯಾರ ಜೊತೆಗೂ ನಾನು ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಸ್ವತಂತ್ರವಾಗಿಯೇ ನಾನು ಮುಂದೆ ಹೋಗುತ್ತೇನೆ ಎಂದರು.



ಲೋಕಸಭಾ ಚುನಾವಣೆ ದೃಷ್ಟಿಯಿಂದ ಯಾರೂ ನನ್ನ ಸಂಪರ್ಕ ಮಾಡಿಲ್ಲ, ನಾನೂ ಯಾರನ್ನೂ ಸಂಪರ್ಕ ಮಾಡಿಲ್ಲ. ನಾನು ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ. ಆದರೆ, ಎಂಟು

● 9ನೇ ಪುಟಕ್ಕೆ





ನನ್ನ ಅವಧಿಯಲ್ಲಿ ರೂಪಿಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಸ್ವೀಕರಿಸಿ, ಜಾರಿಗೊಳಿಸಿ

● ರಾಜ್ಯ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ ಕಾಂತರಾಜ್ ಸರ್ಕಾರಕ್ಕೆ ಒತ್ತಾಯ ● ನನ್ನ ವರದಿ ವೈಜ್ಞಾನಿಕವಾಗಿದೆ, ಅದು ಕಳೆದು ಹೋಗಿಲ್ಲ; ಆಯೋಗದ ಕಚೇರಿಯ ಪೆಟ್ಟಿಗೆಯಲ್ಲಿ ಭದ್ರವಾಗಿದೆ

ಬೆಂಗಳೂರು, ನ. 25(ಕೆಎಂಶಿ)– ನನ್ನ ಅವಧಿಯಲ್ಲಿ ರೂಪಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸ್ವೀಕರಿಸಿ ಜಾರಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷ ಕಾಂತರಾಜ್ ಇಂದಿಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಸರ್ಕಾರದ ಆದೇಶದಂತೆ ನೇಮಕಗೊಂಡಿದ್ದ ನನ್ನ ನೇತೃತ್ವದ ಅಂದಿನ ಸಮಿತಿ, ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಿತ್ತು. ಇದುವರೆಗೂ ಸಮೀಕ್ಷೆಗೆ ಸಂಬಂಧಪಟ್ಟ ವರದಿಯನ್ನು ಆಯೋಗದಿಂದ ರಾಜ್ಯ ಸರ್ಕಾರ ಪಡೆದುಕೊಳ್ಳಲಿಲ್ಲ.


ಕಾಂತರಾಜ್

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ತಯಾರಿಸಿದ ಮೇಲೆ ಹೆಸರಿಸಲಾದ ಎಲ್ಲಾ ವರದಿಗಳನ್ನು ಸರ್ಕಾರ ಸ್ವೀಕರಿಸಿ ಜಾರಿಗೊಳಿಸಬೇಕೆಂದು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು. ಆಯೋಗದ ಅಂದಿನ ಸದಸ್ಯರ ಜೊತೆಗೂಡಿ ಮಾತನಾಡಿದ ಅವರು, ವರದಿ ಕಳೆದು ಹೋಗಿಲ್ಲ, ಮೂಲ ಪ್ರತಿಯನ್ನು ಆಯೋಗದ ಕಚೇರಿಯ ಪೆಟ್ಟಿಗೆಯಲ್ಲಿ ಸೀಲ್ ಮಾಡಿ ಇಡಲಾಗಿತ್ತು. ವರದಿ ಸಿದ್ಧಪಡಿಸುವಾಗ ನಡೆದ ಎಲ್ಲ ಸಭೆಗಳಲ್ಲೂ ತೆಗೆದುಕೊಂಡ ನಿರ್ಧಾರಗಳಿಗೆ ಒಮ್ಮತದಿಂದ ಸದಸ್ಯರು ಮತ್ತು ಕಾರ್ಯದರ್ಶಿಗಳು ಸಹಿ ಮಾಡಿದ್ದಾರೆ.

ಮುದ್ರಿತಗೊಂಡ ಅಂತಿಮ ಪ್ರತಿಗೆ ಕಾರ್ಯದರ್ಶಿಗಳು ಸಹಿ ಮಾಡಿಲ್ಲ, ಸಭೆಯಲ್ಲಿ ತೆಗೆದುಕೊಂಡು ತೀರ್ಮಾನಗಳೇ ಅಂತಿಮ ಮುದ್ರಿತ ಪ್ರತಿಯಲ್ಲ ಎಂದು

● 9ನೇ ಪುಟಕ್ಕೆ







ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ನೇಮಕಕ್ಕೆ ಬಿಜೆಪಿಯಲ್ಲಿ ಅಸಮಾಧಾನ ಸ್ಫೋಟ

ಸೋಮಣ್ಣ, ರಮೇಶ್ ಜಾರಕಿಹೊಳಿ, ಯತ್ನಾಳ್, ಬೆಲ್ಲದ್, ಲಿಂಬಾವಳಿ ವರಿಷ್ಠರಿಗೆ ದೂರು ಸಲ್ಲಿಸಲು ನಿರ್ಧಾರ

● ಈಗಾಗಲೇ ಅಸಮಾಧಾನಿತರಿಗೆ ಬಿಜೆಪಿ ವರಿಷ್ಠರಿಂದ ದೆಹಲಿಗೆ ಬುಲಾವ್
● ಅಸಮಾಧಾನಿತರು ಡಿ.7ರಂದು ದೆಹಲಿಗೆ ಭೇಟಿ; ಮೂರು ದಿನ ಬಿಡಾರ ಹೂಡಿ ತಮಗಾದ ಅನ್ಯಾಯದ ಬಗ್ಗೆ ವಿವರಣೆ ಸಲ್ಲಿಕೆ



ಬೆಂಗಳೂರು, ನ. 25(ಕೆಎಂಶಿ)–ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಬಿ.ವೈ.ವಿಜಯೇಂದ್ರ ನೇಮಕಾತಿಗೆ ಅಸಮಾಧಾನ ವ್ಯಕ್ತಪಡಿಸುತ್ತಿರುವ ಮಾಜಿ ಸಚಿವ ವಿ.ಸೋಮಣ್ಣ, ರಮೇಶ್ ಜಾರಕಿಹೊಳಿ ಮತ್ತಿತರರು ಪಕ್ಷದ ದೆಹಲಿ ದೊರೆಗಳಿಗೆ ದೂರು ಸಲ್ಲಿಸಲು ಮುಂದಾಗಿದ್ದಾರೆ.

ರಾಜ್ಯಾಧ್ಯಕ್ಷರ ನೇಮಕಾತಿ ನಂತರ ಪಕ್ಷದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯ ಬಗೆಹರಿಸಲು ವರಿಷ್ಠರು ಮಧ್ಯೆ ಪ್ರವೇಶಿಸಿದ್ದು, ಅಸಮಾಧಾನಗೊಂಡವರನ್ನು ದೆಹಲಿಗೆ ಬರುವಂತೆ ಸೂಚಿಸಿದ್ದಾರೆ.

ನಿನ್ನೆ ರಾತ್ರಿ ಪಕ್ಷದ ಪ್ರಮುಖ ನಾಯಕರೊಬ್ಬರು ಸೋಮಣ್ಣ ಅವರನ್ನು ಸಂಪರ್ಕಿಸಿ ಪಂಚ ರಾಜ್ಯಗಳ ಚುನಾವಣೆ ಪ್ರಕಿಯೆ ಮುಗಿದ ನಂತರ ಡಿಸೆಂಬರ್ ಮೊದಲ ವಾರದಲ್ಲಿ ದೆಹಲಿಗೆ ಬರುವಂತೆ ಆಹ್ವಾನ ನೀಡಿದ್ದಾರೆ. ವರಿಷ್ಠರ ಆಹ್ವಾನದ ಮೇರೆಗೆ ಸೋಮಣ್ಣ, ರಮೇಶ್ ಜಾರಕಿಹೊಳಿ ಅಲ್ಲದೆ, ಅರವಿಂದ ಲಿಂಬಾವಳಿ, ಅರವಿಂದ ಬೆಲ್ಲದ್, ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಹಲವು ಮುಖಂಡರು ಡಿ.7 ರಂದು ದೆಹಲಿಗೆ ತೆರಳಿ, ಮೂರು ದಿನಗಳ ಕಾಲ ಅಲ್ಲಿಯೇ ಬಿಡಾರ ಹೂಡಿ, ವರಿಷ್ಠರನ್ನು ಭೇಟಿಯಾಗಲಿದ್ದಾರೆ.

ತುಮಕೂರಿನ ಸಿದ್ದಗಂಗಾ ಮಠದಲ್ಲಿ ಡಿ.6 ರಂದು ಸೋಮಣ್ಣ ತಮ್ಮ ಕುಟುಂಬದ ವತಿಯಿಂದ ನಿರ್ಮಿಸಿರುವ ದಾಸೋಹ ಭವನವನ್ನು ಸಮರ್ಪಣೆ ಮಾಡಲಿದ್ದಾರೆ. ಸಮಾರಂಭದ ನಂತರ ತಮ್ಮ ಮುಂದಿನ ರಾಜಕೀಯ ನಿರ್ಧಾರ ಕೈಗೊಳ್ಳುವ ಉದ್ದೇಶದಿಂದ ತಮ್ಮ ಬೆಂಬಲಿಗರು ಹಾಗೂ ಮುಖಂಡರ ಸಭೆ ಕರೆದಿದ್ದರು.


ವರಿಷ್ಠರಿಗೆ ಇದರ ಮನವರಿಕೆ ಆಗುತ್ತಿದ್ದಂತೆ ನಿನ್ನೆ ರಾತ್ರಿ ಸೋಮಣ್ಣ ಅವರನ್ನು ಸಂಪರ್ಕಿಸಿ, ಯಾವುದೇ ದುಡುಕಿನ ನಿರ್ಧಾರ ಕೈಗೊಳ್ಳದಂತೆ, ಸಮಸ್ಯೆ ಪರಿಹರಿಸಲು ತಾವುಗಳು ದೆಹಲಿಗೆ ಬರುವಂತೆಯೂ ಆಹ್ವಾನ ನೀಡಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಸೋಮಣ್ಣ, ನಾವು ಹಿರಿಯರು, ನಮ್ಮದೇ ಆದ ಸೇವೆ, ಅನುಭವ, ಆಲೋಚನೆಗಳಿವೆ. ಎಲ್ಲವೂ ನಮ್ಮದೇ ಸರಿ ಎನ್ನಲಾಗದು, ನಮ್ಮಲ್ಲಿರುವ ದುಗುಡ–ದುಮ್ಮಾನ ವರಿಷ್ಠರ ಮುಂದಿಡುತ್ತೇವೆ. ಅವರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ನಮ್ಮ ಮುಂದಿನ ನಡೆ ಎಂದು ಮಾರ್ಮಿಕವಾಗಿ ನುಡಿದರು. ಸೋಮಣ್ಣ ಮತ್ತು ರಮೇಶ್ ಜಾರಕಿಹೊಳಿ ಜೊತೆಗೆ ಬಸನಗೌಡ ಪಾಟೀಲ್ ಯತ್ನಾಳ್ ಕೈಜೋಡಿಸಿದ್ದು, ಇವರ ನಾಯಕತ್ವದಲ್ಲಿ ಯಡಿಯೂರಪ್ಪ ವಿರೋಧಿ ಬಣ ಡಿಸೆಂಬರ್ 7ರಂದು ದೆಹಲಿಗೆ ತೆರಳಲಿದೆ. ವಿಜಯೇಂದ್ರ ನೇಮಕಾತಿ ಬಗ್ಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸುತ್ತಿರುವ ನಾಯಕರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಷಾ ಸೇರಿದಂತೆ ಪ್ರಮುಖ ನಾಯಕರನ್ನು ಭೇಟಿ ಮಾಡಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿದ್ದಾರೆ. ಸೇಡಿನ ಮನೋಭಾವ ಹೊಂದಿರುವ ಯಡಿಯೂರಪ್ಪ ಮತ್ತು ಅವರ ಬೆಂಬಲಿಗರು ನಮ್ಮನ್ನು ರಾಜಕೀಯವಾಗಿ ತುಳಿಯಬಹುದು. ನೀವು ರಕ್ಷಣೆಗೆ ಬರದಿದ್ದರೆ ನಮ್ಮ ಮುಂದಿನ ತೀರ್ಮಾನ ಕೈಗೊಳ್ಳಬೇಕಾಗುತ್ತದೆ ಎಂದು ಕೆಲವು ಅಂಕಿ–ಅಂಶಗಳನ್ನು ವರಿಷ್ಠರ ಮುಂದಿಡಲಿದ್ದಾರೆ. ಅಷ್ಟೇ ಅಲ್ಲ, ಪಕ್ಷದಲ್ಲಿ ಮುಂದೆ ನಮ್ಮ

● 9ನೇ ಪುಟಕ್ಕೆ

ಕೈಲಾಸ ಶಿವಗಣಾರಾಧನಾ

ಆಹ್ವಾನ ಪತ್ರಿಕೆ



ಶ್ರೀ ಪಟೇಲ್ ಹೆಚ್.ಎಂ.ಪುಟ್ಟಮಾದಪ್ಪ

ಇವರು ದಿನಾಂಕ 17-11-2023ರ ಶುಕ್ರವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧವಾಗಿ 27-11-2023ನೇ ಸೋಮವಾರ ಬೆಳಗ್ಗೆ 10-30 ಗಂಟೆಗೆ ಅರಕಲವಾಡಿ ಶ್ರೀ ಸಿದ್ಧಮಲ್ಲೇಶ್ವರ ಪಟ್ಟದ ಮಠಾಧ್ಯಕ್ಷರಾದ ಶ್ರೀ ಷ. ವೇ. ಬ್ರ. ಶ್ರೀ ಬಸವಣ್ಣಸ್ವಾಮಿಗಳವರ ದಿವ್ಯ ಪಾದಪೂಜೆ ಮತ್ತು ಮಧ್ಯಾಹ್ನ 12-00 ಗಂಟೆಗೆ 'ಕೈಲಾಸ ಶಿವಗಣಾರಾಧನೆ' ಯನ್ನು ನಮ್ಮ ಸ್ವಗೃಹ ಚಾಮರಾಜನಗರ ತಾಲ್ಲೂಕು, ಹೊನ್ನಹಳ್ಳಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಎಂದು ತಿಳಿದು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕೆಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು: ಶ್ರೀಮತಿ ಮಾದಮ್ಮ (ದಿವಂಗತ ಪಟೇಲ್ ಮಾದಪ್ಪನವರ ಧರ್ಮಪತ್ನಿ)
ಶ್ರೀ ಮಹದೇವಪ್ಪ (ರಾಜಣ್ಣ), ಶ್ರೀ ಪಿ.ವೃಷಬೇಂದ್ರಪ್ಪ, ಶ್ರೀಮತಿ ದಿವ್ಯ ವೃಷಬೇಂದ್ರಪ್ಪ,
ಶ್ರೀಮತಿ ಮಮತ ಶಿವರಾಜು (ರಾಣಿ) ಮಹೇಶ (ಲೇಟ್ ದೊಡ್ಡಮಾದಪ್ಪನವರ ಮಗ) ಹಾಗೂ
ಮಕ್ಕಳು, ಮೊಮ್ಮಕ್ಕಳು. ಪಟೇಲ್ ಕುಟುಂಬವರ್ಗದವರು. ಬಂಧುಮಿತ್ರರು ಹಾಗೂ ಗ್ರಾಮಸ್ಥರು

ಡಿ.21, ರಾಷ್ಟ್ರ ಜಾಗೃತಿ ಅಭಿಯಾನದ ಸಮಾರೋಪ



ಮೈಸೂರು,ನ.25(ಜಿಎ)–ರಾಷ್ಟ್ರ ಜಾಗೃತಿ ಅಭಿಯಾನದ ಸಮಾರೋಪ ಸಮಾರಂಭವನ್ನು ಡಿ.21ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ದೇಶಭಕ್ತಿ ಗೀತೆ ಗಾಯನ ಮತ್ತು ನೃತ್ಯ ಸ್ಪರ್ಧೆ ಟ್ರಸ್ಟ್ ಅಧ್ಯಕ್ಷ ನಿವೃತ್ತ ಜಸ್ಟೀಸ್ ಎನ್.ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.20ರಂದು ನಗರದಲ್ಲಿ ಶೋಭಾಯಾತ್ರೆ ನಡೆಯಲಿದೆ. ಡಿಸೆಂಬರ್ 1ರಂದು ಬೆಳಗ್ಗೆ 10.30ಕ್ಕೆ ನಗರದ ಕಲಾಮಂದಿರದಲ್ಲಿ ವೀರೇಶಾನಂದ ಸ್ವಾಮೀಜಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 5ಕ್ಕೆ ಬಹುಮಾನ ವಿತರಿಸಲಾಗುವುದು. ರಾಷ್ಟ್ರ ಜಾಗೃತಿ ಅಭಿಯಾನ ಸಮಿತಿ ಸಮಾನ ಮನಸ್ಕರ ರಾಷ್ಟ್ರಮಟ್ಟದ ವೇದಿಕೆಯಾಗಿದ್ದು, ಸಂವಿಧಾನ. ನಮ್ಮ ಸಂಸ್ಕೃತಿ ನಮ್ಮ ಹಕ್ಕು ಮತ್ತು ಕರ್ತವ್ಯಗಳ ಕುರಿತಾಗಿ ಭಾರತೀಯರಲ್ಲಿ ಜಾಗೃತಿ ಮೂಡಿಸಿ ಉಳಿಸಿ ಬೆಳೆಸುವ ಉದ್ದೇಶ ಹೊಂದಿದೆ. ಹೀಗಾಗಿ ಸ್ಪರ್ಧೆ, ಸಮರ್ಪಣೆ, ಸಂವಾದಗಳ ಮೂಲಕ ದೇಶಭಕ್ತಿ ಗೀತ ಗಾಯನ ಸ್ಪರ್ಧೆಯನ್ನು ಆನ್‌ಲೈನ್‌ನಲ್ಲಿ ನಿರಂತರವಾಗಿ ಆಯೋಜಿಸುತ್ತಾ ಬಂದಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿ.ಆರ್.ನಾಗರಾಜ, ಡಿ.ಟಿ.ಪ್ರಕಾಶ್, ವಿಜಯಲಕ್ಷ್ಮಿ, ರೇವತಿ ರಾಮಸ್ವಾಮಿ ಉಪಸ್ಥಿತರಿದ್ದರು.

ನಾಡಿನ ನೆಲ, ಜಲ, ಭಾಷೆಗೆ ಅನ್ಯಾಯವಾದರೆ ಸಂಘಟಿತರಾಗಿ ಹೋರಾಟ ಅನಿವಾರ್ಯ

ಲೇಖಕ ಪ್ರೊ.ಸಿ.ನಾಗಣ್ಣ ಅವರನ್ನು ಸನ್ಮಾನಿಸಿದ ನಂತರ ಸಂಸದ ವಿ.ಶ್ರೀನಿವಾಸಪ್ರಸಾದ್ ಸಲಹೆ

ಮೈಸೂರು, ನ.25(ಬಿಎಲ್‌ಯು)–ನಾಡಿನ ನೆಲ, ಜಲ, ಭಾಷೆ ಬಗ್ಗೆ ಅನ್ಯಾಯವಾದಾಗ ಪಕ್ಷಾತೀತವಾಗಿ ಎಲ್ಲರೂ ಒಗ್ಗೂಡಿ ಹೋರಾಟ ಮಾಡಬೇಕು ಎಂದು ಚಾಮರಾಜನಗರ ಲೋಕಸಭಾ ಸದಸ್ಯ ವಿ.ಶ್ರೀನಿವಾಸ ಪ್ರಸಾದ್ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ.ಸಿ.ನಾಗಣ್ಣ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರು ನಮ್ಮ ನೆಲ, ಜಲ, ಭಾಷೆ ಬಗ್ಗೆ ಸ್ವಾಭಿಮಾನ ಹೊಂದಬೇಕು ಎಂದು ಸಲಹೆ ನೀಡಿದರು. ತಾಯಿ ಗರ್ಭದಿಂದ ಬರುವ ಭಾಷೆಗೆ ಸರಿಸಾಟಿಯಾದ ಭಾಷೆ ಮತ್ತ್ಯಾವುದೂ ಇಲ್ಲ. ಇದರ ಮಹತ್ವ ಅರಿತು ಆಡಳಿತದಲ್ಲಿ, ನ್ಯಾಯಾಲಯದ



ಕಲಾಪಗಳಲ್ಲಿ ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯ ಬಳಕೆ ಮಾಡಬೇಕು ಎಂದು ಸಂಸದ ಶ್ರೀನಿವಾಸ ಪ್ರಸಾದ್ ಆಗ್ರಹಿಸಿದರು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ. ಸುಮಾರು ಎರಡು ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿರುವ ಕಾರಣ ಕೇಂದ್ರ ಸರ್ಕಾರ ಈ ಮಾನ್ಯತೆ ನೀಡಿದೆ ಎಂದು ಹೇಳಿದರು.

ಭಾಷೆ ಬಹಳ ಸೂಕ್ಷ್ಮವಾದ ವಿಚಾರವಾಗಿದ್ದು, ಸ್ವಲ್ಪ ವ್ಯತ್ಯಾಸವಾದರೂ ಜನರು ಚುರುಕು ಮುಟ್ಟಿಸುತ್ತಾರೆ. ಈ ಹಿಂದೆ ಬೃಹತ್ ಪ್ರಮಾಣದಲ್ಲಿ ನಡೆದ ಗೋಕಾಕ್ ಚಳವಳಿ ಸೇರಿದಂತೆ ಹಲವು ಹೋರಾಟಗಳೇ ಇದಕ್ಕೆ ಸ್ಪಷ್ಟ ನಿದರ್ಶನ ಎಂದರು.

ಪ್ರೊ.ನಾಗಣ್ಣ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ದೊರೆತಿರುವುದು ಸಾಹಿತ್ಯ ಕ್ಷೇತ್ರಕ್ಕೆ ಮೆರಗು ಬಂದಂತಾಗಿದೆ. ಪ್ರೊ.ನಾಗಣ್ಣ ಅವರಿಗೆ ಬಹಳ ಹಿಂದೆಯೇ ಈ ಪ್ರಶಸ್ತಿ ಬರಬೇಕಿತ್ತು ಎಂದು ಶ್ರೀನಿವಾಸ ಪ್ರಸಾದ್ ಅಭಿಪ್ರಾಯಪಟ್ಟರು.

ಸಮಾನತೆ, ಸ್ವಾಭಿಮಾನ, ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರೊ.ನಾಗಣ್ಣ ದಂಪತಿಯನ್ನು ಶ್ರೀನಿವಾಸ ಪ್ರಸಾದ್ ಸನ್ಮಾನಿಸಿದರು. ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ ಸಾನ್ನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಹಿರಿಯ ವಿದ್ವಾಂಸ ಪ್ರೊ. ಎನ್.ಎಸ್.ತಾರಾನಾಥ್, ಮಡ್ಡಿಕೆರೆ ಗೋಪಾಲ್, ಪ್ರೊ.ಬಸವರಾಜು, ಡಾ.ಮುಳ್ಳೂರು ನಂಜುಂಡಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ.ದತ್ತಾತ್ರೇಯ ವೇಲಣ್‌ಕರ್‌ರಿಂದ ಇಂದು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ



ಮೈಸೂರು,ನ.25–'ನಿನಾದ ಗೃಹ ಸಂಗೀತ' ಮೈಸೂರಿನಲ್ಲಿ ಪ್ರತಿ ತಿಂಗಳು ಆಯೋಜಿಸುವ ಸಂಗೀತ ಕಾರ್ಯಕ್ರಮ ಸರಣಿಯ 10ನೆಯ ಕಾರ್ಯಕ್ರಮ ಭಾನುವಾರ ನ.26ರಂದು ಸಂಜೆ 6 ಗಂಟೆಗೆ #37, 'ನಿನಾದ', ರಿಶಭ್ ಸಿದ್ಧಿ ಲೇಔಟ್, ಕೇರ್ಗಳ್ಳಿ, ಮೈಸೂರು ಇಲ್ಲಿ ನಡೆಯಲಿದೆ. ರಂಜನಿ ಮೆಮೋರಿಯಲ್ ಟ್ರಸ್ಟ್ ನಡೆಸುವ ಕಾರ್ಯಕ್ರಮದಲ್ಲಿ ಖ್ಯಾತ ಹಿಂದೂಸ್ತಾನಿ ಗಾಯಕ ಡಾ.ದತ್ತಾತ್ರೇಯ ವೇಲಣ್‌ಕರ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸುರ್‌ಮಣಿ ಡಾ.ದತ್ತಾತ್ರೇಯ ವೇಲಣ್‌ಕರ್ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರು, ಶಿಕ್ಷಕ, ಶಿಕ್ಷಣತಜ್ಞ ಮತ್ತು ಷಡ್ಜ ಕಲಾ ಕೇಂದ್ರ, ಬೆಂಗಳೂರು, ಭಾರತದ ಸ್ಥಾಪಕರು. ಅವರು ಹೆಸರಾಂತ ಗ್ವಾಲಿಯರ್–ಕಿರಾನಾ ಘರಾನಾ ಮಾಂತ್ರಿಕರಾದ ಪಂ.ವಿನಾಯಕ ತೊರವಿ ಮತ್ತು ಕೀರ್ತನಾಚಾರ್ಯ ಲಕ್ಷ್ಮಣ ದಾಸ್ ವೇಲಣ್‌ಕರ್ ಅವರ ಶಿಷ್ಯರು. ದತ್ತಾತ್ರೇಯ ವೇಲಣ್‌ಕರ್ ಅವರು 'ಎ' ದರ್ಜೆಯ ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರು. ಅವರು ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್‌ನ ಎಂಪನೆಲ್ಡ್ ಕಲಾವಿದರಾಗಿದ್ದಾರೆ.

ದತ್ತಾತ್ರೇಯ ಅವರು ಅನೇಕ ಹಿಂದೂಸ್ತಾನಿ ಕ್ಲಾಸಿಕಲ್, ಭಜನ್ಸ್, ಜುಗಲ್ಬಂದಿ ಮತ್ತು ಕಥಾ ಕೀರ್ತನ್ ಸಿಡಿಗಳನ್ನು ಹೊರ ತಂದಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಮತ್ತು ಕಥಾ ಕೀರ್ತನೆ ಎರಡನ್ನೂ ಪ್ರಸ್ತುತಪಡಿಸುವುದು ದತ್ತಾತ್ರೇಯರ ವಿಶೇಷತೆಯಾಗಿದೆ. ಅನೇಕ ಸಂತವಾಣಿ ಕಛೇರಿಗಳನ್ನು ಮಾಡುತ್ತಾ ಬಂದಿದ್ದಾರೆ. ಅವರು ಯುಎಸ್‌ಎ, ಸಿಂಗಾಪುರ್, ಫ್ರಾನ್ಸ್, ಸ್ವಿಟ್ಜರ್ಲೆಂಡ್, ಸ್ವೀಡನ್, ಬ್ರಿಟನ್ ಮತ್ತು ಆಸ್ಟ್ರೇಲಿಯಾಗಳಲ್ಲಿ ತಮ್ಮ ಸಂಗೀತ ಕಛೇರಿ ನೀಡಿದ್ದಾರೆ. ಹೆಚ್ಚಿನ ಮಾಹಿತಿಗೆ 9449676014 ಸಂಪರ್ಕಿಸಬಹುದು.

ಜೆಪಿ ನಗರದ ಕೆಲ ಬಡಾವಣೆಗಳ ಮನೆ, ನಿವೇಶನ ಖಾತೆ ವರ್ಗಾವಣೆಗೆ ಪಾಲಿಕೆ ಮೀನಾಮೇಷ

ಪಾಲಿಕೆ ನಿರ್ಧಾರದಿಂದ ಸಾವಿರಕ್ಕೂ ಹೆಚ್ಚು ಆಸ್ತಿದಾರರಿಗೆ ಸಂಕಷ್ಟ

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆರೋಪ



ಮೈಸೂರು,ನ.25(ಜಿಎ)–ಮೈಸೂರಿನಲ್ಲಿ 30 ವರ್ಷಗಳ ಹಿಂದೆ ರೂಪುಗೊಂಡಿರುವ ಬಡಾವಣೆಗಳಿಗೆ ನಗರಪಾಲಿಕೆಯು ಶೀಘ್ರವಾಗಿ ಮನೆ, ನಿವೇಶನಗಳ ಖಾತೆ ವರ್ಗಾವಣೆ ಮಾಡಿಕೊಡಬೇಕೆಂದು ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾನಗರ ಪಾಲಿಕೆಯು ಮೈಸೂರಿನ ಹಲವಾರು ಬಡಾವಣೆಗಳ ಮನೆ ಹಾಗೂ ನಿವೇಶನಗಳ ಖಾತೆ ವರ್ಗಾವಣೆ ಮಾಡಿಕೊಡುತ್ತಿಲ್ಲ. ಇದರಿಂದಾಗಿ ಸಾರ್ವಜನಿಕರಿಗೆ, ತೀವ್ರ ತೊಂದರೆಯುಂಟಾಗುತ್ತಿದೆ. ಜೆ.ಪಿ. ನಗರದ ಸಿದ್ಧಲಿಂಗೇಶ್ವರ ಬಡಾವಣೆ, ಕಂದಾಯ ಕಾಲೋನಿ, ಬ್ಯಾಂಕ್ ಬಡಾವಣೆ ಇವುಗಳು ರೂಪುಗೊಂಡು 30 ವರ್ಷ ದಾಟಿದೆ. ಇಲ್ಲಿನ ವಯಸ್ಸಾದ ಕೆಲವು ನಾಗರಿಕರು ಮನೆ, ನಿವೇಶನಗಳನ್ನು ತಮ್ಮ ಮಕ್ಕಳಿಗೆ ವರ್ಗಾಯಿಸಲು ಬಯಸಿದಲ್ಲಿ ಇಲ್ಲವೆ ಬ್ಯಾಂಕಿಗೆ ಅಡಮಾನ ಮಾಡಲು ಬಯಸಿದಲ್ಲಿ ಖಾತೆ ಬದಲಾಗಬೇಕಾದುದು ಅನಿವಾರ್ಯವಾಗಿದೆ. ತಂದೆ ತನ್ನ ಮಕ್ಕಳಿಗೆ ವಿಲ್ ಮಾಡಿ ನಿಧನರಾದಲ್ಲಿ ಅದರ ಖಾತೆ ಬದಲು ಮಾಡಲು ಮೈಸೂರು ನಗಾರಾಭಿವೃದ್ಧಿ ಕಚೇರಿಯಿಂದ ಬೈಫರ್ಕೇಶನ್ ಮಾಡಿಸಿಕೊಂಡು ಬರಲು ತಿಳಿಸುತ್ತಿರುವುದು ಅರ್ಥಹೀನ ನಿರ್ಧಾರವಾಗಿದೆ.

30 ವರ್ಷಗಳಿಂದ ಕಂದಾಯ ಕಟ್ಟಿಸಿಕೊಳ್ಳುತ್ತಿರುವ ಮಹಾನಗರಪಾಲಿಕೆ ಈಗ ಈ ವರಸೆ ತೆಗೆದಿರುವುದರಿಂದ ಸಾರ್ವಜನಿಕರು ಮತ್ತು ಮನೆಗಳನ್ನು ಕಟ್ಟಿ ಮಾರುವವರಿಗೂ ಅತೀವ ಸಂಕಷ್ಟ ಎದುರಾಗಿದ್ದು ಇದು ಮಹಾನಗರಪಾಲಿಕೆಯ ವಿವೇಚನಾ ರಹಿತ ಜನವಿರೋಧಿ ನಿಲುವಾಗಿದೆ. ಇದಕ್ಕೆ ಯಾವುದೇ ನೈತಿಕ ಕಾರಣವಿಲ್ಲ.

ಇವು ರೆವಿನ್ಯೂ ಜಾಗದಲ್ಲಿ ನಿರ್ಮಾಣವಾದ ಬಡಾವಣೆಗಳಲ್ಲ, ಸುಪ್ರೀಂಕೋರ್ಟ್ ಕೂಡ 30 ವರ್ಷ ದಾಟಿದ ಮನೆ ಅದು ಯಾವುದೇ ಜಾಗದಲ್ಲಿರಲಿ ಅದರಲ್ಲಿ ವಾಸ ಮಾಡುವವರನ್ನು ಮಾಲೀಕರೆಂದು ನಿರ್ಧರಿಸಬೇಕು ಎಂದು ಸೂಚಿಸಿರುವಾಗ ನಗರಪಾಲಿಕೆಯವರು ಕಾನೂನು ಬದ್ಧ ಮನೆಗಳ ಖಾತೆಯನ್ನು ವರ್ಗಾವಣೆ ಮಾಡಲು ಕುಂಟುನೆಪಗಳನ್ನು ಹೇಳುತ್ತಿರುವುದು ನ್ಯಾಯ ವಿರೋಧಿ ನೀತಿಯಾಗಿದೆ. ಇದರಿಂದ 1000ಕ್ಕೂ ಹೆಚ್ಚು ಆಸ್ತಿಗಳ ಮಾಲೀಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಂಗಳೂರಿನಲ್ಲಿ ಬಿ ಖಾತೆ ಆಸ್ತಿಗಳನ್ನು ಮಾರಾಟ ಮಾಡಲು ಅಲ್ಲಿನ ಪಾಲಿಕೆ ಅನುಮತಿ ನೀಡಿರುವಾಗ ಮೈಸೂರು ಪಾಲಿಕೆ ಈ ಹೊಸ ವರಸೆ ಅರ್ಥವಾಗುತ್ತಿಲ್ಲ. ಇದನ್ನು ಜನಪ್ರತಿನಿಧಿಗಳು ಏಕೆ ಪ್ರಶ್ನಿಸುತ್ತಿಲ್ಲ, ಸರ್ಕಾರಕ್ಕೆ ಯಾಕೆ ಅರ್ಥವಾಗುತ್ತಿಲ್ಲ ಎಂದು ಪ್ರಶ್ನಿಸಿ, ಸಚಿವರು ಹಾಗೂ ಪಾಲಿಕೆ ಈ ಸಮಸ್ಯೆ ನಿವಾರಿಸಬೇಕೆಂದು ಒತ್ತಾಯಿಸಿದರು.

ನಾಳೆ ಅಮೃತೇಶ್ವರ ದೇವಸ್ಥಾನದ ವಾರ್ಷಿಕೋತ್ಸವ; ಶನಿಮಹಾಶಾಂತಿ

ಮೈಸೂರು,ನ.25–ಮೈಸೂರಿನ ದೇವರಾಜ ಮೊಹಲ್ಲಾದ ಶ್ರೀ ಅಮೃತೇಶ್ವರ ದೇವಸ್ಥಾನದ 27ನೇ ವಾರ್ಷಿಕೋತ್ಸವ ಮತ್ತು ಶನಿಮಹಾಶಾಂತಿಯನ್ನು ನ.27ರಂದು ಆಯೋಜಿಸಲಾಗಿದೆ. ಅಂದು ಮೂಲ ದೇವರಿಗೆ ಅಭಿಷೇಕ ಮತ್ತು ಮಹಾಸುದರ್ಶನ ಹೋಮ, ಮೀನ, ಕರ್ಕಾಟಕ, ತುಲಾ, ಮಕರ, ಕುಂಭ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಆರೋಗ್ಯ ಅಭಿವೃದ್ಧಿಗಾಗಿ ಮಹಾಮೃತ್ಯುಂಜಯ ಹೋಮ ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಈ ಎಲ್ಲಾ ಪೂಜಾ ಕೈಂಕರ್ಯವೂ ಬೆಳಗ್ಗೆ 10.30ಗೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ ನೆರವೇರಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಾತಕ ವಿಮರ್ಶಕ ಮೈ ಕುಮಾರ್ 9342183392, 9845183399 ಸಂಪರ್ಕಿಸಿ ಎಂದು ಪ್ರಕಟಣೆ ಕೋರಿದೆ.

ನಾಳೆ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ

ಮೈಸೂರು,ನ.25–ಮೈಸೂರಿನ ಮಹಾಬೆಳಕು ಸಂಸ್ಥೆ ಮತ್ತು ಶಾರದಾ ವಿಲಾಸ ಪದವಿ ಮತ್ತು ಪದವಿಪೂರ್ವ ಕಾಲೇಜು ವತಿಯಿಂದ ನ.27ರಂದು ಮಧ್ಯಾಹ್ನ 12.30ಕ್ಕೆ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಶಾರದಾ ವಿಲಾಸ ಪದವಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ. ವಿಷಯ: ರಾಜನೀತಿ ನಿರ್ದೇಶಕ ತತ್ವ ರಾಷ್ಟ್ರ ನಿರ್ಮಾಣದ ಮೂಲ ಸತ್ವ ಅಥವಾ ಮಾನವ ಹಕ್ಕುಗಳ ಅನುಷ್ಠಾನದಲ್ಲಿ ವಿಶ್ವಶಾಂತಿಯ ಸಾಧ್ಯತೆಗಳು. ನಗದು ಬಹುಮಾನ ರೂ. 3,000, ರೂ. 2000 ಮತ್ತು ರೂ. 1,000 ಹಾಗೂ ಅಭಿನಂದನಾ ಪತ್ರ ನೀಡಲಾಗುವುದು.

ಇಂದಿನಿಂದ ಈವಿವಿಯಿಂದ ಪ್ರಫುಲ್ಲಿತ ಮನಸ್ಸಿಗಾಗಿ ದಿವ್ಯಗುಣಗಳ ಧ್ಯಾನ

ಮೈಸೂರು,ನ.25–ನಗರದ ಯಾದವಗಿರಿ 2ನೇ ಮುಖ್ಯರಸ್ತೆಯಲ್ಲಿರುವ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದಲ್ಲಿ ಮಡಿಕೇರಿ ಹಿರಿಯ ರಾಜಯೋಗ ಶಿಕ್ಷಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಧನಲಕ್ಷ್ಮೀ ಅವರಿಂದ ನವೆಂಬರ್ 26ರಿಂದ ಡಿ.3ರವರೆಗೆ 'ಪ್ರಫುಲ್ಲಿತ ಮನಸ್ಸಿಗಾಗಿ ದಿವ್ಯಗುಣಗಳ ಧ್ಯಾನ' ಶಿಬಿರವನ್ನು ಆಯೋಜಿಸಲಾಗಿದೆ. ಬೆಳಗ್ಗೆ 10.30ರಿಂದ 11.30ರವರೆಗೆ ಮಹಿಳೆಯರಿಗಾಗಿ ಹಾಗೂ ಸಂಜೆ 5.30ರಿಂದ 6.30ರವರೆಗೆ ಈ ಶಿಬಿರವನ್ನು ಏರ್ಪಡಿಸಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಎನ್.ಸೌಮ್ಯಶ್ರೀಗೆ ಪಿಹೆಚ್.ಡಿ



ಮೈಸೂರು,ನ.25–ಡಾ.ಎಂ.ಎಸ್.ಶಶಿಕಲಾ ಮತ್ತು ಡಾ.ಕೆ.ಟಿ.ವೀರಮಂಜು ಅವರ ಮಾರ್ಗದರ್ಶನದಲ್ಲಿ ಸೌಮ್ಯಶ್ರೀ ಅವರು ಸೋಲಾರ್ ಎನರ್ಜಿ ಇಂಟಿಗ್ರೇಟೆಡ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘ:** ಕನ್ನಡ ರಾಜ್ಯೋತ್ಸವ, ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 8.30ಕ್ಕೆ ಧ್ವಜಾರೋಹಣ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಮುಖ್ಯ ಅತಿಥಿಗಳು: ವಿವಿಪುರಂ ಇನ್ಸ್‌ಪೆಕ್ಟರ್ ಎಂ.ಆರ್.ಲವ, ವಕೀಲ ಎಸ್.ಭೈರಪ್ಪ, ಶೃಂಗಾರ ಸಂಜೀವ ಶೆಟ್ಟಿ, ಎಂ.ಬಿ.ಜಯಶಂಕರ್, ಡಾ.ಎನ್.ರಮೇಶ್, ಸಂಜೆ 6.30ಕ್ಕೆ ಸನ್ಮಾನ ಕಾರ್ಯಕ್ರಮ, ಉಪಸ್ಥಿತರು: ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ:ಚೆಲುವಾಂಬ ಪಾರ್ಕ್ ಆವರಣ.

■ **ಪ್ಯಾಲೇಸ್ ಸ್ಪೋರ್ಟ್ಸ್ ಕ್ಲಬ್:** ಹಿರಿಯ ಪ್ರಾಥಮಿಕ ಶಾಲಾ ಬಾಲಕ, ಬಾಲಕಿಯರ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿ, ಅಧ್ಯಕ್ಷತೆ: ಶಾಸಕ ಜಿ.ಡಿ.ಹರೀಶ್‌ಗೌಡ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮಾಜಿ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಮಾಜಿ ಸದಸ್ಯ ಎಂ.ಸಿ.ರಮೇಶ್, ಕ್ಲಬ್ ಉಪಾಧ್ಯಕ್ಷ ಎಂ.ಎನ್.ರಮೇಶ್, ಸ್ಥಳ: ವಿವೇಕಾನಂದ ಕ್ರೀಡಾಂಗಣ, ಕುವೆಂಪುನಗರ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕಣ್ಣು ಕೆಂಪಾಗುವುದು, ಕಣ್ಣಿನಿಂದ ನೀರು ಸುರಿಯುವುದು, ಕಣ್ಣು ನೋವು, ಅರ್ಧ ತಲೆನೋವಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಸಿಎಸ್‌ಐಆರ್, ಸಿಎಫ್‌ಟಿಆರ್‌ಐ ಎಸ್‌ಸಿ, ಎಸ್‌ಟಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ :** ಸಂವಿಧಾನ ದಿನಾಚರಣೆ, ಮುಖ್ಯ ಅತಿಥಿಗಳು: ಡಾ.ಎಂ.ಉಮಾಪತಿ, ಅಧ್ಯಕ್ಷತೆ: ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಉಪಸ್ಥಿತರು : ಅಸೋಸಿಯೇಷನ್ ಅಧ್ಯಕ್ಷ ಶಿವಸ್ವಾಮಿ, ಬಿ.ಎಸ್. ರಾಮಪ್ರಸಾದ್, ಸ್ಥಳ: ಅಸೆಂಬ್ಲಿ ಹಾಲ್, ಸಿಎಫ್‌ಟಿಆರ್‌ಐ, ಬೆಳಗ್ಗೆ 10ಕ್ಕೆ.

■ **ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ:** ಕನ್ನಡ ರಾಜ್ಯೋತ್ಸವ, ಸಂವಿಧಾನ ದಿನಾಚರಣೆ, ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು, ಅಧ್ಯಕ್ಷತೆ: ಮಾತಾಶ್ರೀ ಭೈರವೇಶ್ವರಿ ತ್ರೀಧಾಮ, ಉದ್ಘಾಟನೆ: ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಮುಖ್ಯ ಅತಿಥಿಗಳು: ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಿ.ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ವಿ.ಜ್ಯೋತಿ, ಡಿ.ಮೋಹನ್ ಎಸ್.ಸುದರ್ಶನ್, ಡಾ.ಎಂ.ಜಿ.ಆರ್.ಅರಸ್, ಸ್ಥಳ: ಅಂಧ ಮಕ್ಕ ಸರ್ಕಾರಿ ಪಾಠಶಾಲೆ ಆವರಣ, ತಿಲಕ್‌ನಗರ, ಬೆಳಗ್ಗೆ 10ರಿಂದ.

■ **ಶ್ರೀ ಗೊಮ್ಮಟಗಿರಿ ಸೇವಾ ಸಮಿತಿ ಟ್ರಸ್ಟ್:** ಶ್ರೀ ಗೊಮ್ಮಟೇಶ್ವರ ಸ್ವಾಮಿಗೆ 74ನೇ ವಾರ್ಷಿಕ ಪೂಜಾ ಮಹೋತ್ಸವ, ಸಾನ್ನಿಧ್ಯ: ಶ್ರೀ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ, ಶ್ರೀ ಭಾನುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ, ಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ, ಬೆಳಗ್ಗೆ 10ಕ್ಕೆ ಭಗವಾನ್ ಬಾಹುಬಲಿಗೆ 108 ಕಳಸ ಅಭಿಷೇಕ, ಮ. 12ಕ್ಕೆ ಧಾರ್ಮಿಕ ಸಭೆ, ಹೊಸ ಕಟ್ಟಡಗಳ ಉದ್ಘಾಟನೆ, ಸಮುದಾಯ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ, ಸ್ಥಳ: ಶ್ರೀ ಕ್ಷೇತ್ರ ಗೊಮ್ಮಟಗಿರಿ, ಬಿಳಿಕೆರೆ ಹೋಬಳಿ.

■ **ವೆಲ್ತ್ ಓಸಿಯನ್ ಇನ್ಸ್‌ಟಿಟ್ಯೂಟ್:** ವಾರ್ಷಿಕೋತ್ಸವ ಸಮಾರಂಭ, ಉದ್ಘಾಟನೆ: ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಮುಖ್ಯ ಅತಿಥಿಗಳು: ಸಹಾಯಕ ಪೊಲೀಸ್ ಆಯುಕ್ತ ಜಿ.ಎಸ್. ಗಜೇಂದ್ರಪ್ರಸಾದ್, ಜ್ಞಾನಬುತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ, ಅಧ್ಯಕ್ಷತೆ: ವೆಲ್ತ್ ಓಸಿಯನ್ ಇನ್ಸ್‌ಟಿಟ್ಯೂಟ್ ಅಧ್ಯಕ್ಷ ವರದ ಪ್ರಕಾಶ್, ಉಪಸ್ಥಿತರು: ಉದಯ್ ಶಂಕರ್, ಎಸ್.ಟಿ. ರಾಮು, ಸಿ.ಶಿವನಂಜ ಶೆಟ್ಟಿ, ವರದ ಪ್ರಶಾಂತ್, ಪುಟ್ಟ ಶ್ರೀನಿವಾಸ, ಸ್ಥಳ: ಮಹಾರಾಜ ಪಿಯು ಕಾಲೇಜು, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಗೋಪಾಲಸ್ವಾಮಿ ಶಿಶುವಿಹಾರ ಸ್ವತಂತ್ರ ಪಿಯು ಕಾಲೇಜು:** ಬೆರಗು–2023 ವಿಜ್ಞಾನ ಪ್ರದರ್ಶನ, ಸ್ಥಳ: ಜಿಎಸ್‌ಐ ಪಿಯು ಕಾಲೇಜು, ಬೆಳಗ್ಗೆ 10.30ಕ್ಕೆ.



ಇಂದಿನ ಪಂಚಾಂಗ

26.11.2023 ಭಾನುವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಭರಣಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಸೇಂಟ್ ಫಿಲೋಮಿನಾ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಭಾರತದ ಸಂವಿಧಾನ ಮತ್ತು ಸಮಕಾಲೀನ ಸಮಾಜ ಕುರಿತು ಎಸ್.ಆರ್.ಹಿರೇಮಠ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ನಿವೃತ್ತ ಮೇಜರ್ ಜನರಲ್ ಡಾ.ಎಸ್.ಜಿ.ಒಂಬತ್ಕೆರೆ, ಸ್ಥಳ: ಡಾ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಸೇನೆ:** ಕನ್ನಡ ರಾಜ್ಯೋತ್ಸವ ಸಮಾರಂಭ, ಉದ್ಘಾಟನೆ: ಕನ್ನಡ ಸೇನೆ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಪ್ರಾಸ್ತಾವಿಕ ನುಡಿ: ಹೆಚ್.ಸಿ.ಮಂಜುನಾಥ್, ಸ್ಥಳ: ಅಂಬೇಡ್ಕರ್ ಸಮುದಾಯ ಭವನ, ರಮಾಬಾಯಿನಗರ, ಬೆಳಗ್ಗೆ 11ಕ್ಕೆ.

■ **ಮೈಸೂರು ನಗರ ಪಾತ್ರೆ ವ್ಯಾಪಾರಿಗಳ ಸಂಘ:** ಕನ್ನಡ ರಾಜ್ಯೋತ್ಸವ ಸಮಾರಂಭ, ಧ್ವಜಾರೋಹಣ: ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಶಾಸಕ ಕೆ.ಹರೀಶ್‌ಗೌಡ, ಡಾ.ಶುಶ್ರುತಗೌಡ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ.ತುಕಾರಾಂ, ಸ್ಥಳ: ರವೆ ಬೀದಿ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಕನ್ನಡ ರಾಜ್ಯೋತ್ಸವ ಸಮಾರಂಭ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ: ಶಾಸಕ ಡಾ.ಡಿ.ತಿಮ್ಮಯ್ಯ, ಮುಖ್ಯ ಅತಿಥಿಗಳು: ಪಾಲಿಕೆ ಆಯುಕ್ತ ಡಾ.ಆಶಾದ್ ಉರ್ ರೆಹಮಾನ್ ಷರೀಫ್, ಸ್ಥಳ: ಕನ್ನಡ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್, ಎಂಎಂಸಿ ಮತ್ತು ಆರ್‌ಐ:** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣ, ಪ್ರತಿಮೆ ಅನಾವರಣ: ಮಹಾರಾಣಿ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಅಧ್ಯಕ್ಷತೆ: ಮೈಸೂರು ಮೆಡಿಕಲ್ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದ ಗೌರವ ಅಧ್ಯಕ್ಷ ಡಾ.ಸಿ.ಡಿ.ಶ್ರೀನಿವಾಸಮೂರ್ತಿ, ವಿಶೇಷ ಆಹ್ವಾನಿತರು: ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಡಾ.ಬಿ. ಬಸವನಗೌಡಪ್ಪ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪೂರ್ವ ಅಧ್ಯಕ್ಷ ಡಾ. ಪ್ರಧಾನ್ ಗುರುದತ್ತ, ವಿದೇಶ ವ್ಯವಹಾರಗಳ ಸಚಿವಾಲಯ ಜಂಟಿ ಕಾರ್ಯದರ್ಶಿ ಡಾ.ಕೆ.ಜೆ.ಶ್ರೀನಿವಾಸ, ಡಾ.ಬಿ.ವಿ.ವೇಣುಗೋಪಾಲ್, ಸಂಸ್ಕೃತ ವಿದ್ವಾನ್ ಡಾ.ಎಚ್.ವಿ.ನಾಗರಾಜರಾವ್, ಆದಿಚುಂಚನಗಿರಿ ವಿವಿ ಕುಲಪತಿ ಡಾ. ಎಂ.ಎ.ಶೇಖರ್, ಡಾ.ಸಿ.ಜಿ.ನರಸಿಂಹನ್, ಮೈಸೂರು ಅರಮನೆ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ರಾಜೀವ್ ಗಾಂಧಿ ವೈದ್ಯಕೀಯ ವಿವಿ ಕುಲಪತಿ ಡಾ.ಎಂ.ಕೆ.ರಮೇಶ್, ಪ್ರಸಾರಾಂಗ ನಿವೃತ್ತ ಉಪನಿರ್ದೇಶಕ ಬಾ.ವೇ. ಶ್ರೀಧರ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಡಾ.ದಿನೇಶ್, ಡಾ.ಎಂ.ಜಿ.ಆರ್. ಅರಸು, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಆವರಣ, ಬೆಳಗ್ಗೆ 11ಕ್ಕೆ

■ **ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವ:** ವಾರ್ಷಿಕೋತ್ಸವ ಮತ್ತು ಕನ್ನಡ ರಾಜ್ಯೋತ್ಸವ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಪ್ರಾಸ್ತಾವಿಕ ನುಡಿ: ಸಂಘದ ರಾಜ್ಯಾಧ್ಯಕ್ಷ ಟಿ.ವಿ.ಅರುಣ್‌ಕುಮಾರ್, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಮೇಯರ್ ಶಿವಕುಮಾರ್, ಸ್ಮರಣ ಸಂಚಿಕೆ ಬಿಡುಗಡೆ: ಸಚಿವ ಎನ್.ಚಲುವರಾಯಸ್ವಾಮಿ, ಉಪಸ್ಥಿತರು: ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕ ಜಿ.ಟಿ.ದೇವೇಗೌಡ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಜ್ಯೋತಿ ಶಂಕರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ –ಸೈಬರ್ ಸುರಕ್ಷೆ:ವಾರದ ಮಾತು, ಪ್ರಸ್ತುತಿ: ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಪದಸಂಸ್ಕೃತಿ–ಪ್ರಸ್ತುತಿ–ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ ಪಂಚಕರ್ಮ ಚಿಕಿತ್ಸೆಯ ಮಹತ್ವ ಕುರಿತು ಡಾ. ಸ್ವರ್ಣಾ ಎಚ್.ಎಸ್. ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ– ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ, ಬಹುಮುಖ ಪ್ರತಿಭೆ ವಿಸ್ಮಯ ಪರಿಚಯ, ಪ್ರಸ್ತುತಿ–ಎಂ.ಎಸ್. ಭಾರತಿ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಮನದ ಮಾತು, ನಂತರ ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ: 12.30 ದೇವರನಾಮ–ಎಂ.ರಾಘವೇಂದ್ರ, 12.45 ಜನಪದಸಂಗೀತ–ಚಿಕ್ಕಮಾದಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ – ಕೆ.ಆರ್.ಹರ್ಷದೀಪ್, 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಶೂರ ಪದ್ಮಾಸುರ ಕಾಳಗ, ಪ್ರಸ್ತುತಿ–ನೀಲಾವರ ಲಕ್ಷ್ಮೀನಾರಾಯಣ ರಾವ್ ಮತ್ತು ಬಳಗ, 6.50 ಕೃಷಿರಂಗ–ಹೈನು ರಾಸುಗಳಿಗೆ ರಸಮೇವು ಪೂರೈಕೆ ಕುರಿತು ಹುಣಸೂರು ತಾಲೂಕು ಕಟ್ಟೆಮಳಲವಾಡಿಯ ಪಶು ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ.ಪಿ.ಆರ್.ಭರತ್‌ಕುಮಾರ್ ಅವರೊಂದಿಗೆ ಸಂದರ್ಶನ, 8.00 ಮನ್ ಕಿ ಬಾತ್–ದೇಶದ ಜನತೆ ಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ಕುಮುದ್ ದಿವಾನ್–ಲಘು ಶಾಸ್ತ್ರೀಯ ಗಾಯನ

■ **ಗಿರಿಜನ ಸುರಕ್ಷಾ ವೇದಿಕೆ ಕರ್ನಾಟಕ :** ಬೃಹತ್ ಡಿ–ಲಿಸ್ಟಿಂಗ್ ರ‍್ಯಾಲಿ, ಸ್ಥಳ: ಮಹಾರಾಜ ಹೈಸ್ಕೂಲ್ ಮೈದಾನ, ಮಧ್ಯಾಹ್ನ 1 ರಿಂದ.

■ **ಹಂಸವಾಣಿ ಕನ್ನಡ ಬಳಗ, ಹಂಸವಾಣಿ ಹಿರಿಯ ನಾಗರಿಕರ ಹಿತರಕ್ಷಣಾ ಸಮಿತಿ, ಹಂಸವಾಣಿ ಸ್ತ್ರೀಶಕ್ತಿ ಸ್ವಸಹಾಯ ಸಂಘ:** ಬೆಳಗ್ಗೆ 8ಕ್ಕೆ 68ನೇ ಕನ್ನಡ ರಾಜ್ಯೋತ್ಸವ, ಧ್ವಜಾರೋಹಣ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಉದ್ಘಾಟನೆ: ಡಾ.ಹೆಚ್.ಆರ್. ತಿಮ್ಮೇಗೌಡ, ಮುಖ್ಯ ಭಾಷಣ: ಸಾಹಿತಿ ಡಾ.ಚಿಕ್ಕಮಾದು, ಮುಖ್ಯ ಅತಿಥಿಗಳು: ಯುವ ಮುಖಂಡ ರಾಮೇಗೌಡ, ರಮ್ಮನಹಳ್ಳಿ ಪ.ಪಂ. ಮುಖ್ಯಾಧಿಕಾರಿ ನರಸಿಂಹಮೂರ್ತಿ, ಮಂಜುಳ, ಪ್ರವೀಣ್, ಅಧ್ಯಕ್ಷತೆ: ಹಂಸವಾಣಿ ಕನ್ನಡ ಬಳಗ ಅಧ್ಯಕ್ಷ ಕೆ.ಸಿ.ಪ್ರಶಾಂತ್, ಎಲ್.ಕೃಷ್ಣರಂಗರಾಜು, ಶಿವಮ್ಮ, ಸಂಜೆ 4ರಿಂದ ವಿವಿಧ ಮನರಂಜನೆ ಕಾರ್ಯಕ್ರಮ, ಸಂಜೆ 7ಕ್ಕೆ ಸುಗಮ ಸಂಗೀತ, ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬ ಕಾರ್ಯಕ್ರಮ, ಅಧ್ಯಕ್ಷತೆ : ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ. ಹರೀಶ್‌ಗೌಡ, ಸ್ಥಳ: ಹಂಸಾ ಪಾರ್ಕ್, ಹಂಸವೃತ್ತದ ಮುಖ್ಯ ರಸ್ತೆ, ಹಂಚ್ಯಾ–ಸಾತಗಳ್ಳಿ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಸ್ವಾಸ್ಥ್ಯ ಕಾರ್ಯಕ್ರಮ, ಕನ್ನಡ ರಾಜ್ಯೋತ್ಸವ ಆಚರಣೆ, ಉಪಸ್ಥಿತರು : ಜನಪದ ಕಲಾವಿದ ದೇವಾನಂದ ವರಪ್ರಸಾದ್, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಸಂಜೆ 4.30ಕ್ಕೆ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** 46ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, ಸಂಜೆ 8ಕ್ಕೆ ಶ್ರೀ ಮಲೆ ಮಹದೇಶ್ವರ ಕಂಸಾಳೆ ತಂಡದವರಿಂದ ಕಂಸಾಳೆ ಪದ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಪುಣ್ಯಕೋಟಿ ಸೇವಾ ಟ್ರಸ್ಟ್:** ಕನ್ನಡ ರಾಜ್ಯೋತ್ಸವ, ಸಾನ್ನಿಧ್ಯ: ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಜಿ.ಡಿ.ಹರೀಶ್‌ಗೌಡ, ಡಾ.ಸುಶ್ರುತ್‌ಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಯಮಿ ಕೆ.ಮಂಜುನಾಥ್, ಅಧ್ಯಕ್ಷತೆ: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸ್ಥಳ: ಯೋಗಾನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ, ಸಂಜೆ 5ಕ್ಕೆ.

■ **ಅಕ್ಷ ಭಾರತ್ ಮಿಷನ್:** ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ, ಅಧ್ಯಕ್ಷತೆ: ಖಜಾನೆ ಇಲಾಖೆಯ ರಘು, ಉದ್ಘಾಟನೆ: ಸಾಹಿತಿ ಡಾ.ಭೇರ್ಯ ರಾಮಕುಮಾರ್, ಮುಖ್ಯ ಅತಿಥಿಗಳು: ಸಾಹಿತಿ ಕೂಡ್ಲಾಪುರ ಮಹದೇವ ನಾಯಕ್, ಸ್ಥಳ: ಅಜಿತ ನೆಲೆ ಫೌಂಡೇಷನ್, ಬೋಗಾದಿ, ಸಂಜೆ 5.30ಕ್ಕೆ

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** ಕಾರ್ತಿಕ ದೀಪಂ 23ನೇ ವರ್ಷದ ಲಕ್ಷ ದೀಪೋತ್ಸವ, ಬೆಳಗ್ಗೆ 6.30ಕ್ಕೆ ಅಭಿಷೇಕ, ಪಂಚಾಮೃತ ಅಭಿಷೇಕ, ಗಂಧಾಭಿಷೇಕ, ವಿಭೂತಿ ಅಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಶ್ರೀಸುಬ್ರಹ್ಮಣ್ಯಸ್ವಾಮಿ ಉತ್ಸವ, ಸಂಜೆ 6.30ಕ್ಕೆ ಲಕ್ಷ ದೀಪೋತ್ಸವ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ.

■ **ಕಲಾ ಸುರುಚಿ:** ವಿಶ್ವನಾಥ ಮಿರ್ಲೆ ನೆನಪಿನ ಮಕ್ಕಳ ಇಂಗ್ಲಿಷ್ ನಾಟಕೋತ್ಸವ, ಗೋಪಾಲಸ್ವಾಮಿ ಶಿಶುವಿಹಾರ ಮತ್ತು ಗೀತಾ ಶಿಶು ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ಇನ್ ದಿ ಕಿಂಗ್‌ಡಂ ಆಫ್ ಫೂಲ್ಸ್ ಮತ್ತು ಉ ವಿಲ್ ಬಿ ನೈಟ್‌ತೋ? ನಾಟಕ ಪ್ರದರ್ಶನ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಡಾ.ಪುಟ್ಟರಾಜ ಗವಾಯಿಗಳ ಕ್ರೀಡಾಂಗಣದ ಸಂಘ ಸಂಸ್ಥೆಗಳ ಒಕ್ಕೂಟ:** ಶಾಂತಮ್ಮ ವಡಿವೇಲು, ಶಾರದಮ್ಮ ಈಶ್ವರ್ ಅವರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಪುಟ್ಟರಾಜ ಗವಾಯಿಗಳ ಕ್ರೀಡಾಂಗಣ, ಸಂಜೆ 6ಕ್ಕೆ.

■ **ಅಭಿವ್ಯಕ್ತಿಕಲಾ ಮತ್ತು ಸಾಂಸ್ಕೃತಿಕ ಕೇಂದ್ರ:** ಅಭಿವ್ಯಕ್ತಿ ಹಬ್ಬ, ಉಪಸ್ಥಿತರು: ಡಾ.ರೋಹಿತ್ ಈಶ್ವರ್, ಜಯಲಕ್ಷ್ಮಿದೇವಿ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ನಾಯಕ, ವೈಭವ್ ಅರೇಕರ್ ಅವರಿಂದ ಭರತನಾಟ್ಯ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.15ಕ್ಕೆ.

■ **ರಾಗ ವೈಭವ:** ಕು. ಸೂರ್ಯಗಾಯತ್ರಿ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಪಿ.ವಿ.ಸನೀಲ್–ವಯೋಲಿನ್, ವಿದ್ವಾನ್ ಪಿ.ವಿ. ಅನಿಲ್–ಮೃದಂಗ, ವಿದ್ವಾನ್ ಕೃಷ್ಣಕುಮಾರ್–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು ವಾಸುದೇವಾಚಾರ್ಯ ಭವನ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಆರಾತ್ರಿಕ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ:** ಚಾಮರಾಜನಗರದ ಅಭ್ಯಾಸಿ ಟ್ರಸ್ಟ್ ಕಲಾವಿದರಿಂದ ಕಂಡಾಯದ ಕೋಳಿ ನಾಟಕ ಪ್ರದರ್ಶನ, ನಿರ್ದೇಶನ: ಕಿರಣ್ ಗಗ್ರಿ, ರಚನೆ: ಮಂಜು ಕೋಡಿಉಗನೆ, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ

■ **ರಂಗಾಯಣ:** ಸುಬ್ಬಯ್ಯನಾಯ್ಡು ಹಾಗೂ ನಾಗರತ್ನಮ್ಮ ಹವ್ಯಾಸಿ ರಂಗ ತರಬೇತಿ ಶಿಬಿರಾರ್ಥಿಗಳಿಂದ ನಾಯೀಕತೆ ನಾಟಕ ಪ್ರದರ್ಶನ, ನಿರ್ದೇಶನ: ಸಂತೋಷ್‌ಕುಮಾರ್ ಕುಸನೂರ, ರಚನೆ: ಡಾ.ಚಂದ್ರಶೇಖರ ಕಂಬಾರ, ಸಂಗೀತ: ರಾಮಚಂದ್ರ ಹಡಪದ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ:** ಶಿವದೀಪೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಂಜೆ 6ಕ್ಕೆ ಪ್ರಾರ್ಥನೆ, ರಾತ್ರಿ 7ಕ್ಕೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಉಪನ್ಯಾಸ, ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ, ಸ್ಥಳ: ಸುತ್ತೂರು ಶ್ರೀಕ್ಷೇತ್ರ.

ಕೆ.ಆರ್.ನಗರದಲ್ಲಿಂದು

■ **ಮೈಸೂರು ಯೋಗ ಅಸೋಸಿಯೇಷನ್:** ಕರ್ನಾಟಕ ಯೋಗ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಅಸೋಸಿಯೇಷನ್ ಅಧ್ಯಕ್ಷ ಟಿ.ಎ.ಪ್ರಕಾಶ್, ಉದ್ಘಾಟನೆ: ಅಸೋಸಿಯೇಷನ್ ಗೌರವ ಖಜಾಂಚಿ ರಮೇಶ್, ಪ್ರಶಸ್ತಿ ಪುರಸ್ಕೃತರು: ಬಿ.ಜಿ.ಅಮರನಾಥ, ಮುಖ್ಯ ಅತಿಥಿಗಳು: ಶಿವಪ್ರಕಾಶ್ ಗುರೂಜಿ, ಪತಂಜಲಿ ಯೋಗಾಶ್ರಮ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಡಿ.ಟಿ.ಕೆ.ಪ್ರಸಾದ್, ಸ್ಥಳ: ಪತಂಜಲಿ ಯೋಗ ಭವನ, ಕೆ.ಆರ್.ನಗರ, ಬೆಳಗ್ಗೆ 11.30ಕ್ಕೆ.

ಮೈಸೂರು ಮಿತ್ರ ಭಾನುವಾರ 26 ನವೆಂಬರ್ 2023

ಬೆಂಗಳೂರು 'ಕಂಬಳ' ಆರಂಭ





ಬೆಂಗಳೂರು: ಇತಿಹಾಸದಲ್ಲೇ ಮೊದಲ ಬಾರಿಗೆ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಕರಾವಳಿ ಕ್ರೀಡೆ ಕಂಬಳವನ್ನು ಆಯೋಜಿಸಿದ್ದು, ಮಳೆ ತಂಪೆರೆದಿದೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ತೆರೆದ ಆವರಣದಲ್ಲಿ ನಿರ್ಮಿಸಲಾಗಿರುವ 155 ಮೀಟರ್ ಗಟ್ಟಿ ಕೆರೆ ಕೋಣಗಳಿಗೆ ಓಡಲು ಅತ್ಯಂತ ಸೂಕ್ತವಾಗಿದೆ ಎಂಬುದನ್ನು ದೃಢಪಡಿಸಿಕೊಳ್ಳಲು ಕೋಣಗಳನ್ನು ಸಾಂಕೇತಿಕವಾಗಿ ಓಡಿಸಲಾಯಿತು. ಕಂಬಳ ಆಯೋಜನೆ ವೇಳೆ ಜಿಟಿ ಜಿಟಿ ಮಳೆಯಾಗಿತ್ತು.

ಮಧ್ಯಾಹ್ನ ಏಕಾಏಕಿ ಸುರಿದ ಗಾಳಿ ಮಳೆಗೆ ಬಯಲಲ್ಲಿ ನಿಂತಿದ್ದ ಜನತೆ ರಕ್ಷಣೆಗೆ ಓಡಿದರು. ಮಳೆ ಬಂದರೂ ಕಂಬಳ ಕೂಟ ಮಾತ್ರ ಸರಾಗವಾಗಿ ನಡೆಯುತ್ತಿದೆ.

ಉದ್ಘಾಟನಾ ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಂಸದ ಸದಾನಂದಗೌಡ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಎಸ್.ಆರ್. ವಿಶ್ವನಾಥ್ ಹಾಗೂ ಬೆಂಗಳೂರು ಕಂಬಳ ಸಮಿತಿ ಅಧ್ಯಕ್ಷ ಅಶೋಕ್‌ಕುಮಾರ್ ರೈ ಸಾಕ್ಷಿಯಾದರು. ಕಂಬಳ ಕೆರೆಗೆ ಡಾ. ಪುನಿತ್ ರಾಜ್‌ಕುಮಾರ್ ಹೆಸರಿಡಲಾಗಿದ್ದು, ಪತ್ನಿ ಅಶ್ವಿನಿ ಪುನಿತ್ ರಾಜ್‌ಕುಮಾರ್ ಅವರು ದೀಪ ಬೆಳಗುವ ಮೂಲಕ ಕೋಣಗಳ ಓಟಕ್ಕೆ ಚಾಲನೆ ನೀಡಿದರು.

ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಕಂಬಳ ಪಂದ್ಯಾವಳಿಯನ್ನು ವೀಕ್ಷಿಸಲು ಲಕ್ಷಾಂತರ ಜನರು ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪೊಲೀಸರ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಅಲ್ಲದೆ ಸಂಚಾರಿ ಪೊಲೀಸರು, ಸಾರ್ವಜನಿಕರು ಕಟ್ಟುನಿಟ್ಟಾಗಿ ಟ್ರಾಫಿಕ್ ನಿಯಮ ಪಾಲಿಸುವಂತೆ ನೋಡಿಕೊಳ್ಳುತ್ತಿದ್ದಾರೆ. ಕಂಬಳ ವೀಕ್ಷಣೆಗೆ ಬರುವ ಜನರು ಗೇಟ್ ನಂಬರ್ 1, 2, 3 ಹಾಗೂ 4ರ ಮೂಲಕ ಪ್ರವೇಶಿಸಲು ಅವಕಾಶ ನೀಡಲಾಗಿದೆ.

ಕಂಬಳ ವೀಕ್ಷಿಸಲು ಬರುವ ವಿವಿಐಪಿಗಳು ಫನ್ ವರ್ಲ್ಡ್ ಕಡೆಯಿಂದ ಪ್ರವೇಶಿಸಬೇಕು. ಯಾವುದೇ ಟಿಕೆಟ್ ಇಲ್ಲದೆ ಉಚಿತವಾಗಿ ಪ್ರವೇಶದ ವ್ಯವಸ್ಥೆ ಮಾಡಲಾಗಿದೆ. ಸಂಜೆ 6:30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಂಬಳ ಮೈದಾನಕ್ಕೆ ಭೇಟಿ ನೀಡಿದ್ದರು. ಕರಾವಳಿ ಕಂಬಳ ಉತ್ಸವಕ್ಕೆ ಅನುಷ್ಕಾ ಶೆಟ್ಟಿ, ಪೂಜಾ ಹೆಗ್ಡೆ, ನಟ ದರ್ಶನ್ ಕಾಂತಾರ ಹೀರೋ ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ, ಉಪೇಂದ್ರ, ಶಿವಣ್ಣ, ಆಶಿಶ್ ಬಲ್ಲಾಳ್, ರಾಜ್ ಬಿ ಶೆಟ್ಟಿ, ಮೇಘಾ ಶೆಟ್ಟಿ ಸೇರಿದಂತೆ ಹಲವರು ಭಾಗಿಯಾಗುತ್ತಿದ್ದಾರೆ. ಕಂಬಳ ಇಂದು ಮತ್ತು ನಾಳೆ ನಡೆಯಲಿದೆ.

ಗೆದ್ದ ಕೋಣಗಳಿಗೆ ಬಹುಮಾನ

ಪ್ರಥಮ ಬಹುಮಾನ 16 ಗ್ರಾಂ ಚಿನ್ನ ಹಾಗೂ 1 ಲಕ್ಷ ನಗದು, ಎರಡನೇ ಬಹುಮಾನ 8 ಗ್ರಾಂ ಚಿನ್ನ ಹಾಗೂ 50,000 ನಗದು, 3ನೇ ಬಹುಮಾನ 4 ಗ್ರಾಂ ಚಿನ್ನ ಹಾಗೂ 25,000 ನಗದು

ಆಯೋಜಕರಿಗೆ ದಂಡ ವಿಧಿಸಿದ ಬಿಬಿಎಂಪಿ!

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ದಕ್ಷಿಣ ಕನ್ನಡದ ಸಾಂಪ್ರದಾಯಿಕ ಕ್ರೀಡೆ ಕಂಬಳದ ಆಯೋಜಕರಿಗೆ ಬಿಬಿಎಂಪಿಯಿಂದ ಆಘಾತ ಎದುರಾಗಿದೆ.

ಅರಮನೆ ಮೈದಾನದ ಮುಂದೆ ಕಂಬಳಕ್ಕೆ ಶುಭಕೋರಿ ಫ್ಲೆಕ್ಸ್ ಅನ್ನು ಅಳವಡಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ದಂಡ ವಿಧಿಸಿದೆ.

ನಗರದಲ್ಲಿ ಫ್ಲೆಕ್ಸ್, ಬ್ಯಾನರ್ ಅಳವಡಿಸುವುದಕ್ಕೆ ನಿಷೇಧವಿದ್ದರೂ ಫ್ಲೆಕ್ಸ್ ಅಳವಡಿಸಿದ್ದಕ್ಕಾಗಿ ದಂಡ ವಿಧಿಸಲಾಗಿದೆ. ಈ ಸಂಬಂಧ ಸದಾಶಿವನಗರ ಠಾಣೆಯಲ್ಲಿ ದೂರು ದಾಖಲಾದ ಹಿನ್ನೆಲೆ ಅರಮನೆ ಮೈದಾನದ ಸುತ್ತಮುತ್ತ ಹಾಕಿದ್ದ ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸಲಾಗಿದೆ. ಬಿಬಿಎಂಪಿ ಅಧಿಕಾರಿಗಳು ಕಂಬಳ ಆಯೋಜಕರಿಗೆ 50 ಸಾವಿರ ದಂಡ ವಿಧಿಸಿದ್ದಾರೆ.

ಮೈಸೂರಲ್ಲಿ 'ಅಂತರ ಧ್ವನಿ ನಾಯಕತ್ವ' ಸಮ್ಮೇಳನ



ಮೈಸೂರು,ನ.25 (ಎಂಟಿವೈ)– ಅಂತರರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆ ಮೈಸೂರಲ್ಲಿ ಶನಿವಾರ ಆಯೋಜಿಸಿದ್ದ 'ಅಂತರ ಧ್ವನಿ ನಾಯಕತ್ವ ಸಮ್ಮೇಳನ'ದಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ಅಂತರಧ್ವನಿ ನಾಯಕತ್ವ ಸಮ್ಮೇಳನವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿ, ಕಾರ್ಯಕ್ರಮವನ್ನು ವೀಕ್ಷಿಸಿದರು.

ಸಮಾವೇಶದಲ್ಲಿ ಅಂತರಧ್ವನಿ ಸಂಸ್ಥಾಪಕ, ಹೆಚ್‌ಸಿಜಿ ಕ್ಯಾನ್ಸರ್ ಕೇಂದ್ರದ ಕಾರ್ಯಾಧ್ಯಕ್ಷ ಡಾ.ಬಿ.ಎಸ್.ಅಜಯ್‌ಕುಮಾರ್ ಮಾತನಾಡಿ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಮುಂದೆ ಬರಬೇಕು. ನಮ್ಮದು ಪುರುಷ ಪ್ರಧಾನ ಸಮಾಜ. ನಾವು ಮಹಿಳೆಯರಿಗೆ ಹಕ್ಕುಗಳನ್ನು ನೀಡುತ್ತಿಲ್ಲ. ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ದೇಶದಲ್ಲಿ ಎಲ್ಲರೂ ಸಮಾನರು ಮತ್ತು ಸಮಾನವಾಗಿ ಕಾಣಬೇಕು. ಮಹಿಳೆಯರಿಗೆ ಸಮಾನ ಹಕ್ಕು, ಅವಕಾಶ ಮತ್ತು ಸೌಲಭ್ಯಗಳು ಸಿಗುವಂತಾಗಬೇಕು. ಯಾವುದೇ ವಿಚಾರದಲ್ಲಿ ತಾರತಮ್ಯ ನೀತಿ ಅನುಸರಿಸಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸ್ವಚ್ಛ ಸರ್ವೇಕ್ಷಣ್ 2023ರ ಬ್ರಾಂಡ್ ಅಂಬಾಸಿಡರ್ ಫಾಲ್ಕಿಯಾ ಖಾನ್, ಗುಂಡ್ಲುಪೇಟೆಯ ಜಯಶ್ರೀ ರಾಜು, ಗಣರಾಜ್ಯೋತ್ಸವ ಪರೇಡ್‌ನಲ್ಲಿ ಎನ್‌ಸಿಸಿ ತಂಡಕ್ಕೆ ಕಮಾಂಡರ್ ಆಗಿದ್ದ ಪ್ರಮೀಳಾ ಕುನ್ವರ್, ಸೋಮಹಳ್ಳಿ ಗ್ರಾ.ಪಂ. ಮಾಜಿ ಸದಸ್ಯೆ ಮಣಿ ತಮ್ಮ ಅನುಭವ ಹಂಚಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಕ್ಯಾಬಿನೆಟ್ ದರ್ಜೆ ಮಾಜಿ ಜಂಟಿ ಕಾರ್ಯದರ್ಶಿ ರವಿ, ಮೈಸೂರಿನ ಸೈಬರ್ ಕ್ರೈಂ ಟ್ರೈನರ್ ಎಸ್.ಲಿಂಗರಾಜು ವಿಷಯ ಕುರಿತು ಮಾತನಾಡಿದರು.

ಶಾಸಕರಿಂದ ಕುಂದುಕೊರತೆ ಆಲಿಕೆ



ಮೈಸೂರು,ನ.25(ಎಂಕೆ)– ಮೈಸೂರಿನ ವಾರ್ಡ್ ನಂ.59ರ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ಪಾದಯಾತ್ರೆ ನಡೆಸಿದ ಶಾಸಕ ಟಿ.ಎಸ್.ಶ್ರೀವತ್ಸ ಸಾರ್ವಜನಿಕರ ಕುಂದು–ಕೊರತೆ ಆಲಿಸಿದರು.

ಕುವೆಂಪುನಗರದ ವಿವಿಧೆಡೆ, ಕುವೆಂಪು ನಗರ ಬಸ್ ಡಿಪೋ, ನಿಮಿಷಾಂಬ ನಗರ, ಹುಡ್ಕೊ ಹೌಸ್ ಸುತ್ತಮುತ್ತಲಿನ ಮನೆ ಮನೆಗೆ ತೆರಳಿದ ಶಾಸಕರು, ಕುಡಿಯುವ ನೀರು, ಒಳಚರಂಡಿ, ಖಾಲಿ ನಿವೇಶನಗಳ ಸ್ವಚ್ಛತೆ, ಬೀದಿದೀಪ, ಬೀದಿ ನಾಯಿಗಳ ಹಾಗೂ ಮಂಡರ ಹಾವಳಿ ಸೇರಿದಂತೆ ಇನ್ನಿತರೆ ಕುಂದು–ಕೊರತೆಗಳನ್ನು ಆಲಿಸಿದರಲ್ಲದೆ ಸ್ಥಳದಲ್ಲಿಯೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚನೆ ನೀಡಿದರು. ಪಾಲಿಕೆ ಅಧಿಕಾರಿಗಳು, ಸ್ಥಳೀಯ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಪುನರ್ವಸುಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಕೆ.ವಿ.ಹರೀಶ್ ಪ್ರಶಾಂತ್ ಅವರ ಮಾರ್ಗದರ್ಶನದಲ್ಲಿ ಟಿ.ಪಿ.ಪುನರ್ವಸು ಬಯೋಕೆಮಿಸ್ಟ್ರಿ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಾವೇರಿ ನೀರಾವರಿ ನಿಗಮದ ಎಂಡಿಗೆ ಬ್ಲಾಕ್‌ಮೇಲ್ ಪ್ರಕರಣ

ಆರ್‌ಟಿಐ ಕಾರ್ಯಕರ್ತನ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಮೈಸೂರು,ನ.25–ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಬ್ಲಾಕ್‌ಮೇಲ್ ಮಾಡಿದ ಆರೋಪದ ಮೇರೆಗೆ ಬಂಧಿತನಾಗಿರುವ ಆರ್‌ಟಿಐ ಕಾರ್ಯಕರ್ತ ಆನಂದ್ ಮೊದಲಿಯಾರ್ ಅಲಿಯಾಸ್ ಆನಂದ್ ಎಂ.ಕಲ್ಕಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮೈಸೂರಿನ 3ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಭಾಗ್ಯ ಅವರು ವಜಾ ಮಾಡಿದ್ದಾರೆ.

ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಅವರ ಮನೆಗೆ ನಾಲ್ಕೈದು ತಿಂಗಳಿಂದ ಆನಂದ್ ಮೊದಲಿಯಾರ್ ಸತ್ಯಕ್ಕೆ ದೂರವಾದ ವಿಚಾರಗಳೊಂದಿಗೆ ಪತ್ರಗಳನ್ನು ರವಾನಿಸುತ್ತಿದ್ದ. ಇದರಿಂದಾಗಿ ಮಹೇಶ್ ಅವರ ಪತ್ನಿ ನಮ್ರತಾ ಹಾಗೂ ಅವರ ಅಪ್ರಾಪ್ತ ಮಕ್ಕಳು ಆಘಾತಗೊಂಡಿದ್ದರು. ನಂತರ ನಮ್ರತಾ ಅವರು ಪತಿಯನ್ನು ವಿಚಾರಿಸಿದಾಗ, ಆನಂದ್ ಮೊದಲಿಯಾರ್ ತನ್ನನ್ನು ಹಣಕ್ಕಾಗಿ ಪೀಡಿಸುತ್ತಿರುವುದಾಗಿಯೂ, ಹಣ ನೀಡದ ಕಾರಣ ಸತ್ಯಕ್ಕೆ ದೂರವಾದ ವಿಚಾರಗಳೊಂದಿಗೆ ಮನೆ ವಿಳಾಸಕ್ಕೆ ಪತ್ರಗಳನ್ನು ರವಾನಿಸಿದ್ದಲ್ಲದೇ ಮಹೇಶ್, ನಮ್ರತಾ, ಅವರ ತಂದೆ–ತಾಯಿ ಹಾಗೂ ಕುಟುಂಬಗಳಿಗೆ ಸಮಾಜದಲ್ಲಿ ಕೆಟ್ಟ ಅಭಿಪ್ರಾಯ ಬರುವಂತೆ 2–3 ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದಾನೆ ಎಂಬುದು ತಿಳಿದ ಹಿನ್ನೆಲೆಯಲ್ಲಿ ನಮ್ರತಾ ವಿಜಯನಗರ ಠಾಣೆಗೆ ದೂರು ಸಲ್ಲಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಆತ : "ನನ್ನ ಹೆಂಡತಿ ತುಂಬಾ ಆಶಾವಾದಿ"
ಈತ : "ಹೌದಾ! ಅದು ಹೇಗೆ?"
ಆತ : "ಮುಂದಿನ ಜನ್ಮದಲ್ಲಿ ಒಳ್ಳೇ ಗಂಡನನ್ನು ಕರುಣಿಸು ದೇವರೇ ಅಂತಾ ಅವಳು ಈಗ್ಲಿಂದಾನೆ ಉಪವಾಸ, ವ್ರತ, ಪೂಜೆ, ಪುನಸ್ಕಾರದಲ್ಲಿ ತೊಡಗಿದ್ದಾಳೆ"

ಮೈಸೂರು ಮಿತ್ರ

ಭಾನುವಾರ, 26 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಂದು ಹೊಗಳಿಕೆ ಮಾತಿನಿಂದ ಮತ್ತಷ್ಟು ದಿನ ಬದುಕಲು ಶಕ್ತಿ ಬರುತ್ತದೆ.
–ಮಾರ್ಕ್ ಟ್ವೇನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಲಿ ಬಡವಾದರೆ ಹುಲ್ಲು ಮೇಯುವುದೇ?

ನಿಮ್ಮ ಪತ್ರಗಳು

ಸ್ಕೂಟರ್‌ನಲ್ಲಿ ಬಂದರು! ಹಿಗ್ಗಾಮುಗ್ಗಾ ಹೊಡೆದರು!! ಪರಾರಿಯಾದರು!!!

ಮಾನ್ಯರೆ,

ಮೈಸೂರಲ್ಲಿ ಪುಂಡಾಟಕ್ಕೆ ಇದು ತಾಜಾ ಉದಾಹರಣೆ. ಶನಿವಾರ ಮಧ್ಯಾಹ್ನ ಸುಮಾರು 2.50ರ ವೇಳೆಗೆ ಹೆಬ್ಬಾಳು ಅಭಿಷೇಕ್ ಸರ್ಕಲ್ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದ ವ್ಯಕ್ತಿಯೊಬ್ಬರನ್ನು ಸ್ಕೂಟರ್‌ನಲ್ಲಿ ಬಂದು ತಡೆದ ಇಬ್ಬರು, ಏಕಾಏಕಿ ಅವರ ಮೇಲೆ ಹಲ್ಲೆ ಮಾಡಿದರು. ದಿಢೀರ್ ದಾಳಿ ನಡೆಸಿದ್ದನ್ನು ಕಂಡು ಅಲ್ಲಿಯೇ ಬಸ್‌ಗಾಗಿ ಕಾಯುತ್ತಿದ್ದ ಹೆಂಗಸರು–ಮಕ್ಕಳು ಭಯಭೀತ ರಾದರು. ಒಬ್ಬನಂತೂ ಡಿಚ್ಚಿ ಹೊಡೆದು, ಆ ವ್ಯಕ್ತಿಗೆ ಹಿಗ್ಗಾಮುಗ್ಗ ಥಳಿಸಿದ. ಯಾರೊಬ್ಬರೂ ತಡೆಯುವ ಧೈರ್ಯ ಮಾಡಲಿಲ್ಲ. ಜೊತೆಗೆ ಆ ಇಬ್ಬರು ಪುಂಡರ ಬಾಯಿಂದ ಬರುತ್ತಿದ್ದ ಬೈಗುಳ ಮಾನವಂತರು ಕಿವಿ ಮುಚ್ಚಿಕೊಳ್ಳುವಂತಿತ್ತು. ಎಂಟತ್ತು ನಿಮಿಷ ಹೀಗೆ ಹಲ್ಲೆ ನಡೆಸಿ, ಸ್ಕೂಟರ್ ಹತ್ತಿ ಪರಾರಿಯಾದರು. ಆದರೆ, ಹಲ್ಲೆಗೀಡಾದ ವ್ಯಕ್ತಿಯನ್ನು ಅಲ್ಲಿದ್ದವರು ಪ್ರಶ್ನಿಸಿದರೆ 'ಅವರು ಯಾರು? ಏಕೆ ಹೊಡೆದರು ಎಂಬುದು ತಿಳಿಯುತ್ತಿಲ್ಲ' ಎಂದು ನೊಂದು ನುಡಿದರು.

ಮೈಸೂರಲ್ಲಿ ಪುಂಡರ ಹಾವಳಿ ಎಷ್ಟರಮಟ್ಟಿಗೆ ಮೇರೆ ಮೀರಿದೆ ಎಂಬುದಕ್ಕೆ ಇದಕ್ಕಿಂತಲೂ ಸಾಕ್ಷಿ ಬೇಕಾ? ಪೊಲೀಸರು ಕೂಡಲೇ ಈ ವೃತ್ತದಲ್ಲಿನ ಅಂಗಡಿ ಮುಂಗಟ್ಟುಗಳಲ್ಲಿನ ಸಿಸಿ ಕ್ಯಾಮರಾ ತೆಗೆಸಿ, ಪರಿಶೀಲಿಸಿದರೆ ಪೂರ್ಣ ದೃಶ್ಯ, ಮಾಹಿತಿ ಲಭಿಸಲಿದೆ. ಸೂಕ್ತ ಕ್ರಮ ಕೈಗೊಂಡರೆ ಪುಂಡರ ಪುಂಡಾಟಕ್ಕೆ ಬ್ರೇಕ್ ಹಾಕಬಹುದು. –ಪ್ರತ್ಯಕ್ಷದರ್ಶಿ (ಕೋರಿಕೆ ಮೇರೆಗೆ ಹೆಸರು ಪ್ರಕಟಿಸಿಲ್ಲ)

ಶೀಘ್ರವಾಗಿ ಬಲ್ಲಾಳ್ ವೃತ್ತದ ಮೋರಿ ಕಾಮಗಾರಿ ಪೂರ್ಣಗೊಳಿಸಿ



ಮಾನ್ಯರೆ,

ಮೈಸೂರು ನಗರದ ಅಶೋಕ (ಬಲ್ಲಾಳ್) ವೃತ್ತದಲ್ಲಿ ಬಸ್ ನಿಲ್ದಾಣದ ಬಳಿ ಒಳಚರಂಡಿ ದುರಸ್ತಿಗೆಂದು ಚಪ್ಪಡಿ ತೆಗೆದು ಹಾಕಿ 6 ತಿಂಗಳು ಕಳೆಯುತ್ತಿದೆ. ಆದರೆ ನಗರಪಾಲಿಕೆ ಅಧಿಕಾರಿಗಳು, ಗುತ್ತಿಗೆದಾರರು ಇದನ್ನು ಮರೆತಿದ್ದಾರೆ. ನಗರಪಾಲಿಕೆ ಸದಸ್ಯರ ಅವಧಿಯು ಮುಕ್ತಾಯವಾಗಿದ್ದು, ನಗರಪಾಲಿಕೆ ಆಯುಕ್ತರು AC ಕಚೇರಿಯಲ್ಲಿ ಕುಳಿತು ಕೆಲಸ ಮಾಡುವುದರ ಜೊತೆಗೆ ನಗರ ಪರ್ಯಟನೆ ಮಾಡಿ ಇಂತಹ ಸಮಸ್ಯೆಗಳನ್ನು ಗಮನಿಸಿ ಸ್ಪಂದಿಸುವ ಸೂಕ್ಷ್ಮತೆ ತಮಗಿರಬೇಕಾಗಿದೆ. ಈ ಮೋರಿಗೆ ಒಳಚರಂಡಿ ಪೈಪ್ ಒಡೆದು ಇಲ್ಲಿಯೇ ಹರಿಯುತ್ತಿದೆ. ಪಕ್ಕದಲ್ಲಿಯೇ ಹಾಪ್‌ಕಾಮ್ಸ್, ಆರೋಗ್ಯ ಕೇಂದ್ರ, ಬುದ್ಧ ಸ್ತೂಪ ಇದ್ದು ಸದಾ ಜನಜಂಗುಳಿ ಇರುತ್ತದೆ. ಕೊಳೆತು ನಾರುವ ವಾಸನೆಯಿಂದ ನಾಗರಿಕರಿಗೆ, ಬಸ್‌ಗಾಗಿ ಕಾಯುವ ಪ್ರಯಾಣಿಕರಿಗೆ ದುರ್ನಾತದಿಂದ ದಿನನಿತ್ಯವು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ನಗರಪಾಲಿಕೆ ಆಯುಕ್ತರು ಗಮನಹರಿಸಿ ಹೊಸದಾಗಿ ಡಕ್ ಹಾಕಿಸಿ ಮೋರಿ ಮುಚ್ಚಿ ವಾಹನ ಸಂಚಾರಕ್ಕೆ ಮುಕ್ತ ಮಾಡುವುದರ ಜೊತೆಗೆ ಸಾರ್ವಜನಿಕರ ಆರೋಗ್ಯ ಕಾಪಾಡುವಂತೆ ಮನವಿ.

–ಪಡುವಾರಹಳ್ಳಿ ಎಂ ರಾಮಕೃಷ್ಣ ವಕೀಲರು

ಕಾನೂನು ಪಾಲಿಸಿ ಶಿಸ್ತುಬದ್ಧ ಜೀವನ ನಡೆಸೋಣ..!

ಮಾನ್ಯರೆ,

ಕಾನೂನು ಎಂದ ಕ್ಷಣ ನಮಗೆ ನೆನಪಾಗುವುದೇ ನ್ಯಾಯಾಲಯ. ಅಲ್ಲಿಯ ವಕೀಲರು, ನ್ಯಾಯಾಧೀಶರು ಮತ್ತು ಕಣ್ಣಿಗೆ ಕಪ್ಪು ಬಟ್ಟೆ ಧರಿಸಿ ಯಾರನ್ನು ನೋಡದೆ ನ್ಯಾಯದ ಕಡೆ ತೀರ್ಪು ಕೊಡುವ ನ್ಯಾಯದೇವತೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಲ್ಲಿ ಅಳವಡಿಸಿರುವ ಪರಿಚ್ಛೇದಗಳ ಅಡಿಯಲ್ಲಿ ನಾವು ಕಾನೂನನ್ನು ರಚನೆ ಮಾಡಿಕೊಂಡಿದ್ದೇವೆ. ನಮ್ಮ ಕಾನೂನಿನ ಮೂಲ ಸಂವಿಧಾನ. ಇದರಲ್ಲಿ ಅಳವಡಿಸಿಕೊಂಡಿರುವ ಕಾನೂನನ್ನು ಆಧಾರವಾಗಿಟ್ಟುಕೊಂಡು ನ್ಯಾಯಾಲಯದಲ್ಲಿ ತೀರ್ಪನ್ನು ನಿಗದಿಪಡಿಸುತ್ತಾರೆ. ಈ ತೀರ್ಪಿಗೆ ಎಲ್ಲರೂ ಬದ್ಧರಾಗಿರಬೇಕು. ಇದರಲ್ಲಿ ಯಾವುದೇ ತಾರತಮ್ಯವಿಲ್ಲ. ಎಲ್ಲಾ ಜನತೆಯನ್ನು ಸಮಾನವಾಗಿ ಕಾಣಬೇಕೆಂಬುದೇ ಸಂವಿಧಾನದ ಮೂಲ ಉದ್ದೇಶವಾಗಿರುತ್ತದೆ.

ಹೀಗೆ ಕಾನೂನು ಸ್ಥಳೀಯ ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಹಾಗೂ ರಾಷ್ಟ್ರ ಮಟ್ಟಗಳಲ್ಲಿ ತನ್ನ ವಿಸ್ತಾರವನ್ನು ಹೊಂದಿದೆ. ಹಾಗೆ ನಾವು ಸ್ವಲ್ಪ ಯೋಚಿಸಿದರೆ ಕಾನೂನು ಎಂಬುದು ಕೇವಲ ನ್ಯಾಯಾಲಯದಲ್ಲಿ ಮಾತ್ರ ಸೀಮಿತವಾಗಿರದೆ ಈ ಕಾನೂನು ಒಂದು ಶಿಸ್ತುಬದ್ಧವಾದ ಜೀವನ ನಡೆಸಲು ಮಾನವ ತನ್ನ ಸುತ್ತಮುತ್ತಲು ಹಾಕಿಕೊಂಡಿರುವ ಚೌಕಟ್ಟು ಎನ್ನಬಹುದು. ಇಂತಹ ಕೆಲವು ಕಾನೂನು ಅಥವಾ ನಿಯಮಗಳನ್ನು ಪಾಲಿಸಿದರೆ ನಾವು ನಮ್ಮ ಸುತ್ತಲೂ ಆರೋಗ್ಯಕರ ವಾತಾವರಣವನ್ನು ಸೃಷ್ಟಿಸಲು ಸಾಕಾರವಾಗುತ್ತದೆ ಎನ್ನಬಹುದು. ಈ ಕಾನೂನು ಎಲ್ಲೆಡೆಯಲ್ಲಿ ಅಳವಡಿಸಿಕೊಂಡು ಬರುತ್ತಿದ್ದಾರೆ. ಶಾಲಾ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ, ಕಂಪನಿಗಳಲ್ಲಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಅದರದೇ ಆದ ಕೆಲವು ನಿಯಮಗಳ ಚೌಕಟ್ಟನ್ನು ಹಾಕಿಕೊಂಡು ನಾವು ಜೀವಿಸಬೇಕು ಎಂದು ನಿರ್ಧರಿಸಿರುತ್ತಾರೆ. ಇದರಿಂದ ಅವರು ಉತ್ತಮವಾದ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಅವರು ಕೆಲಸ ಮಾಡುವ ತಾಣ ಹಾಗೂ ಅವರ ಜೀವಿಸುವ ತಾಣವು ಸುಖಕರವಾಗಿರಲು ಅನುವು ಮಾಡುವುದೇ ಈ ಕಾನೂನು. ಹೀಗೆ ಈ ಕಾನೂನು ಎಂಬುದು ಇಲ್ಲದಿದ್ದರೆ ಅರಾಜಕತೆಯು ತಾಂಡವವಾಡುವುದರಲ್ಲಿ ಯಾವುದೇ ಸಂಶಯವಿಲ್ಲ ಅಲ್ಲವೇ? ಇಂತಹದನ್ನು ನಾವು ಪ್ರೋತ್ಸಾಹಿಸಬೇಕು. ಮನೆಯೇ ಮೊದಲ ಪಾಠಶಾಲೆ ಎನ್ನುವ ಹಾಗೆ ಮನೆಯಿಂದಲೇ ಸಣ್ಣ ಸಣ್ಣ ಕಾನೂನುಗಳನ್ನು ಅಳವಡಿಸಿ ಬಾಳುವೆ ನಡೆಸಿದರೆ ದೊಡ್ಡ ದೊಡ್ಡ ನ್ಯಾಯಾಲಯಗಳತ್ತ ನಾವು ಸುಳಿಯುವುದೇ ವಿರಳ ಎಂಬುದೇ ನನ್ನ ಇಂಗಿತ. ಹಾಗಾಗಿ ಈ ಕಾನೂನು ದಿನದಂದು ಸಂವಿಧಾನದ ಶಿಲ್ಪಿಯನ್ನು ಸ್ಮರಿಸೋಣ, ಕಾನೂನನ್ನು ಪಾಲಿಸೋಣ?.!

–ಅನಿಲ್ ರಾಜ, ಸಹ ಶಿಕ್ಷಕರು, ಗೀತಾ ಭಾರತಿ ಶಾಲೆ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್

ಇಪ್ಪತ್ತನೆಯ ಶತಮಾನದ ಮೊದಲಿನ ನಾಲ್ಕು ದಶಕಗಳಲ್ಲಿ (1902–1940) ಮೈಸೂರು ರಾಜ್ಯದ ಮಹಾರಾಜರಾಗಿ, ಸಾಮಾಜಿಕ ಸುಧಾರಕರಾಗಿ, ಆದರ್ಶ ಆಡಳಿತಗಾರರಾಗಿ, ವಿದ್ಯಾನುರಾಗಿಗಳಾಗಿ, ಜನಪ್ರಿಯರಾಗಿ, ಜನಕನ ಹೋಲುವ ದೊರೆಯಾಗಿ ಪ್ರಜೆಗಳ ಮನಸ್ಸಿನಲ್ಲಿ ಶಾಶ್ವತ ಪೂಜನೀಯ ಮೂರ್ತಿಯಾಗಿ ಬೆಳಗಿದವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಅವರು ಜನಿಸಿದ್ದು 1884ನೇ ಇಸವಿಯ ಜೂನ್ 4ನೇಯ ಶುಭದಿನ. ಅವರ ತಂದೆ ಮೈಸೂರಿನ ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರ್. ತಾಯಿ ಮಹಾರಾಣಿ ಕೆಂಪನಂಜಮ್ಮಣ್ಣಿ ದೇವಿ. ಚಾಮರಾಜೇಂದ್ರರು ಅಕಸ್ಮಾತ್ತಾಗಿ 1894ರಲ್ಲಿ ಕಲ್ಕತ್ತಾ ನಗರದಲ್ಲಿ ವಿಧಿವಶರಾದಾಗ ಹನ್ನೊಂದು ವರ್ಷದ ನಾಲ್ವಡಿ ಕೃಷ್ಣರಾಜರಿಗೆ 1.2.1895ರಲ್ಲಿ ಪಟ್ಟಾಭಿಷೇಕವಾಯಿತು. ತಾಯಿಯವರೇ ರೀಜೆಂಟಾಗಿ 1902ರವರೆಗೂ ರಾಜ್ಯಭಾರವನ್ನು ವಹಿಸಿಕೊಂಡಿದ್ದರು. 8.2.1902ರಿಂದ ನಾಲ್ವಡಿ ಕೃಷ್ಣರಾಜ ಒಡೆಯರು ಸಂಪೂರ್ಣಾಧಿಕಾರವನ್ನು ಪಡೆದು ಆಳ್ವಿಕೆಯನ್ನು ಪ್ರಾರಂಭಿಸಿದರು. ಗವರ್ನರ್ ಜನರಲ್ ಲಾರ್ಡ್ ಕರ್ಜನ್ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಸಮಾರಂಭದಲ್ಲಿ 8.8.1902ರಂದು ನಾಲ್ವಡಿಯವರನ್ನು ಮೈಸೂರಿನ ಮಹಾರಾಜರೆಂದು ಘೋಷಿಸಿದರಂತೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನೂ ರಾಜರು ಯೋಗ್ಯವಾದ ಶಸ್ತ್ರ–ಶಾಸ್ತ್ರಗಳನ್ನೂ ಯೋಗ್ಯ ಗುರುಗಳಿಂದ ಕಲಿತರು. ಆಡಳಿತವನ್ನು ಸರ್ ಸ್ಟೂವರ್ಟ್ ಫ್ರೇಸರ್ ಎಂಬ ವಿದ್ವಾಂಸರು ಕಲಿಸಿದರು. ರಾಜ್ಯದಲ್ಲಿ ಸಾಕಷ್ಟು ಸಂಚಾರ ಮಾಡಿ ಪ್ರಜೆಗಳ ಸ್ಥಿತಿಗತಿಗಳನ್ನು ಮಹಾರಾಜರು ಅರಿತುಕೊಂಡರು. ಕಾಥೇವಾರ್ ರಾಜಮನೆತನದ ರಾಜಕುಮಾರಿ ಪ್ರತಾಪ ಕುಮಾರಿ ಬಾಯೀ ಅವರನ್ನು ಶಾಸ್ತ್ರಾನುಸಾರವಾಗಿ ವಿವಾಹ ಮಾಡಿಕೊಂಡರು.


ನಾಲ್ವಡಿಯವರ ಕಾಲದಲ್ಲಿ ಮೈಸೂರು ಮಾದರಿ ಸಂಸ್ಥಾನವಾಯಿತು. 1925ರಲ್ಲಿ ಮೈಸೂರಿಗೆ ಭೇಟಿ ನೀಡಿದ್ದ ಮಹಾತ್ಮ ಗಾಂಧಿಯವರು ಮಹಾರಾಜರ ನಿಷ್ಕಲಂಕ ಜೀವನವನ್ನೂ ಆಡಳಿತ ವೈಖರಿಯನ್ನೂ ಕಂಡು ಅವರನ್ನು ರಾಜರ್ಷಿ ಎಂದು ಕರೆದರು. ಗ್ರೀಕ್ ತತ್ತ್ವಜ್ಞಾನಿ ಪ್ಲೇಟೋ ತನ್ನ ರಿಪಬ್ಲಿಕ್ ಎಂಬ ಗ್ರಂಥದಲ್ಲಿ ವರ್ಣಿಸಿರುವ ಆದರ್ಶ ಆಡಳಿತಗಾರರನ್ನು ನಾಲ್ವಡಿ ಕೃಷ್ಣರಾಜರಲ್ಲಿ ಕಂಡೆ ಎಂದು ಪಾಲ್ ಬ್ರುಂಟನ್ ಎಂಬ ಪಾಶ್ಚಾತ್ಯನು ಉದ್ಗರಿಸಿದ್ದಾನೆ. ಅನೇಕರು ಅಶೋಕ ಮಹಾರಾಜನು ಮನಃಪರಿವರ್ತನೆಯಾದ ನಂತರ ಹೀಗಿದ್ದಿರಬಹುದು ಎಂದು ಮನದಾಳದ ಮಾತುಗಳನ್ನು ಆಡುತ್ತಿದ್ದರು. 1920ರಲ್ಲಿ ಲಂಡನ್ನಿನಲ್ಲಿ ಜರುಗಿದ ದುಂಡು ಮೇಜಿನ ಪರಿಷತ್ತಿನಲ್ಲಿ (Round Table Conference) ಜಾನ್ ಸ್ಯಾಂಕಿ ಹೇಳಿದ Mysore is the best administered State in the world ಎಂಬ ಮಾತು ನಾಲ್ವಡಿ ಕೃಷ್ಣರಾಜರ ಆಡಳಿತದ ಜಾಣ್ಮೆಗೆ ಸಾಕ್ಷಿಯಾಗಿದೆ. ಮೈಸೂರಿನ ಪ್ರಜೆಗಳ ಸುದೈವದಿಂದ ಭಗವಂತನು ಕೊಟ್ಟ ಪರಮದಕ್ಷ ಮಹಾರಾಜನೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್.

ಆಕಾರ ಸದೃಶ ಪ್ರಜ್ಞಃ ಪ್ರಜ್ಞಯಾ ಸದೃಶಾಗಮಃ।
ಆಗಮೈಃ ಸದೃಶಾರಂಭ: ಆರಂಭಸದೃಶೋದಯಃ॥

ದಿಲೀಪ ಮಹಾರಾಜನ ಭವ್ಯವಾದ ಆಕಾರಕ್ಕೆ ಅನುಗುಣವಾದ ಪ್ರಜ್ಞೆಯೂ ಅವನಲ್ಲಿತ್ತು. ಪ್ರಜ್ಞೆಗೆ ತಕ್ಕ ವಿದ್ಯೆಯಿಂದಲೂ ಅವನು ಶೋಭಿಸುತ್ತಿದ್ದನು. ಆ ವಿದ್ಯೆಗೆ ಯೋಗ್ಯವಾದ ಕಾರ್ಯಗಳನ್ನೇ ಅವನು ಆರಂಭಿಸುತ್ತಿದ್ದನು. ಆ ಕಾರ್ಯಾರಂಭಕ್ಕೆ ಅರ್ಹವಾದ ಉತ್ತಮೋತ್ತಮ ಫಲಗಳನ್ನೂ ಅವನು ಪಡೆಯುತ್ತಿದ್ದನು ಎಂದು ದಿಲೀಪ ಮಹಾರಾಜನನ್ನು ಕುರಿತು ಕಾಳಿದಾಸನು ಹೇಳಿದ ಮಾತು ನಾಲ್ವಡಿ ಕೃಷ್ಣರಾಜರ ಬಗೆಗೆ ಹೇಳಿದಂತಿದೆ.

ಪ್ರಜಾಹಿತ ಕಾರ್ಯಗಳು

ನಾಲ್ವಡಿ ಕೃಷ್ಣರಾಜ ಪ್ರಭುಗಳು ಸಿಂಹಾಸನಾರೋಹಣ ಮಾಡಿದ ಕ್ಷಣದಿಂದಲೇ ಪ್ರಜೆಗಳಿಗಾಗಿ ದುಡಿದರು. 1903 ರಲ್ಲೇ



> "ಮೈಸೂರು ಮೆಡಿಕಲ್ ಕಾಲೇಜಿನ 1962ನೇ ಸಾಲಿನ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಈ ಸಂಸ್ಥೆಯ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದು, ಮಹಾರಾಣಿ ಪ್ರಮೋದಾದೇವಿ ಒಡೆಯರ್ 26.11.2023 ಭಾನುವಾರ ಬೆಳಗ್ಗೆ 11 ಗಂಟೆಗೆ ಅದನ್ನು ಲೋಕಾರ್ಪಣೆಗೊಳಿಸುವರು. ಡಾ. ವಿ. ಲಕ್ಷ್ಮೀನಾರಾಯಣ ಅವರ ಸಂಕಲ್ಪದಿಂದ ನಾಲ್ವಡಿಯವರ ಪ್ರತಿಮೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಶೋಭಿಸಲಿದೆ.

ಬೆಂಗಳೂರಿನಲ್ಲಿ ಮಿಂಟೋ ಕಣ್ಣಿನ ಆಸ್ಪತ್ರೆಯನ್ನಾರಂಭಿಸಿದರು. 1905ರಲ್ಲಿ ಬೆಂಗಳೂರಿಗೆ ವಿದ್ಯುದ್ದೀಪ ಬಂದಿತು. ಅದೇ ವರ್ಷ ಚಿತ್ರದುರ್ಗದ ವಾಣೀವಿಲಾಸ ಸಾಗರ ಅಸ್ತಿತ್ವಕ್ಕೆ ಬಂದು ಆ ಪ್ರದೇಶದ ನೀರಿನ ದಾಹವನ್ನು ನೀಗಿಸಿತು. 1907ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ (Indian Institute of Science) ಬೆಂಗಳೂರಿನಲ್ಲಿ ಆರಂಭಗೊಂಡಿತು. 1916 ರಲ್ಲಿ ನಾಲ್ವಡಿಯವರು ಮೈಸೂರು ವಿಶ್ವವಿದ್ಯಾನಿಲಯವನ್ನು ಆರಂಭಿಸಿದರು. ಸ್ತ್ರೀಯರ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಮೈಸೂರಿನಲ್ಲಿ ಅವರು ಮಹಾರಾಣಿ ಕಾಲೇಜನ್ನು 1917ರಲ್ಲಿ ಸ್ಥಾಪಿಸಿದರು. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ವರದಾನವಾಗಿರುವ ಕೃಷ್ಣರಾಜ ಸಾಗರವನ್ನು ಕಟ್ಟಿಸಿದ್ದೂ ನಾಲ್ವಡಿಯವರೇ. ಇದಕ್ಕಾಗಿ ಅವರು ಮಾಡಿದ ತ್ಯಾಗ ಐತಿಹಾಸಿಕ. 1924 ರಲ್ಲಿ ಮೈಸೂರು ಮೆಡಿಕಲ್ ಕಾಲೇಜನ್ನು ಆರಂಭಿಸಿ ವೈದ್ಯವಿದ್ಯೆಗೆ ಅವರು ನೀಡಿದ ಪ್ರೋತ್ಸಾಹ ಚಿರಸ್ಮರಣೀಯ. ಅದಕ್ಕೆ ಪೂರಕವಾಗಿ ಅವರೇ ಸ್ಥಾಪಿಸಿದ ಕೃಷ್ಣರಾಜೇಂದ್ರ ಆಸ್ಪತ್ರೆ (Krishna Rajendra Hospital) ಮೈಸೂರಿನ ಜನರಿಗೆ ಅವರು ಕೊಟ್ಟ ದೊಡ್ಡ ದೊಡ್ಡ ಕೊಡುಗೆ. 1939ರಲ್ಲಿ ಅವರೇ ಶರಾವತಿ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನೂ ಆರಂಭಿಸಿದರು.

ಯೌವನಂ ಧನಸಂಪತ್ತಿ; ಪ್ರಭುತ್ವ ಮವಿವೇಕಿತಾ।
ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಮ್ ॥

ಯೌವನ ಎಂದರೆ ತಾರುಣ್ಯ. ನಾಲ್ವಡಿಯವರು ಅಧಿಕಾರವನ್ನು ವಹಿಸಿಕೊಂಡಾಗ ಅವರಿಗೆ ಹದಿನೆಂಟು ವರ್ಷ. ತಾರುಣ್ಯದ ಹುಮ್ಮಸ್ಸು. ಸಾಕಷ್ಟೆನಿಸುವ ಧನಸಂಪತ್ತು. ರಾಜ್ಯವೆಲ್ಲ ಅವರದೇ. ದೈವದತ್ತವಾದ ಅಧಿಕಾರ, ಪ್ರಭುತ್ವ. ಆದರೆ ಅವಿವೇಕ ಚೂರಿನಷ್ಟೂ ಇರಲಿಲ್ಲ. ತಾಯಿ ಕೊಡಿಸಿದ್ದ ಉತ್ತಮ ವಿದ್ಯೆ, ಸಂಸ್ಕಾರ ನಾಲ್ವಡಿ ಅವರನ್ನು ಜಗದಾದರ್ಶ ಪ್ರಭುವಾಗಿ ಮಾಡಿದವು.

ಲಾರ್ಡ್ ಕರ್ಜನ್ ಹೇಳಿದ ಮಾತು–

"The Maharaja has proved to be a most capable ruler, and there has been a marked development in the industrial, social, educational and other questions which are the basis of successful administration. His Highness is exceedingly popular and his sympathetic attitude towards every movement calculated to improve the conditions of the people has endeared him to the hearts of his subjects".

(ಮಹಾರಾಜ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರು ಅತ್ಯಂತ ದಕ್ಷ ಆಡಳಿತಗಾರರು ತಾವೆಂದು ತೋರಿಸಿಕೊಟ್ಟಿದ್ದಾರೆ. ರಾಜ್ಯದ ಕೈಗಾರಿಕಾ, ಸಾಮಾಜಿಕ, ಶೈಕ್ಷಣಿಕ, ಮತ್ತಿತರ ಕ್ಷೇತ್ರಗಳಲ್ಲಿ ಗಣನೀಯ ಅಭಿವೃದ್ಧಿಯಾಗಿದೆ. ಇವೇ ಉತ್ತಮ ಆಡಳಿತದ ಆಧಾರಗಳು. ಮಹಾರಾಜರು ಅತ್ಯಂತ ಜನಪ್ರಿಯರಾಗಿದ್ದು ಜನರ ಸ್ಥಿತಿಯನ್ನು ಉತ್ತಮಗೊಳಿಸಲು ಬೇಕಾದ ಪ್ರತಿಯೊಂದು ಚಟುವಟಿಕೆಯಲ್ಲೂ ಅವರು ಆಸಕ್ತರಾಗಿದ್ದಾರೆ. ಇದರಿಂದ ಈ ಮಹಾರಾಜರು ತಮ್ಮ ಪ್ರಜೆಗಳ ಹೃದಯಗಳ ಪ್ರೀತಿಗೆ ಪಾತ್ರರಾಗಿದ್ದಾರೆ).

ನಾಲ್ವಡಿಯವರು ಕಲಾಪ್ರೇಮಿ. ಮೈಸೂರನ್ನು ಸುಂದರ ನಗರವನ್ನಾಗಿ ಮಾಡಬೇಕೆಂಬ ಸಂಕಲ್ಪ ಅವರದಾಗಿತ್ತು. ಅವರು ನಿರ್ಮಿಸಿದ ಅರಮನೆ 1912ರಲ್ಲಿ ಪೂರ್ಣಗೊಂಡಿತು. ಅದು ಮೈಸೂರಿನ ಶೋಭಮಾನ ಆಭರಣವಾಗಿದ್ದು, ಇಂದಿಗೂ ಪ್ರವಾಸಿಗಳ ಕಣ್ಣುಗಳಿಗೆ ಹಬ್ಬವನ್ನು ಉಂಟುಮಾಡುತ್ತಿದೆ. ಅವರ ಕಾಲದಲ್ಲಿ ನಿರ್ಮಾಣವನ್ನು ಕಂಡ ವಿಶಾಲ ರಸ್ತೆಗಳು ಮೈಸೂರಿಗೆ ಕಾಂತಿಯನ್ನು ತಂದಿವೆ.

ನಾಲ್ವಡಿಯವರ ಕಾಲದಲ್ಲಿ ಜ್ಞಾನ ವಿಜ್ಞಾನಗಳ ಬೆಳವಣಿಗೆ ಚೆನ್ನಾಗಿ ಆಯಿತು. ಆಗಲೇ ಗವರ್ನಮೆಂಟ್ ಓರಿಯೆಂಟಲ್ ಲೈಬ್ರರಿ (ಪ್ರಾಚ್ಯ ವಿದ್ಯಾ ಸಂಶೋಧನಾಲಯ)ಯಲ್ಲಿದ್ದ ಆರ್. ಶ್ಯಾಮಶಾಸ್ತ್ರಿಗಳು ಕೌಟಿಲ್ಯನ ಅರ್ಥಶಾಸ್ತ್ರವನ್ನು (1909ರಲ್ಲಿ) ಪ್ರಕಟಿಸಿ ಮೈಸೂರಿನ ಹೆಸರು ಪ್ರಪಂಚದ ವಿದ್ವದ್ವಲಯದಲ್ಲಿ ಬೆಳಗುವಂತೆ ಮಾಡಿದರು. ವಿದ್ಯಾ ಪ್ರೇಮಿಗಳಾಗಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜರು ಶ್ಯಾಮಶಾಸ್ತ್ರಿಗಳನ್ನು ಅರಮನೆಗೆ ಕರೆಸಿ ಗೌರವಿಸಿದರು. ಅನೇಕ ಸಂಸ್ಕೃತ ಪಂಡಿತರಿಗೆ ಆಸ್ಥಾನ ವಿದ್ವಾನ್ ಎಂಬ ಬಿರುದನ್ನು ನೀಡಿ ಪೋಷಿಸಿ ಪ್ರೋತ್ಸಾಹಿಸುತ್ತಿದ್ದರು. ಅವರಲ್ಲಿ ಒಬ್ಬರಾದ ಚಾಮರಾಜನಗರದ ರಾಮಶಾಸ್ತ್ರಿಗಳು ಸೀತಾರಾವಣ ಸಂವಾದ ಝುರೀ ಎಂಬ ಚಿತ್ರಕಾವ್ಯ ಗ್ರಂಥವನ್ನು ರಚಿಸಿ ಪ್ರಖ್ಯಾತರಾದರು.


ನಾಲ್ವಡಿಯವರು ಸ್ವಯಂ ಸಂಗೀತಶಾಸ್ತ್ರವನ್ನೂ, ಸಂಗೀತವನ್ನೂ ಅಭ್ಯಾಸ ಮಾಡಿದ್ದರು. ಪಾಶ್ಚಾತ್ಯ ಸಂಗೀತ, ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನೀ ಸಂಗೀತದ ಪರಿಣತರಿಗೆ ಮಹಾರಾಜರ ಪ್ರೋತ್ಸಾಹ ಪುಷ್ಕಳವಾಗಿತ್ತು. ಕನ್ನಡ ಕವಿಗಳಿಗೆ ಅವರು ಅಭಿನವ ಭೋಜರಾಜನೇ ಆಗಿದ್ದರು. ಮಹಾರಾಜರ ದಿವಾನರಾಗಿದ್ದ ಮಹನೀಯರೂ ಮಹಾರಾಜರಿಗೆ ಬೆಂಬಲವನ್ನು ಕೊಟ್ಟು ಜ್ಞಾನದೀಪ ಪ್ರಕಾಶಮಾನವಾಗಿ ಉರಿಯುವಂತೆ ಮಾಡಿದರು. ಆಗ ದಿವಾನರಾಗಿದ್ದ ಸರ್ ಎಂ ವಿಶ್ವೇಶ್ವರಯ್ಯನವರು ಭಾರತವು ಸ್ವತಂತ್ರವಾದ ಮೇಲೆ ಭಾರತರತ್ನ ಪ್ರಶಸ್ತಿಗೆ ಭಾಜನರಾದರು.

ಉದಾರರೂ, ಉದಾತ್ತರೂ ಆಗಿದ್ದ ನಾಲ್ವಡಿಯವರು ಬದುಕಿದ್ದುದು ಐವತ್ತಾರು ವರ್ಷ ಮಾತ್ರ. 3.8.1940 ರಂದು ಅವರು ಪರಲೋಕ ಪ್ರಯಾಣ ಮಾಡಿದರು. ಮುಂದೆ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಅವರು ರಾಜ್ಯಭಾರವನ್ನು ವಹಿಸಿಕೊಂಡರು. ನಾಲ್ವಡಿಯವರ ಕೀರ್ತಿ ಅಜರಾಮರವಾಗಿದೆ.

ಗೊಮ್ಮಟಗಿರಿಯ ಚಲುವ ಬಾಹುಬಲಿಗೆ ಇಂದು ಮಹಾಮಸ್ತಕಾಭಿಷೇಕ

ಮೌರ್ಯ ಸಾಮ್ರಾಜ್ಯ ಸ್ಥಾಪಕ ಚಂದ್ರಗುಪ್ತ ಮೌರ್ಯನು ತನ್ನ ಸಾಮ್ರಾಜ್ಯ ತ್ಯಜಿಸಿ ಜೈನಗುರು ಭದ್ರಬಾಹುವಿನೊಂದಿಗೆ ಬಿಹಾರದ ಪಾಟಲಿಪುತ್ರದಿಂದ ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದು ಚಂದ್ರಗಿರಿ ಬೆಟ್ಟದಲ್ಲಿ ನೆಲೆಸಿ ಅಲ್ಲೇ ಸಲ್ಲೇಖನ ಕೈಗೊಂಡು ಇಹಲೋಕ ತ್ಯಜಿಸಿದ್ದರು. ಕರ್ನಾಟಕದ ಕದಂಬರು, ಕಲ್ಯಾಣಿ ಚಾಲುಕ್ಯರು, ರಾಷ್ಟ್ರಕೂಟರು, ಕರ್ನಾಟಕದ ದಕ್ಷಿಣ ಭಾಗದಲ್ಲಿ ಗಂಗರು, ಹೊಯ್ಸಳರು ಜೈನಧರ್ಮದ ಪ್ರಭಾವಕ್ಕೆ ಒಳಗಾಗಿದ್ದರು. ಕನ್ನಡದ ಕವಿಗಳಾದ ಶ್ರೀವಿಜಯ, ಪಂಪ, ಪೊನ್ನ, ರನ್ನ, ಗಣಿತಜ್ಞ ಮಹಾವೀರಾಚಾರ್ಯ ಜೈನರಾಗಿದ್ದರು. ಹಾಗಾಗಿ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ, ಉಡುಪಿಯ ಕಾರ್ಕಳದಲ್ಲಿ ದಕ್ಷಿಣ ಕನ್ನಡದ ವೇಣೂರಿನಲ್ಲಿ, ಧರ್ಮಸ್ಥಳದಲ್ಲಿ, ಮೈಸೂರಿನ ಗೊಮ್ಮಟಗಿರಿಯಲ್ಲಿ ಹೀಗೆ ಕರ್ನಾಟಕದಲ್ಲಿ 5 ಏಕಶಿಲಾ ಬಾಹುಬಲಿಯ ಮೂರ್ತಿಗಳಿದ್ದು, ಶ್ರೀಕ್ಷೇತ್ರ ಗೊಮ್ಮಟಗಿರಿಯು ಮೈಸೂರು ಜಿಲ್ಲೆ, ಹುಣಸೂರು ತಾಲೂಕು ಬಿಳಿಕೆರೆ ಹೋಬಳಿಯಲ್ಲಿ ನೆಲೆಗೊಂಡಿದೆ.

ಸಾಮಾನ್ಯ ಶಕ ಪೂರ್ವ 2ನೆಯ ಶತಮಾನದಿಂದಲು ಜೈನರ ಪವಿತ್ರ ಕ್ಷೇತ್ರವಾಗಿದ್ದ ಗೊಮ್ಮಟಗಿರಿ ಕ್ಷೇತ್ರದಲ್ಲಿ ಏಕಶಿಲಾ ಮೂರ್ತಿಯಾದ ಗೊಮ್ಮಟಪ್ಪ ಬಾಹುಬಲಿ, ಶ್ರವಣಗುಡ್ಡವೆಂಬ 65 ಅಡಿ ಎತ್ತರದ 100 ಅಡಿ ಅಗಲದ ಬೆಟ್ಟದ ಮೇಲೆ ವಿರಾಜಮಾನನಾಗಿದ್ದಾನೆ. ಈ ಮೂರ್ತಿಯು 14ನೆಯ ಶತಮಾನದಲ್ಲಿ, ಆರಂಭಿಕ ವಿಜಯನಗರ ಅರಸರಿಂದ ನಿರ್ಮಾಣಗೊಂಡಿರುವ 16 ಅಡಿ ಎತ್ತರದ ಪ್ರತಿಮೆಯಾಗಿದ್ದು 700 ವರ್ಷಗಳಷ್ಟು ದೀರ್ಘ ಇತಿಹಾಸವನ್ನು ಹೊಂದಿದೆ. ಮಂದಸ್ಮಿತ ಪ್ರಶಾಂತ ಮುಖಭಾವವನ್ನು ಹೊಂದಿರುವ ತಲೆಯು ತುಂಬಾ ಗುಂಗುರು ಕೂದಲು ಸೂಕ್ಷ್ಮವಾಗಿ ಕೆತ್ತಲ್ಪಟ್ಟಿದೆ. ಶ್ರವಣಬೆಳಗೊಳದ ಬಾಹುಬಲಿಯನ್ನು ಎಲ್ಲಾ ರೀತಿಯಲ್ಲೂ ಹೋಲುತ್ತದೆಯಾದರು ವಿಗ್ರಹದ ಎಡಬಲದಲ್ಲಿ ಕಾಲಿನ ಬಳಿ ಹುತ್ತದಿಂದ



ಗೊಮ್ಮಟಗಿರಿಯ ಶ್ರೀ ಗೊಮ್ಮಟೇಶ್ವರ ಸ್ವಾಮಿಗೆ ಇಂದು 74ನೆಯ ಮಹಾ ಮಸ್ತಕಾಭಿಷೇಕ ಉತ್ಸವ

ಎದ್ದು ಬಂದಿರುವಂತೆ ಚಿತ್ರಿತವಾಗಿರುವ ಹಾವುಗಳು ಬಹಳ ಸುಂದರ ವಾಸ್ತುಶಿಲ್ಪ ರಚನೆಯಾಗಿದೆ. ಬೆಟ್ಟದ ಮೇಲೆ ತೆರೆದ ಗರ್ಭಗೃಹವಿದ್ದು, ವಿಶಾಲವಾದ ಪ್ರದಕ್ಷಿಣ ಪಥವೂ ಇದೆ.

ಬಾಹುಬಲಿ ಮೂರ್ತಿ ನಿಂತಿರುವ ಬೆಟ್ಟವು ಸ್ವಲ್ಪ ದೂರ ನಿಂತು ನೋಡಿದರೆ ದೇವಾಲಯವೊಂದರ ಮಹಾರಥದಂತೆ ಕಂಗೊಳಿಸುತ್ತಿದೆ. ಪ್ರಾಚ್ಯವಸ್ತು ಇಲಾಖೆ ಮತ್ತು ಶಾಸನ ತಜ್ಞರು, ಜೈನಯತಿ ಮಹಾಶ್ರೇಷ್ಠರು, ಅಲ್ಲಿನ ಆಡಳಿತ ಮಂಡಳಿಯವರು ಈ ವಿಗ್ರಹ 12ನೆಯ ಶತಮಾನದಲ್ಲಿ ನಿರ್ಮಾಣವಾಗಿದ್ದು, ಚಾವುಂಡರಾಯನ ವಂಶಸ್ಥರಾದ ಚೆಂಗಾಳ್ವ ಮನೆತನದ ರಾಜರು ಸ್ಥಾಪಿಸಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಚಂದ್ರಯ್ಯನವರಿಂದ ಪರಿಚಿತವಾದ ಕ್ಷೇತ್ರ

ಸಿ.ಬಿ.ಎಂ.ಚಂದ್ರಯ್ಯ ಎಂಬುವವರು 1950ರಲ್ಲಿ ತಮ್ಮ ಸಂಗಡಿಗರೊಡಗೂಡಿ ಬಾಹುಬಲಿಯನ್ನು ದರ್ಶನ ಮಾಡಲು ಬಂದಾಗ ಬೆಟ್ಟದ ಸುತ್ತ ಗಿಡಗಂಟಿಗಳು ಬೆಳೆದು ನಿಂತಿದ್ದವು. ಅಲ್ಲೇ ಕುರಿಗಾಹಿಯಾಗಿದ್ದ ತಿಮ್ಮಭೋವಿಯೆಂಬುವರು ಚಂದ್ರಯ್ಯನವರಿಗೆ ಸ್ಥಳದ ಮಹತ್ವವನ್ನು ತಿಳಿಸಿ, ಗಿಡಗಂಟಿಗಳನ್ನು ಸರಿಸಿ ಮೇಲೇರಲು ಸಹಾಯ ಮಾಡಿ ಬಾಹುಬಲಿಯ ದರ್ಶನ ಭಾಗ್ಯವಿತ್ತರು. ಚಂದ್ರಯ್ಯನವರು ತಕ್ಷಣವೇ ತಿಮ್ಮಾಭೋವಿಯವರಿಗೆ ಸುತ್ತಲಿನ ಸ್ಥಳವನ್ನು ಸ್ವಚ್ಛಗೊಳಿಸಿ ಮೆಟ್ಟಿಲು ನಿರ್ಮಿಸುವ ಕೆಲಸ ವಹಿಸಿದರು. ತಿಮ್ಮಾಭೋವಿಯವರು ಬೆಟ್ಟ ಏರಲು 65 ಮೆಟ್ಟಿಲುಗಳನ್ನು ನಿರ್ಮಿಸಿದರು. ನಿಷ್ಠೆ ಮತ್ತು ಭಕ್ತಿಯಿಂದ ಕೊಟ್ಟ ಕೆಲಸವನ್ನು ನಿರ್ವಹಿಸಿದ್ದರ ಫಲವಾಗಿ ಇಂದು ಬಹಳ ಸುಲಭವಾಗಿ ಮೆಟ್ಟಿಲೇರಿ ಬಾಹುಬಲಿಯನ್ನು ಅಬಾಲವೃದ್ಧರಾದಿಯಾಗಿ ದರ್ಶನ ಮಾಡುವ ಪುಣ್ಯ ಎಲ್ಲರಿಗೂ ಸಿಗುವಂತಾಗಿದೆ. ಕುಂದಾಚಾರ್ಯರ ದ್ವಿಸಹಸ್ರಾಬ್ದಿಯ ನೆನಪಿಗಾಗಿ ಬೆಟ್ಟದ ಕೆಳಭಾಗದಲ್ಲಿ 24 ಜೈನ ತೀರ್ಥಂಕರರ ಪಾದುಕೆಗಳ ಶಿಲ್ಪ ರಚನೆಯಿದ್ದು ಅವುಗಳಿಗೆ ಸಣ್ಣ ಗುಡಿಗಳನ್ನು, ಪಕ್ಕದಲ್ಲಿ ಜಲಮಂದಿರವನ್ನು ಸಹ ಕಟ್ಟಲಾಗಿದೆ.

1950ರ ಜುಲೈನಲ್ಲಿ ಶ್ರೀ ಗೊಮ್ಮಟಗಿರಿ ಸೇವಾ ಸಮಿತಿ ಸ್ಥಾಪನೆಯಾಗಿ 10/09/1950ರಲ್ಲಿ ಮೊದಲ ಪೂಜಾ ಕೈಂಕರ್ಯಗಳು ನಡೆದವು. 16/09/1950ರಲ್ಲಿ ಜಿ.ಕೆ.ಡಿ ಭರಮಯ್ಯನವರು ಈ ಸಮಿತಿಯ ಅಧ್ಯಕ್ಷರಾಗಿ, ಚಂದ್ರಯ್ಯ ಕಾರ್ಯದರ್ಶಿಯಾಗಿ ಬೆಟ್ಟದ ಮೇಲೆ ಅನೇಕ ಜೀರ್ಣೋದ್ಧಾರ ಕಾರ್ಯಗಳನ್ನು ನೆರವೇರಿಸಿದರು.

ಮೈಸೂರು ಮಹಾರಾಜರು ಭೇಟಿ

ಶ್ರೀ ಗೊಮ್ಮಟಗಿರಿ ಸೇವಾ ಸಮಿತಿಯು 1950ರಿಂದ ಪ್ರತಿ ವರ್ಷ ಬಾಹುಬಲಿಗೆ ಮಹಾಮಸ್ತಕಾಭಿಷೇಕವನ್ನು ನಡೆಸಿಕೊಂಡು ಬರುತ್ತಿದೆ. 1952ರ ಸೆಪ್ಟಂಬರ್‌ನಲ್ಲಿ ನಡೆದ ಮಹಾಮಸ್ತಕಾಭಿಷೇಕಕ್ಕೆ ಶ್ರೀ ಜಯಚಾಮರಾಜೇಂದ್ರ ಒಡೆಯರ್, ಪರಿವಾರ ಸಮೇತ ಗೊಮ್ಮಟಗಿರಿಗೆ ಬಂದು ಸಕಲ ಮಸ್ತಕಾಭಿಷೇಕದ ಪೂಜೆಗಳಲ್ಲಿ ಭಾಗವಹಿಸಿ ಭಗವಾನ್ ಮಹಾವೀರರ 2500ನೆಯ ಜಯಂತಿಯ ನೆನಪಿಗಾಗಿ ಮಹಾವೀರ ಭವನವನ್ನು ಅಲ್ಲಿ ಲೋಕಾರ್ಪಣೆ ಮಾಡಿದ್ದರು.

26/11/2023 ಭಾನುವಾರದಂದು ಶ್ರೀ ಗೊಮ್ಮಟೇಶ್ವರ ಸ್ವಾಮಿಗೆ 74ನೆಯ ಮಹಾಮಸ್ತಕಾಭಿಷೇಕವು ಶಿವಮೊಗ್ಗ ಜಿಲ್ಲೆಯ ಶ್ರೀಕ್ಷೇತ್ರ ಹೊಂಬುಜ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರ ಕೀರ್ತಿ ಭಟ್ಟಾರಕರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದು, ಲಕ್ಷಾಂತರ ಭಕ್ತರು ಭಾಗವಹಿಸುತ್ತಿದ್ದಾರೆ.

ಬೆಟ್ಟದ ಮೇಲೆ ನಿಂತು ಮೈಸೂರಿನ ಸುತ್ತಲಿನ ಪ್ರಾಕೃತಿಕ ವೈಭವ, ಕೆಆರ್‌ಎಸ್ ಹಿನ್ನೀರಿನ ಸೊಬಗು, ಸುತ್ತಲಿನ ಅರಣ್ಯ, ನವಿಲು, ಗಿಣಿ, ಗೊರವಂಕಗಳ ನಿನಾದ, ನೆರೆಯ ಹಳ್ಳಿಗಳ ಕೃಷಿ, ಭತ್ತದ ಗದ್ದೆ, ರಾಗಿಹೊಲ, ಸುಂದರ ತೋಟ, ರೈತಾಪಿ ಜನರ ಬದುಕು, ಔಷಧಿ ಗಿಡಗಳ ವೈವಿಧ್ಯಮಯ ಸಸ್ಯಶಾಮಲೆಯನ್ನು ಈ ಪ್ರಶಾಂತ ಸ್ಥಳದಲ್ಲಿ ನಿಂತು ಕಣ್ತುಂಬಿಸಿಕೊಳ್ಳುತ್ತಿದ್ದರೆ ಅತೀವ ರೋಮಾಂಚನವಾಗುವುದು. ಅಲ್ಲಿಂದ ಹಿಂತಿರುಗುವಾಗ ನೀವು ತಾಜಾ ತಾಜಾ ತರಕಾರಿ, ಹಣ್ಣುಹಂಪಲಗಳನ್ನು ಮನೆಗೆ ಕಡಿಮೆ ಬೆಲೆಯಲ್ಲಿ ಕೊಂಡೊಯ್ಯಬಹುದು. ಸಾಧ್ಯವಾದರೆ ಹತ್ತಿರದ ಕೆಆರ್‌ಎಸ್, ಇತಿಹಾಸ ಪ್ರಸಿದ್ಧ ಡೋರ್ನಹಳ್ಳಿಯ ಚರ್ಚ್‌ನ್ನು ನೋಡಬಹುದು.

● ಬ್ಯಾ. ರಾ. ಪ್ರಸನ್ನಕುಮಾರ್
ಮೊ: 9206376889

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಇನ್ ಟ್ರೂ ಕಲರ್ಸ್ ಛಾಯಾಚಿತ್ರ ಪ್ರದರ್ಶನ

‘ಮೈಸೂರು ಮಿತ್ರ’ ಹಾಗೂ ‘ಸ್ಟಾರ್ ಆಫ್ ಮೈಸೂರ್’ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಂದ ಉದ್ಘಾಟನೆ; ಅದ್ಭುತ ಕ್ಷಣ, ಸನ್ನಿವೇಶ ಛಾಯಾಗ್ರಾಹಕನಿಗೆ ಬಹು ಮುಖ್ಯ: ಕೆಬಿಜಿ





ಮೈಸೂರಿನ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿರುವ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನಲ್ಲಿ ಇಂದಿನಿಂದ ಆರಂಭವಾದ ಎರಡು ದಿನಗಳ ‘ಇನ್ ಟ್ರೂ ಕಲರ್ಸ್’ ಛಾಯಾಚಿತ್ರ ಪ್ರದರ್ಶನವನ್ನು ‘ಮೈಸೂರು ಮಿತ್ರ’ ಹಾಗೂ ‘ಸ್ಟಾರ್ ಆಫ್ ಮೈಸೂರ್’ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಉದ್ಘಾಟಿಸಿದರು. (ಎಡದಿಂದ) ಪ್ರಥಮ್ ಮೈಸೂರ್ ಸಿಇಒ ಶೇಷಾದ್ರಿ, ವೀರನ್ ರಂಜನ್, ಅಶ್ವಿನಿ ರಂಜನ್, ನಿಖಿಲ್ ರಂಜನ್, ಶಶಿ ರಂಜನ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು. (ಬಲಚಿತ್ರ) ಪ್ರಥಮ್ ಮೈಸೂರ್ ಸಂಸ್ಥಾಪಕ ಟ್ರಸ್ಟಿ ಅಶ್ವಿನಿ ರಂಜನ್ ಅವರು ತಾವು ತೆಗೆದಿರುವ ಛಾಯಾಚಿತ್ರಗಳ ಬಗ್ಗೆ ಶ್ರೀಯುತ ಡಾ. ಕೆ.ಬಿ.ಗಣಪತಿ ಹಾಗೂ ಖ್ಯಾತ ಛಾಯಾಗ್ರಾಹಕ ದಿವಂಗತ ಟಿ.ಎಸ್.ಸತ್ಯನ್ ಅವರ ಪುತ್ರ ಟಿ.ಎಸ್.ನಾಗೇಂದ್ರ ಅವರಿಗೆ ವಿವರಿಸುತ್ತಿರುವುದನ್ನು ಕಾಣಬಹುದು.

ಮೈಸೂರು, ನ.25(ಬಿಎಲ್‌ಯು)– ಮೈಸೂರಿನ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿರುವ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನಲ್ಲಿ ಪ್ರಥಮ್ ಮೈಸೂರ್ ಸಂಸ್ಥಾಪಕ ಟ್ರಸ್ಟಿ ಅಶ್ವಿನಿ ರಂಜನ್ ಅವರ ‘ಇನ್ ಟ್ರೂ ಕಲರ್ಸ್’ ಛಾಯಾಚಿತ್ರ ಪ್ರದರ್ಶನ ಇಂದಿನಿಂದ ಆರಂಭವಾಗಿದೆ. ‘ಮೈಸೂರು ಮಿತ್ರ’ ಹಾಗೂ ‘ಸ್ಟಾರ್ ಆಫ್ ಮೈಸೂರ್’ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರು ಎರಡು ದಿನಗಳ ಈ ಛಾಯಾಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದರು.

ಅಶ್ವಿನಿ ರಂಜನ್ ಅವರ ಕ್ಯಾಮರಾ ಕಣ್ಣಿನಿಂದ ಸೆರೆ ಹಿಡಿದಿರುವ 55ಕ್ಕೂ ಹೆಚ್ಚು ಅದ್ಭುತ ಛಾಯಾಚಿತ್ರಗಳನ್ನು ಡಾ. ಕೆ.ಬಿ.ಗಣಪತಿ ಅವರು ಈ ವೇಳೆ ವೀಕ್ಷಣೆ ಮಾಡಿ, ಅತೀವ ಪ್ರಶಂಸೆ ವ್ಯಕ್ತಪಡಿಸಿದರು.

ಚಿತ್ರಕಲೆಗೂ ಛಾಯಾಚಿತ್ರಕ್ಕೂ ಇರುವ ವ್ಯತ್ಯಾಸವನ್ನು ಈ ಸಂದರ್ಭದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ ಡಾ.ಕೆ.ಬಿ.ಗಣಪತಿ ಅವರು, ಒಬ್ಬ ವರ್ಣಚಿತ್ರಕಾರನಿಗೆ ತನ್ನ ಸೃಜನಾತ್ಮಕತೆಯ ಆಲೋಚನೆಗಳನ್ನು ಅನಾವರಣಗೊಳಿಸಲು ಬಹಳಷ್ಟು ಸಮಯವಿರುತ್ತದೆ. ಆದರೆ, ಛಾಯಾಗ್ರಾಹಕನಿಗೆ ಅಂತಹ ಸಮಯವಿರುವುದಿಲ್ಲ. ವಿಶಿಷ್ಟವಾದ ಸನ್ನಿವೇಶವನ್ನು ಆ ಕ್ಷಣದಲ್ಲೇ ತನ್ನ ಕ್ಯಾಮರಾದಲ್ಲಿ ಸೆರೆ ಹಿಡಿಯಬೇಕು. ಇಲ್ಲದಿದ್ದರೆ ಆ ಕ್ಷಣದ ಫೋಟೋ ಮತ್ತೊಮ್ಮೆ ಸಿಗುವುದಿಲ್ಲ. ಇದರಿಂದ ಛಾಯಾಗ್ರಾಹಕನ ಕೆಲಸ ತ್ವರಿತವಾಗಿರಬೇಕು ಎಂದರು.

ಛಾಯಾಗ್ರಹಣ ಕ್ಷೇತ್ರದಲ್ಲಿ ತಾಳ್ಮೆ ಹಾಗೂ ಪರಿಶ್ರಮ ಬಹಳ ಮುಖ್ಯ. ತಾಳ್ಮೆ ಇರದಿದ್ದರೆ ಅದ್ಭುತ ಛಾಯಾಚಿತ್ರಣವನ್ನು ಸೆರೆ ಹಿಡಿಯಲು ಸಾಧ್ಯವಿಲ್ಲ. ಉದಾಹರಣೆಗೆ ಕಾಡಿನಲ್ಲಿ ವನ್ಯಜೀವಿ ಫೋಟೋಗಳನ್ನು ತೆಗೆಯುವವನಿಗೆ ಬಹಳ ತಾಳ್ಮೆ ಇರಬೇಕು. ವನ್ಯಜೀವಿಗಳ ಅದ್ಭುತ ಫೋಟೋ ತೆಗೆಯಲು ಗಂಟೆಗಟ್ಟಲೆ ಕಾಯಬೇಕು. ಇದಕ್ಕಾಗಿ ಕಾಡಿನಲ್ಲಿ ವೈಲ್ಡ್ ಲೈಫ್ ಫೋಟೋಗ್ರಾಫರ್ಸ್‌ಗಳು ಅದ್ಭುತ ಕ್ಷಣದ ಫೋಟೋ ತೆಗೆಯಲು ತಾಳ್ಮೆಯಿಂದ ಗಂಟೆಗಟ್ಟಲೆ ಕಾಯುತ್ತಾರೆ ಎಂದರು.

ನಮ್ಮಲ್ಲಿ ಬಹಳಷ್ಟು ಸಭೆ ಸಮಾರಂಭಗಳಲ್ಲಿ ಸಚಿವರು ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡುತ್ತಾರೆ. ತರುವಾಯ ಉದ್ಘಾಟನೆ ಮಾಡುವಂತೆ ಮತ್ತೊಮ್ಮೆ ಕೇಳಿದರೆ ದೀಪ ಬೆಳಗಿಸುತ್ತಾರೆ. ಆದರೆ ಅದ್ಭುತ ಕ್ಷಣದ ಫೋಟೋ ತೆಗೆಯುವವನಿಗೆ ಈ ಅವಕಾಶವಿರುವುದಿಲ್ಲ. ಆ ಕ್ಷಣ ಮಹತ್ವವಾಗಿರುತ್ತದೆ. ವಿಶಿಷ್ಟ ರೀತಿಯ ಫೋಟೋ ತೆಗೆಯುವ ಛಾಯಾಗ್ರಾಹಕನಿಗೆ ತೀಕ್ಷ್ಣ ದೃಷ್ಟಿಕೋನ ಹಾಗೂ ತಾಳ್ಮೆ ಇರಬೇಕು. ಆ ಕ್ಷಣದಲ್ಲಿ ಕ್ಲಿಕ್ ಮಾಡುವ ಫೋಟೋ ಸನ್ನಿವೇಶ ಮತ್ತೊಮ್ಮೆ ಸಿಗುವುದಿಲ್ಲ ಎಂದು ಡಾ.ಕೆ.ಬಿ.ಗಣಪತಿ ಅವರು ಅಭಿಪ್ರಾಯಪಟ್ಟರು.

ಅಶ್ವಿನಿ ರಂಜನ್ ಅವರು ತೆಗೆದಿರುವ ಬಹಳಷ್ಟು ಫೋಟೋಗಳು ನಮ್ಮ ತಂದೆ ತೆಗೆದಿರುವ ಫ್ರೇಮ್‌ನಂತೆ ಇವೆ ಎಂದು ಖ್ಯಾತ ಛಾಯಾಗ್ರಾಹಕ ದಿವಂಗತ ಟಿ.ಎಸ್. ಸತ್ಯನ್ ಅವರ ಪುತ್ರ ಟಿ.ಎಸ್.ನಾಗೇಂದ್ರ ಪ್ರಶಂಸೆ ವ್ಯಕ್ತಪಡಿಸಿದರು. ಅಶ್ವಿನಿ ರಂಜನ್ ಒಬ್ಬ ವಾಣಿಜ್ಯೋದ್ಯಮಿ ಹೌದು. ಜೊತೆಗೆ ಅದ್ಭುತ ಛಾಯಾಗ್ರಾಹಕ ಕೂಡ. ಅವರು ತೆಗೆದಿರುವ ವಿಶಿಷ್ಟ ರೀತಿಯ ಫೋಟೋಗಳು ಅವರ ಛಾಯಾಗ್ರಹಣದ ಉತ್ಸಾಹವನ್ನು ಬಿಂಬಿಸುತ್ತದೆ. ಅಶ್ವಿನಿ ರಂಜನ್ ಅವರು ತೆಗೆದಿರುವ ಫೋಟೋಗಳು ಬಹಳಷ್ಟು ಅರ್ಥ ಸಾರಿ ಹೇಳುತ್ತವೆ ಎಂದು ನಾಗೇಂದ್ರ ಹೇಳಿದರು. ಇಂದು ಮತ್ತು ನಾಳೆ ಛಾಯಾಚಿತ್ರ ಪ್ರದರ್ಶನವಿದ್ದು, ಬೆಳಗ್ಗೆ 11ರಿಂದ ಸಂಜೆ 5.30ರವರೆಗೆ ತೆರೆಯಲಾಗಿರುತ್ತದೆ. ಇಲ್ಲಿ ಪ್ರದರ್ಶನಗೊಂಡಿರುವ ಫೋಟೋಗಳನ್ನು ಮಾರಾಟ ಮಾಡಿ ಆ ಹಣವನ್ನು ಪ್ರಥಮ್ ಸಂಸ್ಥೆಯ ಜನಪರ ಕಾರ್ಯಗಳಿಗೆ ನೀಡಲು ತೀರ್ಮಾನಿಸಲಾಗಿದೆ. ಛಾಯಾಗ್ರಾಹಕ ಅಶ್ವಿನಿ ರಂಜನ್, ಶಶಿರಂಜನ್, ಮಕ್ಕಳಾದ ವೀರನ್ ರಂಜನ್ ಮತ್ತು ನಿಖಿಲ್ ರಂಜನ್, ಪ್ರಥಮ್ ಮೈಸೂರು ಸಿಇಒ ಶೇಷಾದ್ರಿ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಸಾವಿರ ಪದದ ಅರ್ಥ ಸಾರುವ ಫೋಟೋಗಳು...!

ಒಂದು ಛಾಯಾಚಿತ್ರ ಸಾವಿರ ಪದಗಳ ಅರ್ಥ ಹೇಳುತ್ತದೆ ಎಂಬುದು ಅಕ್ಷರಶಃ ಸತ್ಯ. ಪ್ರಥಮ್ ಮೈಸೂರ್ ಸಂಸ್ಥಾಪಕ ಟ್ರಸ್ಟಿ ಅಶ್ವಿನಿ ರಂಜನ್ ಅವರ ‘ಇನ್ ಟ್ರೂ ಕಲರ್ಸ್’ ಛಾಯಾಚಿತ್ರ ಪ್ರದರ್ಶನದಲ್ಲಿ ಅನಾವರಣಗೊಂಡಿರುವ ಫೋಟೋಗಳು ಕೂಡ ಬಹಳಷ್ಟು ಅರ್ಥವನ್ನು ಸಾರಿ ಹೇಳುತ್ತವೆ.

ಛಾಯಾಚಿತ್ರ ಪ್ರದರ್ಶನದಲ್ಲಿ 55ಕ್ಕೂ ಹೆಚ್ಚು ಫೋಟೋಗಳನ್ನು ಅನಾವರಣ ಮಾಡಲಾಗಿದ್ದು, ಕೆಲವು ಬಿಟ್ಟರೆ ಬಹುತೇಕ ಬ್ಲ್ಯಾಕ್ ಅಂಡ್ ವೈಟ್ ಫೋಟೋಗಳೇ ಆಗಿವೆ. ಎಲ್ಲಾ ಫೋಟೋಗಳು ನೈಜತೆಯನ್ನು ಬಿಂಬಿಸುತ್ತವೆ.

ಮರಳುಗಾಡಿನಲ್ಲಿ ಒಂಟೆ ಪಯಣ, ಬಸವಣ್ಣನ ಜೊತೆ ಬದುಕಿನ ಬಂಡಿ, ವಯಸ್ಸಾದರೂ ಕುಂದದ ಅಜ್ಜನ ಉತ್ಸಾಹ, ಯಕ್ಷಗಾನದ ಪ್ರಕಾರ ಮತ್ತು ತಯಾರಿ, ಬಡ ಮಕ್ಕಳ ಬವಣೆ, ಹಸನ್ಮುಖರಾದ ಮಕ್ಕಳ ಬದುಕು, ಗುಡ್ಡಗಾಡಿನ ಮಹಿಳೆಯರ ಜೀವನ, ಹಳ್ಳಿ ಬದುಕಿನ ಚಿತ್ರಣ, ಮರೆಯಾಗುತ್ತಿರುವ ಗ್ರಾಮೀಣ ಮಕ್ಕಳ ಕ್ರೀಡೆ, ಭಾರದ ಬಿಂದಿಗೆ ಹೊತ್ತು ಮಗಳೊಂದಿಗೆ ಸಾಗುತ್ತಿರುವ ಮಹಿಳೆ ಸಂಕಷ್ಟ, ಮಕ್ಕಳ ಓದು, ಚಿಂತನೆ, ದೃಷ್ಟಿಕೋನ, ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ರೆ, ನೆರಳನ್ನು ಹಿಂಬಾಲಿಸುವ ಅಜ್ಜನ ಕುತೂಹಲದ ಹೆಜ್ಜೆ, ವಯಸ್ಸಾದ ಅಜ್ಜನ ಜವಾಬ್ದಾರಿ, ಭವಿಷ್ಯದ ಚಿಂತನೆ ಸಾರುವ ಫೋಟೋಗಳು ಕಣ್ಮನ ಸೆಳೆಯುತ್ತವೆ.

ಒಂದು ಫೋಟೋ ನಾನಾ ಅರ್ಥ ಸಾರಿ ಹೇಳುತ್ತದೆ. ಆದರೆ ಆ ಫೋಟೋ ನೋಡುವವನು ಒಳಗಣ್ಣಿನ ದೃಷ್ಟಿ ಹಾಯಿಸಬೇಕು, ಫೋಟೋದಲ್ಲಿರುವ ಅರ್ಥ ತಿಳಿಯಬೇಕಷ್ಟೆ. ಭೂತಕಾಲ, ವರ್ತಮಾನ ಹಾಗೂ ಭವಿಷ್ಯವನ್ನು ಸಾರುವ ಅಶ್ವಿನಿ ರಂಜನ್ ಅವರ ಒಂದೊಂದು ಛಾಯಾಚಿತ್ರದ ದೃಷ್ಟಿಕೋನ ಅದ್ಭುತವಾಗಿದೆ. ಅದ್ಭುತ ಸನ್ನಿವೇಶಕ್ಕಾಗಿ ಕಾದು ಕ್ಯಾಮರಾ ಕಣ್ಣಿನಲ್ಲಿ ಸೆರೆ ಹಿಡಿಯಲು ಅಶ್ವಿನಿ ರಂಜನ್ ವಹಿಸಿದ ತಾಳ್ಮೆ ಪ್ರಶಂಸನೀಯ.

ಮೈಸೂರಿನ ಅವಾಂಟ್ ಬಿಕೆಜಿ ಆಸ್ಪತ್ರೆಯಲ್ಲಿ ಮೊಣಕಾಲು ಸಮಸ್ಯೆಗೆ ರೋಬೋಟಿಕ್ ತಂತ್ರಜ್ಞಾನ



ಅವಾಂಟ್ ಬಿಕೆಜಿ ಆಸ್ಪತ್ರೆಯ ಅತ್ಯಾಧುನಿಕ ತಂತ್ರಜ್ಞಾನ ಸೇವೆಗೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು, ನ.25 (ಎಸ್‌ಬಿಡಿ)– ಮೈಸೂರಿನ ಅವಾಂಟ್ ಬಿಕೆಜಿ ಆಸ್ಪತ್ರೆಯಲ್ಲಿ ಮೊಣಕಾಲು ಸಮಸ್ಯೆ ಪರಿಹಾರಕ್ಕೆ ಅತ್ಯಾಧುನಿಕ ರೋಬೋಟಿಕ್ ತಂತ್ರಜ್ಞಾನವನ್ನು ಪರಿಚಯಿಸಲಾಗಿದೆ.

ಮೊಣಕಾಲು ಬದಲಿ ಕಾರ್ಯವಿಧಾನದ ಸೂಕ್ತ ನಿರ್ವಹಣೆ ಹಾಗೂ ಪರಿಹಾರ ಕ್ರಮಕ್ಕಾಗಿ ಆಕ್ಸಿಡೈಸ್ಡ್ ಜಿರ್ಕೋನಿಯಂ ಇಂಪ್ಲಾಂಟ್‌ನೊಂದಿಗೆ ವಿನ್ಯಾಸಗೊಳಿಸಲಾಗಿರುವ ‘ರೋಬೋಟಿಕ್ ನ್ಯಾಚುರಲ್ ನೀ ರೀಪ್ಲೇಸ್ಮೆಂಟ್ (ಎನ್‌ಕೆಆರ್ –ನೈಸರ್ಗಿಕ ಮೊಣಕಾಲು ಬದಲಿ)’ ಅತ್ಯಾಧುನಿಕ ಶಸ್ತ್ರಚಿಕಿತ್ಸೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದ್ದು, ಈ ವಿಧಾನವನ್ನು ಜಗತ್ತಿನಾದ್ಯಂತ ಕೇವಲ ಶೇ.1ರಷ್ಟು ಶಸ್ತ್ರಚಿಕಿತ್ಸಕರು ಮಾತ್ರ ಅಭ್ಯಾಸ ಮಾಡುತ್ತಿರುವುದು ಗಮನಾರ್ಹವಾಗಿದೆ.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವಾಂಟ್ ಬಿಕೆಜಿ ಆಸ್ಪತ್ರೆಯ ಅತ್ಯಾಧುನಿಕ ತಂತ್ರಜ್ಞಾನ ಸೇವೆಗೆ ವಿಧ್ಯುಕ್ತವಾಗಿ ಚಾಲನೆ ನೀಡಿದರಲ್ಲದೆ, ಸಂಬಂಧಪಟ್ಟ ವೈದ್ಯಕೀಯ ಉಪಕರಣಗಳ ಕಾರ್ಯನಿರ್ವಹಣೆ ಬಗ್ಗೆ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಮಂಡ್ಯ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್, ಅವಾಂಟ್ ಬಿಕೆಜಿ ಹಾಸ್ಪಿಟಲ್ಸ್ ವ್ಯವಸ್ಥಾಪಕ ನಿರ್ದೇಶಕ ಡಾ.ಟಿ.ಎನ್.ಬಾಲಕೃಷ್ಣಗೌಡ, ಇತರೆ ವೈದ್ಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ವಿನೂತನ ವೈದ್ಯಕೀಯ ಸೇವೆ ಬಗ್ಗೆ ವಿವರಿಸಿದ ಡಾ.ಟಿ.ಎನ್.ಬಾಲಕೃಷ್ಣಗೌಡ (ಬಿಕೆಜಿ), ವೈದ್ಯಕೀಯ ಕ್ಷೇತ್ರದಲ್ಲಿನ ಅತ್ಯಾಧುನಿಕ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳಲು ನಮ್ಮ ಅವಾಂಟ್ ಬಿಕೆಜಿ ಆಸ್ಪತ್ರೆ ಬದ್ಧವಾಗಿದೆ. ಈ ನಿಟ್ಟಿನಲ್ಲಿ ರೋಬೋಟಿಕ್ ಎನ್‌ಕೆಆರ್ ಶಸ್ತ್ರಚಿಕಿತ್ಸಕ ಯಂತ್ರವನ್ನು ಪರಿಚಯಿಸಲಾಗಿದೆ. ಇದು ಮೊಣಕಾಲುಗಳನ್ನು ಪ್ರಮಾಣಿತ ಪಿಲ್ಲರ್ ಆಕಾರದಲ್ಲಿ ಪುನರ್ ನಿರ್ಮಿಸುವ ಸಾಂಪ್ರದಾಯಿಕ ವಿಧಾನಕ್ಕಿಂತ ವಿಭಿನ್ನವಾಗಿದೆ. ರೋಬೋಟಿಕ್ ಎನ್‌ಕೆಆರ್ ಶಸ್ತ್ರಚಿಕಿತ್ಸೆ ಮೂಲಕ ರೋಗಿಗಳ ಮೊಣಕಾಲನ್ನು ನಿಖರವಾಗಿ ಮರುಸೃಷ್ಟಿಸಬಹುದು ಎಂದರು.

ನನ್ನ ‘ಐಶ್ವರ್ಯ ಡಿಕೆಎಸ್ ಹೆಗಡೆ’ ಅಂತ ಕರೀರಿ!

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುತ್ರಿ ಐಶ್ವರ್ಯ ಸಲಹೆ



ಮೈಸೂರು,ನ.25(ಬಿಎಲ್‌ಯು)– ನನ್ನನ್ನು ಐಶ್ವರ್ಯ ಡಿಕೆಎಸ್ ಹೆಗಡೆ ಎಂದು ಕರೆಯಿರಿ. ಡಿ.ಕೆ.ಶಿವಕುಮಾರ್ ಮಗಳು ಎನ್ನಬೇಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುತ್ರಿ ಐಶ್ವರ್ಯ ವಿದ್ಯಾರ್ಥಿನಿಯರಿಗೆ ನೀಡಿದ ಸಲಹೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಹಾಗೂ ರ‍್ಯಾಂಕ್ ಬುಕ್ ಲರ್ನಿಂಗ್ ಅಂಡ್ ಸಾಫ್ಟ್‌ವೇರ್ ಸಲ್ಯೂಷನ್ ಸಂಯುಕ್ತವಾಗಿ ಆಯೋಜಿಸಿದ್ದ ಸರ್ಕಾರಿ ಹಾಗೂ ಖಾಸಗಿ ವಲಯದ ಉದ್ಯೋಗಾವಕಾಶ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯೆ ಮೂಲಕ ಅವಕಾಶ ಸಿಗುತ್ತದೆ. ಆ ಅವಕಾಶ ಬಳಸಿಕೊಂಡು ಸಾಧನೆ ಮಾಡಿ. ಈ ಮೂಲಕ ತಂದೆ–ತಾಯಿಗೆ ಒಳ್ಳೆಯ ಮಗಳಾಗಿ, ಗಂಡನಿಗೆ ಒಳ್ಳೆಯ ಹೆಂಡತಿಯಾಗಿ, ಮಕ್ಕಳಿಗೆ ಒಳ್ಳೆಯ ತಾಯಿಯಾಗಿ ಬದುಕಿ. ಹಾಗೆ ನೀವು ಸಾಧನೆ ಮಾಡಿದಾಗ ನಿಮ್ಮ ಹೆಸರಿನಲ್ಲಿ ಹೆತ್ತವರನ್ನು ಅಥವಾ ಗಂಡನನ್ನು ಗುರುತಿಸುವಂತಾಗುತ್ತದೆ. ಅದು ಅವರಿಗೂ ಹೆಮ್ಮೆ ಕೊಡುತ್ತದೆ ಎಂದು ಐಶ್ವರ್ಯ ವಿವರಿಸಿದರು.

ನನ್ನ ತಂದೆ ನನಗೆ ಒಂದು ಮಾತು ಹೇಳುತ್ತಾರೆ. ದೇವರು ನಮಗೆ ವರನೂ ಕೊಡಲ್ಲ, ಶಾಪನೂ ಕೊಡಲ್ಲ. ಆದರೆ ಅವಕಾಶ ಕೊಡುತ್ತಾನೆ. ದೇವರು ಕೊಡುವ ಅವಕಾಶ ಬಳಸಿಕೊಂಡು ನಾವು ಬದುಕಬೇಕು, ಸಾಧನೆ ಮಾಡಬೇಕು ಎಂದು ಹೇಳುತ್ತಾರೆ. ಹಾಗೆಯೇ ನೀವು ಕೂಡ ದೇವರು ಕೊಟ್ಟ ಅವಕಾಶ ಬಳಸಿಕೊಂಡು ಸಾಧನೆ ಮಾಡಿ ಎಂದು ಐಶ್ವರ್ಯ ವಿದ್ಯಾರ್ಥಿನಿಯರಿಗೆ ಟಿಪ್ಸ್ ನೀಡಿದರು.

ನನಗೆ ಡಾಕ್ಟರ್ ಆಗಬೇಕೆಂದು ತುಂಬಾ ಆಸೆ ಇತ್ತು. ಆದರೆ ನನ್ನ ತಂದೆ ಡಾಕ್ಟರ್ ಓದಲು ಅವಕಾಶ ನೀಡಲಿಲ್ಲ. ಬದಲಿಗೆ ಇಂಜಿನಿಯರಿಂಗ್‌ಗೆ ಸೇರಿಸಿದರು. ತರುವಾಯ ಅಮೇಜಾನ್‌ನಲ್ಲಿ ಕೆಲಸ ಸಿಕ್ಕಾಗ ಹೋಗಲು ಬಿಡಲಿಲ್ಲ. ನಮ್ಮದೇ ಶಿಕ್ಷಣ ಸಂಸ್ಥೆ ಇದ್ದು, ಅದನ್ನು ನೋಡಿಕೊ ಎಂದರು. ನನ್ನ ತಂದೆ ತಾಯಿಯ ಮಾತನ್ನು ಪಾಲಿಸಿದೆ ಎಂದರು.

ನನಗೆ ಮೈಸೂರು ಕಂಡರೆ ತುಂಬಾ ಇಷ್ಟ, ರಜಾ ಬಂತೆಂದರೆ ಸಾಕು ಶತಾಬ್ದಿ ರೈಲಿನಲ್ಲಿ ಮೈಸೂರಿಗೆ ಬಂದು ಅಜ್ಜಿ ಮನೆಯಲ್ಲಿರುತ್ತಿದ್ದೆ ಎಂದು ಐಶ್ವರ್ಯ ಬಾಲ್ಯದ ದಿನಗಳನ್ನು ಮೆಲುಕು ಹಾಕಿದರು.



ಜನ್ಮದಿನದ ಹಿನ್ನೆಲೆಯಲ್ಲಿ ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಶನಿವಾರ ತಿರುಪತಿ ತಿರುಮಲದ ಶ್ರೀ ವೆಂಕಟೇಶ್ವರಸ್ವಾಮಿ ದರ್ಶನ ಪಡೆದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್, ಮುಖಂಡರಾದ ರಾಮಚಂದ್ರೇಗೌಡ, ಪಾಲಾಕ್ಷ, ರಾಜೀವ್, ಹನುಮೇಶ್ ಇತರರು ಉಪಸ್ಥಿತರಿದ್ದರು.

ಮಹಿಳಾ ತರಬೇತಿ ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಮೈಸೂರು.ನ.25–ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ 2023–24ನೇ ಸಾಲಿನ ಮಹಿಳಾ ತರಬೇತಿ ಯೋಜನೆಯಡಿ ಮಹಿಳೆಯರಿಗೆ ವಿವಿಧ ತರಬೇತಿಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. www.kaushalkar.com ನಲ್ಲಿ ನೋಂದಣಿಯಾಗಿ ತರಬೇತಿ ಕೇಂದ್ರ ಮತ್ತು ಜಾಬ್ ರೋಲ್‌ಗಳಿಗೆ ಮಾನ್ಯತೆ ಪಡೆದ ವಿವಿಧ ತರಬೇತಿ ಸಂಸ್ಥೆಯಲ್ಲಿ ಮಹಿಳೆಯರಿಗೆ ನೀಡುವ ತರಬೇತಿಗಳು ಮತ್ತು ತರಬೇತಿ ನೀಡಲು ನ.29ರೊಳಗಾಗಿ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ 1ನೇ ಮಹಡಿ, ಸ್ತ್ರೀಶಕ್ತಿ ಭವನ, ಕೃಷ್ಣದೇವರಾಯ ವೃತ್ತ, ಮೈಸೂರು ಇಲ್ಲಿಗೆ ಅರ್ಜಿ ಸಲ್ಲಿಸಬಹುದು.



ಮಾಜಿ ಸಚಿವ, ಸಹಕಾರಿ ಧುರೀಣರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಗಾಯತ್ರಿಪುರಂನಲ್ಲಿರುವ ಅರುಣೋದಯ ಬುದ್ಧಿಮಾಂದ್ಯ ಮಕ್ಕಳ ಶಾಲೆ ಮಕ್ಕಳಿಗೆ ಮೈಮುಲ್ ನಿರ್ದೇಶಕಿ ಲೀಲಾ ನಾಗರಾಜ್ ಭೋಜನದ ವ್ಯವಸ್ಥೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು. ಈ ವೇಳೆ ದೂರ ಗ್ರಾಪಂ ಅಧ್ಯಕ್ಷ ದೂರ ನಾಗರಾಜ್, ಬ್ಯಾತಳ್ಳಿ ನಾಗರಾಜ್ ಉಪಸ್ಥಿತರಿದ್ದರು.

ಕಾಂತರಾಜು ಆಯೋಗ ವರದಿ ಜಾರಿಗೆ ಆಗ್ರಹ



ಮೈಸೂರು, ನ.25(ಜಿಎ)–ರಾಜ್ಯ ಸರ್ಕಾರ ಕಾಂತರಾಜು ಆಯೋಗದ ವರದಿ ಜಾರಿಗೆ ತರಬೇಕೆಂದು ಗಾಂಧಿನಗರದ ದಲಿತ ಪ್ಯಾಂಥರ್ಸ್ ಸಂಘಟನೆ ಮುಖ್ಯಸ್ಥ ಗಿರಿಯಣ್ಣ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಗಣತಿ ವರದಿ ಜಾರಿಯಾದಲ್ಲಿ ಸಮಾಜದ ಕಟ್ಟಕಡೆಯ ಜನರಿಗೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ. ಹೀಗಾಗಿ ಸರ್ಕಾರ ಪ್ರಬಲ ಸಮುದಾಯದ ಮಠಾಧೀಶರು, ರಾಜಕೀಯ ಪಕ್ಷಗಳ ಮುಖಂಡರು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿಯಬಾರದು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಯೋಗ ನರಸಿಂಹ, ಕಿರಣ್‌ಕುಮಾರ್, ಜವರಪ್ಪ, ಸುರೇಶ್, ನಾಗಣ್ಣ ಹಾಜರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ಗ್ಯಾಸ್ಟ್ರೋಸ್ಕೋಪಿ; ಎಂಡೋಸ್ಕೋಪಿ ಶಿಬಿರ



ಮೈಸೂರು, ನ.25– ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಗ್ಯಾಸ್ಟ್ರೋಸ್ಕೋಪಿ ಕಾರ್ಯಾಗಾರ ಹಾಗೂ ಎಂಡೋಸ್ಕೋಪಿ ಶಿಬಿರ ಆಯೋಜಿಸಲಾಗಿತ್ತು.

ಆಸ್ಪತ್ರೆ ನಿರ್ದೇಶಕರೂ ಆದ ಲ್ಯಾಪ್ರೋಸ್ಕೋಪಿ ಹಾಗೂ ಎಂಡೋಸ್ಕೋಪಿ ತಜ್ಞರಾದ ಡಾ.ಜಿ.ಸಿದ್ದೇಶ್ ನೇತೃತ್ವದಲ್ಲಿ ನಡೆದ ಗ್ಯಾಸ್ಟ್ರೋಸ್ಕೋಪಿ ಕಾರ್ಯಾಗಾರದಲ್ಲಿ ರಾಜ್ಯದ ವಿವಿಧೆಡೆಯಿಂದ 19 ಶಸ್ತ್ರ ತಜ್ಞರು ಭಾಗವಹಿಸಿದ್ದರು. ಹಾಗೆಯೇ ವಿಶೇಷ ಶಿಬಿರದಲ್ಲಿ 50ಕ್ಕೂ ಹೆಚ್ಚು ಮಂದಿ ರಿಯಾಯಿತಿ ದರದಲ್ಲಿ ಎಂಡೋಸ್ಕೋಪಿ ಪರೀಕ್ಷೆ ಮಾಡಿಸಿಕೊಂಡರು. ಎರಡು ದಿನಗಳ ಕಾರ್ಯಾಗಾರ ಹಾಗೂ ಶಿಬಿರ ಯಶಸ್ವಿಯಾಗಿ ಸಮಾರೋಪಗೊಂಡಿತು. ಆಸ್ಪತ್ರೆಯ ಡಾ.ಅಂಜಲಿ ಸಿದ್ದೇಶ್, ಡಾ.ಹೆಚ್.ವಿ.ಶಿವರಾವ್, ಡಾ.ಹೆಚ್.ಎನ್.ದಿನೇಶ್, ಡಾ.ಶಫಿ ಮತ್ತಿತರರು ಪಾಲ್ಗೊಂಡಿದ್ದರು.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ನ.25– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನ ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, http://shp.karnataka.gov.in ಡಿಸೆಂಬರ್ 15ರೊಳಗೆ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 0821–2422088 ಸಂಪರ್ಕಿಸಬಹುದು.

ಶ್ರೀಮತಿ ಚಂದ್ರಮ್ಮ ನಿಧನ



ಮೈಸೂರು, ನ.25– ಎಂಸಿಡಿಸಿಸಿ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಸಿ.ಪುಟ್ಟೇಗೌಡರ ಧರ್ಮಪತ್ನಿ ಚಂದ್ರಮ್ಮ(62) ಅವರು ಶನಿವಾರ ಮೈಸೂರಿನಲ್ಲಿ ನಿಧನರಾದರು. ಇವರು ಪತಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ತಿ.ನರಸೀಪುರ ತಾಲೂಕಿನ ಚಿದರವಳ್ಳಿ ಗ್ರಾಮದ ಜಮೀನಿನಲ್ಲಿ ಭಾನುವಾರ ಬೆಳಗ್ಗೆ 11ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಹೆಡಿಯಾಲದ ಮಹಿಳೆ ಬಲಿ ಪಡೆದ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭ

200ಕ್ಕೂ ಹೆಚ್ಚು ಸಿಬ್ಬಂದಿ, 3 ಸಾಕಾನೆ, 50 ಸಿಸಿ ಕ್ಯಾಮರಾ, 1 ಡ್ರೋನ್, 1 ದೊಡ್ಡ ಬೋನ್





ಮೈಸೂರು,ನ.25(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯದಲ್ಲಿ ಮಹಿಳೆ ಬಲಿ ಪಡೆದ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭವಾಗಿದ್ದು, 200ಕ್ಕೂ ಹೆಚ್ಚು ಸಿಬ್ಬಂದಿ, 50 ಸಿಸಿ ಕ್ಯಾಮರಾ, ಒಂದು ಡ್ರೋನ್ ಹಾಗೂ ತುಮಕೂರಿನಿಂದ ತರಲಾಗಿರುವ ಬೃಹತ್ ಬೋನ್ ಬಳಸಿ ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗಿದೆ.

ನಂಜನಗೂಡು ತಾಲೂಕಿನ ಬಳ್ಳೂರು ಹುಂಡಿ ಗ್ರಾಮದ ರತ್ನಮ್ಮ ಎಂಬುವರನ್ನು ಬಲಿ ಪಡೆದಿದ್ದ ಹುಲಿ ಸೆರೆಗೆ ವ್ಯಾಪಕ ಒತ್ತಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಶನಿವಾರ ಬೆಳಗ್ಗಿನಿಂದಲೇ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭಿಸಲಾಗಿದ್ದು, ಬಂಡೀಪುರದ ರಾಂಪುರ ಕ್ಯಾಂಪ್‌ನಲ್ಲಿನ ಸಾಕಾನೆಗಳಾದ ಪಾರ್ಥ, ರೋಹಿತ ಹಾಗೂ ಹಿರಣ್ಯಾ ಆನೆಯನ್ನು ಹುಲಿ ಸೆರೆ ಕಾರ್ಯಾಚರಣೆಗೆ ಕರೆತರಲಾಗಿದೆ. ಅಲ್ಲದೆ ಹ್ಯಾಂಡ್‌ಪೋಸ್ಟ್ ವಿಶೇಷ ಹುಲಿ ಸಂರಕ್ಷಣಾ ದಳದ 26 ಮಂದಿ, ಚಿರತೆ ಕಾರ್ಯಪಡೆಯ 6, ಆನೆ ಕಾರ್ಯ ಪಡೆಯ 7, ಹೆಡಿಯಾಲ ವಲಯದ 14, ನುಗು ವಲಯದ 10 ಸಿಬ್ಬಂದಿಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಗಿದೆ. ಇದರೊಂದಿಗೆ ನಾಗಣಾಪುರ, ಡೋರನಕಟ್ಟೆ, ವೆಂಕಟಗಿರಿ ಕಾಲೋನಿ ಹಾಗೂ ಮಡೆಯನಪುರ ಹಾಡಿಯಿಂದ ತಲಾ 25ರಂತೆ 100 ಮಂದಿ ಬುಡಕಟ್ಟು ಸಮುದಾಯ ಪರಿಣತರನ್ನು ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜಿಸಿಕೊಳ್ಳಲಾಗಿದೆ.

ಕಾರ್ಯಾಚರಣೆಯಲ್ಲಿ ಒಂದು ಡ್ರೋನ್, 5 ಜಿಎಸ್‌ಎಂ ಕ್ಯಾಮರಾ ಬಳಸಿಕೊಳ್ಳಲಾಗಿದೆ. ಅಲ್ಲದೆ, ಹುಲಿ ಸೆರೆ ಹಿಡಿಯುವುದಕ್ಕಾಗಿ ತುಮಕೂರಿನಿಂದ ದೊಡ್ಡ ಬೋನ್ ತಂದು, ಮಹಿಳೆ ಮೇಲೆ ದಾಳಿ ಮಾಡಿದ ಸ್ಥಳದಲ್ಲಿ ಅಳವಡಿಸಲಾಗಿದೆ. ಈಗಾಗಲೇ ಹುಲಿ ದಾಳಿ ನಡೆಸಿದ ಸ್ಥಳದ ಸುತ್ತಮುತ್ತಲಿನ ಪ್ರದೇಶವನ್ನು ತಜ್ಞರು ಹಾಗೂ ಹಿರಿಯ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿದ್ದು, ಹುಲಿ ಚಲನವಲನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಕಾಡಂಚಿನ ಹೊಲಗಳಿಗೆ ಬರದಂತೆ ಸ್ಥಳೀಯರಿಗೆ ಸೂಚನೆ ನೀಡಲಾಗಿದೆ.

> “ಮಹಿಳೆ ಮೇಲೆ ದಾಳಿ ನಡೆಸಿದ ಹುಲಿ ಸೆರೆಗೆ ಸರ್ವರೀತಿ ಪ್ರಯತ್ನ ಮಾಡಲಾಗಿದೆ. ಹುಲಿ ದಾಳಿ ಮಾಡಿದ ಸ್ಥಳದಲ್ಲಿ ಸಿಸಿ ಕ್ಯಾಮರಾ, ಡ್ರೋನ್ ಬಳಸಲಾಗುತ್ತಿದೆ. 3 ಸಾಕಾನೆ ಹಾಗೂ 200 ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆ ಆರಂಭಿಸಲಾಗಿದೆ. ಸ್ಥಳೀಯರ ಭಾವನೆಯನ್ನು ಗೌರವಿಸುವ ನಿಟ್ಟಿನಲ್ಲಿ ಕಾರ್ಯಾಚರಣೆ ಚುರುಕಾಗಿ ನಡೆಸಲಾಗುತ್ತಿದೆ. ಸ್ಥಳದಲ್ಲಿಯೇ ಪಶುವೈದ್ಯರ ತಂಡವಿದ್ದು, ಕಾಡಂಚಿನ ಗ್ರಾಮಗಳ ಜನರು ಕಟ್ಟೆಚ್ಚರದಿಂದಿರುವಂತೆ ಸಲಹೆ ನೀಡಲಾಗಿದೆ.
>
> –ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ



ಬಸ್ತಿಹೊಸಕೋಟೆಯಲ್ಲಿ ಬಾಹುಬಲಿಗೆ ಅದ್ದೂರಿ ಮಸ್ತಕಾಭಿಷೇಕ



ಕಾವೇರಿ ನೀರು, ಎಳನೀರು, ಶ್ರೀಗಂಧ, ಮೊಸರು, ಕ್ಷೀರ ಸೇರಿದಂತೆ ವಿವಿಧ ಅಭಿಷೇಕ, ಸಹಸ್ರಾರು ಜನರು ಭಾಗಿ

ಕೆ.ಆರ್.ಪೇಟೆ, ನ.25– ತಾಲೂಕಿನ ಬಸ್ತಿ ಹೊಸಕೋಟೆಯ ಕೆಆರ್‌ಎಸ್ ಅಣೆಕಟ್ಟೆ ಬಳಿ ಇರುವ 18 ಅಡಿ ಎತ್ತರದ ಭಗವಾನ್ ಶ್ರೀಬಾಹುಬಲಿ ಸ್ವಾಮಿ ಮೂಲ ವಿಗ್ರಹದ ಪುನರ್ ಪ್ರತಿಷ್ಠಾಪನೆ, ಜಲಾಭಿಷೇಕ ಹಾಗೂ ಮಸ್ತಕಾಭಿಷೇಕ ಯುಗಳ ಮುನಿ ಅಮೋಘಕೀರ್ತಿ ಮಹಾರಾಜರು ಮತ್ತು ಅಮರ ಕೀರ್ತಿ ಮಹಾರಾಜರ ನೇತೃತ್ವದಲ್ಲಿ ಅದ್ದೂರಿಯಾಗಿ ನಡೆಯಿತು.

ಶನಿವಾರ ಮಧ್ಯಾಹ್ನ ಒಂದು ಗಂಟೆಯಿಂದ ಬಾಹುಬಲಿ ಮೂರ್ತಿಗೆ ಜನ್ಮ ಜಲಾಭಿಷೇಕ ಆರಂಭವಾಯಿತು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು, ಜೈನ ಅನುಯಾಯಿಗಳು ಶ್ರೀಕ್ಷೇತ್ರದ ಅಭಿವೃದ್ಧಿಗೆ ನಿಗದಿಗೊಳಿಸಿದ್ದ 1100 ರೂ. ಹಾಗೂ 11000 ರೂ.ಗಳ 1008 ಕಳಸಗಳ ಮೂಲಕ ಬಾಹುಬಲಿ ಸ್ವಾಮಿಗೆ ಜಲಾಭಿಷೇಕ ನೆರವೇರಿಸಿ ಪುಳಕಿತರಾದರು. ನಂತರ ಮಹಾರಾಜ್ ಸಂತರು ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಗವಾನ್ ಬಾಹುಬಲಿ ಮೂರ್ತಿಗೆ ದೀಕ್ಷಾ ಕಲ್ಯಾಣ ಪೂಜೆ ನೆರವೇರಿಸಿದರು.

ಅಮೋಘಕೀರ್ತಿ ಮಹಾರಾಜರು ಮಾತನಾಡಿ, ದಕ್ಷಿಣ ಭಾರತದಲ್ಲಿ ಮೊದಲು ಚಾವುಂಡರಾಯನ ಕೃಪೆಯಿಂದ ವಿಶ್ವಪ್ರಸಿದ್ಧ ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿ ಸ್ಥಾಪಿಸಲಾಗಿದೆ. ಇಂದು ಪ್ರತಿಷ್ಠಾಪಿಸುತ್ತಿರುವ ಕಾವೇರಿ ಧಾಮ ಬಾಹುಬಲಿ ಗೊಮ್ಮಟೇಶ್ವರ ವಿಗ್ರಹ ಹಾಗೂ ಬಸದಿಗಳನ್ನು ನಿರ್ಮಿಸಿರುವುದು ಕ್ರಿಶ 1147ರಲ್ಲಿ ಹೊಯ್ಸಳ ದೊರೆ ಬಿಟ್ಟಿದೇವನ(ವಿಷ್ಣುವರ್ಧನ) ಆಪ್ತ ಪ್ರಧಾನ ದಂಡನಾಯಕ

ಕೆ.ಆರ್. ಪೇಟೆ ತಾಲೂಕಿನ ಬಸ್ತಿ ಹೊಸಕೋಟೆ ಬಾಹುಬಲಿ ಮೂರ್ತಿಗೆ ಎಳನೀರು, ಜಲಾಭಿಷೇಕ, ಕುಂಕುಮ, ಅರಿಶಿನ, ಗಂಧ, ಹಾಲು ಸೇರಿದಂತೆ ವಿವಿಧ ದ್ರವ್ಯಗಳಿಂದ ಅಭಿಷೇಕ ಮಾಡಲಾಯಿತು.

ಪುನಿಸಿಮಯ್ಯ ಎಂಬುದು ಇಲ್ಲಿ ದೊರಕಿರುವ ಶಿಲಾಶಾಸನದಿಂದ ತಿಳಿದು ಬರುತ್ತದೆ. ಇದು ವಿಶ್ವದ 3ನೇ ಹಳೆಯ ಗೊಮ್ಮಟೇಶ್ವರ ಮೂರ್ತಿಯಾಗಿದೆ. ಹಳೆಯ ಪರಂಪರೆ, ಹಳೆಯಮೂರ್ತಿ ಹಳೆಯ ಸಂಪ್ರದಾಯದ ಭಾಗ್ಯ ಎಲ್ಲರಿಗೂ ಸಿಗುವುದಿಲ್ಲ. ಅಂಥಹ ಪುಣ್ಯ ನಮಗೆ ಸಿಕ್ಕಿದೆ. ಜನರಲ್ಲಿ ಧಾರ್ಮಿಕ ಭಾವನೆಗಳನ್ನು ಮೂಡಿಸಲು ಇವು ಸಾಂಸ್ಕೃತಿಕ ರಾಯಭಾರಿಗಳಂತೆ ಕೆಲಸ ಮಾಡುತ್ತಾ ಕಾವೇರಿ ಪುಣ್ಯನದಿ ದಡದಲ್ಲಿ ಹೋಗಿ ಜಪ, ಸ್ನಾನ ಮಾಡಿದರೆ ನೂರು ಪಟ್ಟು ಪುಣ್ಯ ಸಿಗಲಿದೆ ಎಂದರು.

ಇಲ್ಲಿ ನಮಗೆ ಬಾಹುಬಲಿ ಮೂರ್ತಿ ಹಾಗೂ ನದಿ ಎರಡೂ ಸಿಕ್ಕಿರುವುದು ಈ ನಾಡಿನ ಅದೃಷ್ಟ ಮುಂದಿನ ದಿನಗಳಲ್ಲಿ ಬಸದಿ ಹೊಸಕೋಟೆ ಸ್ಥಳ ವಿಶ್ವ ಪ್ರಸಿದ್ಧ ಸ್ಥಳವಾಗಲಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ಮೂರ್ತಿ ಸ್ಥಳಾಂತರ ಮಾಡುವಾಗ 2 ಬಾರಿ ಕಾವೇರಿ ನೀರನ್ನು ಅರ್ಪಿಸಿ ಸ್ಥಳಾಂತರಿಸಲಾಯಿತು. ಇದರಿಂದಾಗಿ ನಮಗೆ ಒಳ್ಳೆಯದಾಗಿದ್ದು ಮುಂದಿನ ದಿನಗಳಲ್ಲಿ ಭಗವಾನ್ ಬಾಹುಬಲಿ ಮೂರ್ತಿಗೆ ಅಭಿಷೇಕ ಮಾಡುವಾಗ ಕಾವೇರಿ ನೀರಿನಿಂದ ಮೊದಲು ಅಭಿಷೇಕ ಮಾಡಿ ನಂತರ ಪೂಜಾ ಕೈಂಕರ್ಯಗಳನ್ನು ಮಾಡಲು ತೀರ್ಮಾನಿಸಲಾಗಿದೆ. ಭೂಗರ್ಭದೊಳಗೆ ಅಡಗಿದ್ದ ಮೂರ್ತಿಗಳನ್ನು ಹೊರತೆಗೆದು ಪ್ರತಿಷ್ಠಾಪನೆ ಕಾರ್ಯದಲ್ಲಿ ಶಿಲ್ಪಿಗಳು ಒಂದು ತಿಂಗಳ ಕಾಲ ಹಗಲಿರುಳು ಶ್ರಮಿಸಿದ್ದಾರೆ. ಜೈನ ಸಮುದಾಯದ ಮುಖಂಡರು ಇಲ್ಲಿ ಯಾತ್ರಿ ನಿವಾಸ ನಿರ್ಮಾಣಕ್ಕೆ ಮುಂದಾಗಿರುವುದು ಸಂತಸದ ವಿಷಯ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಯತಿ ಮುನಿಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಅಮೋಘಕೀರ್ತಿ ಮಹಾರಾಜರು ಬಸದಿ ಹೊಸಕೋಟೆ ಕ್ಷೇತ್ರಕ್ಕೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಉತ್ತಮ ರಸ್ತೆ, ತಂಗಲು ಯಾತ್ರಿನಿವಾಸ ಸೇರಿದಂತೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲು ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಸಚಿವರು ಕೂಡಲೇ ಎಸಿ ನಂದೀಶ್‌ಗೆ ಸೂಚಿಸಿ ಶ್ರೀಕೇತ್ರಕ್ಕೆ ಬೇಕಾಗಿರುವ ಕೆಲಸಗಳನ್ನು ಪಟ್ಟಿ ಮಾಡಿ ಆದ್ಯತೆ ಮೇರೆಗೆ ಆದಷ್ಟು ಶೀಘ್ರ ಮೂಲ ಸೌಲಭ್ಯ ಕಲ್ಪಿಸುವಂತೆ ಸೂಚಿಸಿದರು.

> ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಇಂತಹ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಇರುವುದು ನಮ್ಮೆಲ್ಲರ ಸೌಭಾಗ್ಯ. ಸುಂದರ ಪರಿಸರದಲ್ಲಿ ನೆಲೆ ನಿಂತಿರುವ ಭಗವಾನ್ ಬಾಹುಬಲಿ ಮೂರ್ತಿಯನ್ನು ನೋಡುವುದೇ ಒಂದು ಸೊಬಗು. ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಸಹಕಾರ ನೀಡುತ್ತೇನೆ.
> – ಹೆಚ್.ಟಿ.ಮಂಜು, ಶಾಸಕ.

ಕಾರ್ಯಕ್ರಮದಲ್ಲಿ ಗೊಮ್ಮಟೇಶ್ವರ ಮೂರ್ತಿಗೆ ಕಾವೇರಿ ಜಲಾಭಿಷೇಕ, ಎಳನೀರು ಅಭಿಷೇಕ, ಕಬ್ಬಿನ ಹಾಲಭಿಷೇಕ, ಮೊಸರಿನ ಅಭಿಷೇಕ, ಕ್ಷೀರಾಭಿಷೇಕ, ಕಲ್ಕಿಚೂರ್ಣಾಭಿಷೇಕ, ಕಶಾಯಾಭಿಷೇಕ, ಚಂದನಾಭಿಷೇಕ, ಶ್ರೀಗಂಧಾಭಿಷೇಕ, ಅಷ್ಟ ಗಂಧಾಭಿಷೇಕಗಳನ್ನು, ಗರಿಷ್ಟ ಎರಡೂವರೆ ಲಕ್ಷದಿಂದ ಕನಿಷ್ಠ 25ಸಾವಿರ ರೂ.ಗಳಿಗೆ ಭಕ್ತರು ಬಿಟ್ ಕೂಗುವ ಮೂಲಕ ಗೊಮ್ಮಟ ಮೂರ್ತಿಗೆ ಮೊದಲ ಅಭಿಷೇಕ ಮಾಡಿ ತಮ್ಮ ಭಕ್ತಿಭಾವ ಮೆರೆದರು.

ಕಾರ್ಯಕ್ರಮದಲ್ಲಿ ಕಾವೇರಿಧಾಮ ಬಾಹುಬಲಿ ದಿಗಂಬರ ಜೈನ ಟ್ರಸ್ಟ್‌ನ ಉಪಾಧ್ಯಕ್ಷ ಡಾ.ಕುಮಾರ್, ಎನ್.ಪ್ರಸನ್ನಕುಮಾರ್, ನಾಗರಾಜು, ಚಂದ್ರಪ್ರಕಾಶ್ ಜೈನ್, ಸಂಚಾಲಕ ವಜ್ರ ಪ್ರಸಾದ್, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ಕಾಂಗ್ರೆಸ್ ಮುಖಂಡ ವಿಜಯ್‌ರಾಮೇಗೌಡ, ತಹಸೀಲ್ದಾರ್ ನಿಸರ್ಗಪ್ರಿಯ, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಮ್ ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಕಾವೇರಿ ಹೋರಾಟ: ಸರದಿ ಉಪವಾಸ ಚಳವಳಿ ಆರಂಭ



ಮಂಡ್ಯ, ನ.25– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸಲು ಶಿಫಾರಸ್ಸು ಮಾಡಿರುವ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಗರದಲ್ಲಿ ಸರದಿ ಉಪವಾಸ ಚಳವಳಿ ಆರಂಭಿಸಿದೆ.

ರೈತ ಸಂಘದ ಮುಖಂಡ ಗುನ್ನಾಯಕನಹಳ್ಳಿ ಮುದ್ದೇಗೌಡ, ಪಣಕನಹಳ್ಳಿ ಬೋರಲಿಂಗೇಗೌಡ, ದೊಡ್ಡ ಗರುಡನಹಳ್ಳಿ ಕೃಷ್ಣೇಗೌಡ, ಕಿರಂಗೂರು ಪಾಪು, ಪಣಕನಹಳ್ಳಿ ಪಿ.ಜಿ.ನಾಗೇಂದ್ರ, ಸಿದ್ದಯ್ಯನಕೊಪ್ಪಲು ಎಸ್.ಕೆ.ರಾಮಕೃಷ್ಣ ಮೊದಲ ದಿನ ಉಪವಾಸ ನಡೆಸಿ ಕಾವೇರಿ ವಿಚಾರದಲ್ಲಿ ನ್ಯಾಯಕ್ಕಾಗಿ ಒತ್ತಾಯಿಸಿದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದೆ. ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದೆ. ಆದರೂ ಪ್ರಾಧಿಕಾರ ಮತ್ತು ನಿಯಂತ್ರಣ ಸಮಿತಿ ನೀರು ಹರಿಸಿ ಎಂದು ಆದೇಶ ಮಾಡುತ್ತಿವೆ. ರಾಜ್ಯಕ್ಕೆ ಭೇಟಿ ನೀಡಿ ವಾಸ್ತವ ಪರಿಸ್ಥಿತಿ ಅವಲೋಕಿಸದೆ ಏಕಪಕ್ಷೀಯವಾಗಿ ತಮಿಳುನಾಡಿನ ಹಿತ ಕಾಯುವ ಮೂಲಕ ಕರ್ನಾಟಕಕ್ಕೆ ದೊಡ್ಡ ಅನ್ಯಾಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಮಾತನಾಡಿ, ಚಳವಳಿ ಕೈ ಬಿಡಿ ಎನ್ನುವ ಜಿಲ್ಲಾ ಉಸ್ತುವಾರಿ ಸಚಿವರು, ಮುಖ್ಯಮಂತ್ರಿ ಮತ್ತು ನೀರಾವರಿ ಸಚಿವರ ಜೊತೆ ಮಾತುಕತೆ ನಡೆಸಿ ಕರ್ನಾಟಕದ ಹಿತ ಕಾಪಾಡಲು ಒತ್ತಾಯಿಸಲಿ. ಹೋರಾಟ ರೂಪಿಸುವುದು ಸುಲಭದ ಮಾತಲ್ಲ. ನ್ಯಾಯ ಸಿಗುವವರೆಗೂ ಹೋರಾಟವನ್ನು ಮುಂದುವರಿಸುವ ಮೂಲಕ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಾಗುವುದು ಎಂದರು.

ಸಮಿತಿ ಕೆ.ಬೋರಯ್ಯ, ಇಂಡುವಾಳು ಚಂದ್ರಶೇಖರ್, ಕನ್ನಡಸೇನೆ ಮಂಜುನಾಥ್, ನಾರಾಯಣ್, ಬದರಿ ನಾರಾಯಣ್, ಸಿ.ಟಿ.ಮಂಜುನಾಥ್, ಎಂ.ಎಲ್.ತುಳಸೀಧರ್ ಭಾಗವಹಿಸಿದ್ದರು.

ಸ್ವಸಹಾಯ ಗುಂಪುಗಳಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ: ಸಿಆರ್‌ಎಸ್



ನಾಗಮಂಗಲ: ಮಹಿಳೆಯರು ಆರ್ಥಿಕವಾಗಿ, ಸ್ವಾವಲಂಬಿಗಳಾಗಿ ತಮ್ಮ ಮಕ್ಕಳ ಹಾಗೂ ಕುಟುಂಬದ ಉಜ್ವಲ ಭವಿಷ್ಯ ರೂಪಿಸುವ ಜೊತೆಗೆ ನೆಮ್ಮದಿಯ ಜೀವನ ಸಾಗಿಸಲು ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ತಾಲೂಕಿನ ಬಡಗುಡಮ್ಮದೇವಿ ದೇವಸ್ಥಾನದ ಆವರಣದಲ್ಲಿ ಸ್ವಸಹಾಯ ಗುಂಪುಗಳಿಗೆ ಬಡ್ಡಿ ರಹಿತ ಸಾಲ ಮಂಜೂರಾತಿ ಪತ್ರಗಳ ವಿತರಣೆ ಹಾಗೂ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಾಗಮಂಗಲ ತಾಲೂಕಿನ ಸ್ವಸಹಾಯ ಗುಂಪುಗಳಿಗೆ 5.27 ಕೋಟಿ, ಕ್ಷೀರ ಸಮೃದ್ಧಿ ಸಾಲ 9.75 ಲಕ್ಷ, ಮಧ್ಯಮಾವಧಿ ಸಾಲ 1.81 ಕೋಟಿ ಸೇರಿ ಒಟ್ಟು 8 ಕೋಟಿಗಳಷ್ಟು ಸಾಲ ವಿತರಿಸಲಾಗಿದೆ. ಕ್ಷೇತ್ರದ ಜನತೆಗೆ ಮಾತು ಕೊಟ್ಟಂತೆ ಎಲ್ಲಾ ಭರವಸೆ ಈಡೇರಿಸುತ್ತಿದ್ದೇನೆ. ಸರ್ಕಾರದ ಆಡಳಿತ ಜನಪರವಾಗಿದೆ ಎನ್ನುವುದಕ್ಕೆ ಇದೆಲ್ಲಾ ಸಾಕ್ಷಿಯಾಗಿದೆ ಎಂದರು.

ಡಿಸಿಸಿ ಬ್ಯಾಂಕ್‌ನಿಂದ ತಾಲೂಕಿನಲ್ಲಿ ಇದುವರೆಗೂ 17 ಕೋಟಿ ರೂ.ಗಳನ್ನು ಬಡ್ಡಿರಹಿತ ಸಾಲ ನೀಡಲಾಗಿದೆ. ಇತ್ತೀಚೆಗೆ ದೇವಲಾಪುರ ಗ್ರಾಪಂ ವ್ಯಾಪ್ತಿಗೆ ಸಬ್ಸಿಡಿ ದರದಲ್ಲಿ 2 ಕೋಟಿ ಸಾಲ ನೀಡಲಾಗಿದೆ ಎಂದರು.

ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿಗೂ ಆದ್ಯತೆ ನೀಡಿದ್ದೇವೆ. ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದ್ದೇವೆ. ಸರ್ಕಾರದ ಶಕ್ತಿ ಯೋಜನೆಯಡಿ ಇದುವರೆಗೂ ರಾಜ್ಯದಲ್ಲಿ 100 ಕೋಟಿ ಮಹಿಳೆಯರು ಪ್ರಯಾಣಿಸಿದ್ದಾರೆ. ಕಾಂಗ್ರೆಸ್ ಅಧಿಕಾರದ 5 ವರ್ಷಗಳ ಕಾಲ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿರುತ್ತವೆ. ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ. ಅಪಪ್ರಚಾರಕ್ಕೆ ಕಿವಿಗೊಡದಿರಿ. ಕಂದಾಯ ಸಚಿವರ ನೇತೃತ್ವದಲ್ಲಿ ಇತ್ತೀಚೆಗೆ ದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವರನ್ನು ಭೇಟಿ ನೀಡಿ ಬರ ಪರಿಹಾರದ ಹಣ ಬಿಡುಗಡೆಗೆ ಮನವಿ ಮಾಡಿದ್ದೇವೆ. ಇದು ಜನರ ಮೇಲಿನ ಕಾಳಜಿ ಸೂಚಿಸುತ್ತದೆ ಎಂದರು.

ಬೆಳೆ ಪರಿಹಾರ, ಕುಡಿಯುವ ನೀರಿನ ಕೊರತೆ, ಜಾನುವಾರುಗಳ ಮೇವು ಹೀಗೆ ಎಲ್ಲವನ್ನು ಕೇಂದ್ರ ತಂಡಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಕರ್ನಾಟಕದಿಂದ 4 ಲಕ್ಷ ಕೋಟಿ ಹಣವನ್ನು ಕೇಂದ್ರಕ್ಕೆ ತೆರಿಗೆ ರೂಪದಲ್ಲಿ ಕಟ್ಟುತ್ತಿದ್ದೇವೆ. ದೇಶದಲ್ಲಿ 2ನೇ ತೆರಿಗೆ ಕಟ್ಟುವ ಸ್ಥಾನದಲ್ಲಿ ನಾವಿದ್ದೇವೆ. ಇದರಲ್ಲಿ ಕೇವಲ 50 ಸಾವಿರ ಕೋಟಿಯಷ್ಟೆ ರಾಜ್ಯಕ್ಕೆ ವಾಪಸ್ಸು ನೀಡುತ್ತಿದೆ. ಹಾಗಾಗಿ ಕೇಂದ್ರ ಸರ್ಕಾರ ಬರ ಪರಿಹಾರದ ಹಣ ವಿಳಂಬ ಮಾಡುವುದು ಸರಿ ಕಾಣಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಧನಲಕ್ಷ್ಮಿ ಚಲುವರಾಯಸ್ವಾಮಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ನಿರ್ದೇಶಕರಾದ ದಿನೇಶ್, ಮೂರ್ತಿ, ಅಶೋಕ್, ಪಾಂಡವಪುರ ಎಸಿ ನಂದೀಶ್, ಡಿಸಿಸಿ ಬ್ಯಾಂಕ್ ಸಿಇಓ ವನಜಾಕ್ಷಿ ಹಾಗೂ ಸೇರಿದಂತೆ ಇನ್ನಿತರರು ಹಾಜರಿದ್ದರು.

ಇಂದು ಪ್ರಧಾನಿಗಳ 'ಮನ್ ಕಿ ಬಾತ್' ; ಮೈಸೂರು ರೈಲ್ವೆ ನಿಲ್ದಾಣದಲ್ಲಿ ನೇರ ಪ್ರಸಾರ

ವಿವಿಧ ರೈಲ್ವೆ ನಿಲ್ದಾಣಗಳಲ್ಲೂ ಪ್ರಸಾರ ವ್ಯವಸ್ಥೆ



ಮೈಸೂರು,ನ.25(ಪಿಎಂ)– ನೈರುತ್ಯ ರೈಲ್ವೆ ಮೈಸೂರು ವಿಭಾಗದ ವತಿಯಿಂದ ನ.26ರಂದು ನಡೆಯುವ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ 'ಮನ್ ಕಿ ಬಾತ್' ಕಾರ್ಯಕ್ರಮದ ನೇರ ಪ್ರಸಾರವನ್ನು ವಿಭಾಗದ ವ್ಯಾಪ್ತಿಯ ವಿವಿಧ ರೈಲು ನಿಲ್ದಾಣಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಭಾಗದ ವ್ಯಾಪ್ತಿಯ ವಿವಿಧ ರೈಲು ನಿಲ್ದಾಣಗಳಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ನಡೆಸಿಕೊಡುವ ಪ್ರಸಿದ್ಧ 'ಮನ್ ಕಿ ಬಾತ್' ಕಾರ್ಯಕ್ರಮದ ನೇರ ಪ್ರಸಾರ ಆಯೋಜಿಸ ಲಾಗಿದೆ. ಈ ಪೈಕಿ ಮುಖ್ಯ ನೇರ ಪ್ರಸಾರವನ್ನು ಅಂದು ಬೆಳಗ್ಗೆ 11ಕ್ಕೆ ಮೈಸೂರು ರೈಲು ನಿಲ್ದಾಣ ಹಮ್ಮಿಕೊಳ್ಳಲಾಗಿದೆ. ಇದರಿಂದ ಪ್ರಧಾನ ಮಂತ್ರಿಗಳು ಹಂಚಿಕೊಳ್ಳುವ ಆಲೋಚನೆಗಳನ್ನು ತಿಳಿಯಲು ಸಾರ್ವಜನಿಕರಿಗೆ ಅವಕಾಶ ದೊರೆಯಲಿದೆ. ರೈಲ್ವೆ ಪ್ರಯಾಣಿಕರು ಮತ್ತು ಸಾರ್ವಜನಿಕರು ಈ ಅನನ್ಯ ಅವಕಾಶ ಬಳಸಿಕೊಳ್ಳಬೇಕೆಂದು ರೈಲ್ವೆಯ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರೂ ಆದ ಸಾರ್ವಜನಿಕ ಸಂಪರ್ಕ ಅಧಿಕಾರಿ ಜೆ.ಲೋಹಿತೇಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಎಫ್‌ಎಸ್‌ಐ ವತಿಯಿಂದ ಹೆಚ್‌ಆರ್ ಸಮ್ಮೇಳನ




ಮೈಸೂರು, ನ.25– ಎಂಪ್ಲಾಯಿ ಫೆಡರೇಶನ್ ಆಫ್ ಸದರ್ನ್ ಇಂಡಿಯಾ (ಇಎಫ್‌ಎಸ್‌ಐ) ವತಿಯಿಂದ ಮೈಸೂರಿನ ಎಸ್‌ಡಿಎಂಐಎಂಡಿ ಸಭಾಂಗಣದಲ್ಲಿ ಶನಿವಾರ 'ಹೆಚ್‌ಆರ್ ಸಮ್ಮೇಳನ' ಆಯೋಜಿಸಲಾಗಿತ್ತು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹಾಗೂ ಇಸ್ರೋ ಉಪಗ್ರಹ ಕೇಂದ್ರದ ಮಾಜಿ ನಿರ್ದೇಶಕ ಮೈಲಸ್ವಾಮಿ ಅಮದುರೈ ಅವರು ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ನಾವೀನ್ಯತೆಯ ಮಹತ್ವವನ್ನು ಒತ್ತಿ ಹೇಳಿದರಲ್ಲದೆ ಹೊಸ ಉಪಗ್ರಹಗಳ ರಚನೆ ಮತ್ತು ಉಡಾವಣೆ ಕುರಿತು ತಮ್ಮ ದೃಷ್ಟಿಕೋನವನ್ನು ಹಂಚಿಕೊಂಡರು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ) ಉಡಾವಣೆ ಮಾಡಿದ ಚಂದ್ರಯಾನ–1 ಮಹತ್ವಾಕಾಂಕ್ಷೆ ಯೋಜನೆ ಆಗಿತ್ತು. ಚಂದ್ರನ ಅಂಗಳದಲ್ಲಿ ಭಾರತದ ಮೊದಲ ಮಿಷನ್ ಕಳುಹಿಸುವಾಗ ಸಮರ್ಪಣಾಭಾವ ಹಾಗೂ ಪರಿಶ್ರಮ, ಬದ್ಧತೆಯಿಂದ ಎಲ್ಲರೂ ಕೆಲಸ ಮಾಡಿದರು ಎಂದು ತಿಳಿಸಿದರು.

ಇಎಫ್‌ಎಸ್‌ಐ, ಇಂಡಿಯಾ ಲೀಡರ್ ಕಮಿನ್ಸ್ ಮೆರಿಟರ್ ಅಧ್ಯಕ್ಷ ಹಾಗೂ ಸಿಓಓ ಡಾ.ಎನ್.ಮುತ್ತುಕುಮಾರ್ ಮಾತನಾಡಿ, ನಾವೀನ್ಯತೆ ಮತ್ತು ಸಹಭಾಗಿತ್ವದಿಂದ ಮಾತ್ರ ಉದ್ಯಮವನ್ನು ಉತ್ತುಂಗಕ್ಕೆ ಕೊಂಡೊಯ್ಯಬಹುದು. ನಮ್ಮ ದೇಶದ ಭವಿಷ್ಯ ನಮ್ಮ ಯುವ ಪೀಳಿಗೆಗೆ ಶಿಕ್ಷಣ ಮತ್ತು ಮೌಲ್ಯಗಳನ್ನು ತುಂಬುವಲ್ಲಿ ಅಡಗಿದೆ. ಅಲ್ಲದೆ, ಯಾವುದೇ ಉತ್ಪಾದನಾ ಕೈಗಾರಿಕೆಗಳು ಯಶಸ್ವಿಯಾಗಬೇಕಾದರೆ ಗುಣಮಟ್ಟಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಇಎಫ್‌ಎಸ್‌ಐ ಪ್ರಧಾನ ಕಾರ್ಯದರ್ಶಿ ಕೆ.ಮಾಣಿಕ್ಕಂ, ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಮೈಸೂರಿನ ಎಸ್‌ಡಿಎಂ ಐಎಂಡಿ ನಿರ್ದೇಶಕ ಡಾ.ಎಸ್.ಎನ್. ಪ್ರಸಾದ್ (ಲೆಫ್ಟಿನೆಂಟ್ ಕರ್ನಲ್), ಹೊಸ ಅವಕಾಶಗಳ ಸೃಷ್ಟಿ ಮತ್ತು ಉಳಿವಿಗಾಗಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಮಾತನಾಡಿದರು. ಇಎಫ್‌ಎಸ್‌ಐನ ಉಪಾಧ್ಯಕ್ಷ ತ್ಯಾಗು ವಲ್ಲಿಯಪ್ಪ, ಮಾನವ ಸಂಪನ್ಮೂಲ ವಿಭಾಗದಲ್ಲಿ ತಂತ್ರಜ್ಞಾನ ಬಳಕೆ ಬಗ್ಗೆ ಬೆಳಕು ಚೆಲ್ಲಿದರು.

ಡಿ.21ರಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನೂತನ ಪತ್ರಿಕಾ ಭವನದ ಶಂಕುಸ್ಥಾಪನೆ



ಮೈಸೂರು,ನ.25(ಪಿಎಂ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನೂತನ ಪತ್ರಿಕಾ ಭವನದ ಶಂಕುಸ್ಥಾಪನಾ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಸಂಘದ ನಿಯೋಗವು ಬೆಂಗಳೂರಿನ ಅವರ ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿ ಮಾಡಿ, ಆಹ್ವಾನಿಸಿತು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ತವರು ಜಿಲ್ಲೆ ಮೈಸೂರಿನಲ್ಲಿ ಅತ್ಯುತ್ತಮ ಪತ್ರಿಕಾ ಭವನ ನಿರ್ಮಾಣಕ್ಕೆ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದ್ದಲ್ಲದೆ, ಶಂಕುಸ್ಥಾಪನೆಯನ್ನು ಡಿ.21ರಂದು ಬೆಳಗ್ಗೆ 11ಕ್ಕೆ ಆಯೋಜಿಸುವಂತೆ ಸೂಚಿಸಿ, ತಾವು ಪಾಲ್ಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಇದ್ದರು. ನಿಯೋಗದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮಾಜಿ ಅಧ್ಯಕ್ಷ ಸಿ.ಕೆ.ಮಹೇಂದ್ರ, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ, ಗ್ರಾಮಾಂತರ ಕಾರ್ಯದರ್ಶಿ ಎಂ.ಮಹದೇವ್, ಕಾರ್ಯಕಾರಿ ಸಮಿತಿ ಸದಸ್ಯರಾದ ಹುಲ್ಲಹಳ್ಳಿ ಶ್ರೀನಿವಾಸ್, ಬಿ.ಆರ್.ಗಣೇಶ್, ದಾ.ರಾ.ಮಹೇಶ್ ಮತ್ತಿತರರು ಹಾಜರಿದ್ದರು.

ಭಾರತೀಯ ಕಲೆಗಳ ಕಲಿಕೆಗೆ ಪೋಷಕರು ಒತ್ತಾಸೆಯಾಗಬೇಕು

ನೃತ್ಯಾಲಯ ಟ್ರಸ್ಟ್ ಅಧ್ಯಕ್ಷೆ ಡಾ.ತುಳಸಿ ರಾಮಚಂದ್ರ ಅಭಿಮತ



ಮೈಸೂರು, ನ.25(ಎಸ್‌ಪಿಎನ್)–ಭಾರತೀಯ ಕಲೆಗಳ ಕಲಿಕೆ ಕೇವಲ ಶಿಕ್ಷಕರ ಹೊಣೆಗಾರಿಕೆ ಎನ್ನದೇ ಪೋಷಕರೂ ಇದರ ಜವಾಬ್ದಾರಿ ಹೊರಬೇಕು ಎಂದು ನೃತ್ಯಾಲಯ ಟ್ರಸ್ಟ್ ಅಧ್ಯಕ್ಷೆ ಹಿರಿಯ ಕಲಾವಿದೆ ಡಾ.ತುಳಸಿ ರಾಮಚಂದ್ರ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನೃತ್ಯ ವಿದ್ಯಾಪೀಠ (ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್)ದ ಸಹಯೋಗದೊಂದಿಗೆ 'ನರ್ತನ ಮೈತ್ರಿ' ಶೀರ್ಷಿಕೆಯಡಿ ಆಯೋಜಿಸಿದ್ದ ನೃತ್ಯ ಪ್ರದರ್ಶನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನೃತ್ಯ ವಿದ್ಯಾಪೀಠ ಸಂಸ್ಥೆಯು ಕಳೆದ 12 ವರ್ಷಗಳಿಂದ ಮಕ್ಕಳಿಗೆ ಭರತನಾಟ್ಯ, ಸಂಗೀತ ಸೇರಿದಂತೆ ಇತರೆ ಕಲೆಗಳ ಕಲಿಕೆಗೆ ವಿದುಷಿ ಸಿ.ಎನ್.ಅನಿತಾ ಅಮು ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಅಲ್ಲದೆ, ಮಕ್ಕಳ ಭವಿಷ್ಯದ ದೃಷ್ಟಿಯಿಂದ ಇಂತಹ ಕಲೆಗಳನ್ನು ಪರಿಚಯಿಸುವುದು ಇಂದಿನ ಕಾಲಘಟ್ಟ ಅನಿವಾರ್ಯ ಎಂದರು. ಸಂಗೀತ ಅಥವಾ ನೃತ್ಯವನ್ನು ಕಲಿ ಯುವ ವಿದ್ಯಾರ್ಥಿಗಳು ಕೇವಲ ಶಾಲಾ ಕೊಠಡಿಯಲ್ಲಿ ಕಲಿತು ಪ್ರದರ್ಶನ ಮಾಡುವುದು ಬೇರೆ, ನೂರಾರು ಕಲಾರಸಿಕರ ನಡುವೆ ಕಲೆಯನು ಪ್ರದರ್ಶಿಸುವುದೇ ಬೇರೆ ಅನುಭವ ನೀಡುತ್ತದೆ. ಹಾಗಾಗಿ ವಿದ್ಯಾರ್ಥಿಗಳು ನೂರಾರು ಪ್ರೇಕ್ಷಕರ ನಡುವೆ ಲಯಬದ್ಧವಾಗಿ ಪ್ರದರ್ಶಿಸಲು ಮುಂದಾಗಬೇಕು. ಇದು ಮುಂದಿನ ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ವಿದುಷಿ ಸಿ.ಎನ್.ಅನಿತ ಶಿಷ್ಯೆಯರಾದ ವೈಷ್ಣವಿ ಎಲ್.ಅರಸ್, ಎಸ್.ರಕ್ಷಿತ, ಡಿವಿಎಸ್‌ಕೆ ಶ್ರೀಹರಿಪ್ರಿಯ, ನಯನ ನಾಗರಾಜ್, ಎಸ್. ಅನಘ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಇವರಿಗೆ ವಿದ್ವಾನ್ ರಾಕೇಶ್ ಸುಧೀರ್ (ಹಾಡುಗಾರಿಕೆ), ವಿದ್ವಾನ್ ಬಿ.ಶಶಿ ಶಂಕರ್ (ಮೃದಂಗ), ವಿದ್ವಾನ್ ಶಶಾಂಕ್ ಜೋಡಿದಾರ್(ವೀಣೆ) ಸಾಥ್ ನೀಡಿದ್ದಾರೆ. ಈ ವೇಳೆ ಹಾಸನ ಜಿಲ್ಲೆ ಹೊಳೆ ನರಸೀಪುರದ ಸ್ವರ್ಣ ಶಿಕ್ಷಣ ಸಂಸ್ಥೆ ಪ್ರಾಂಶುಪಾಲೆ ಶೋಭ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜಿಯ ಜಿ.ಕೆ.ಕಮಲ ಉಪಸ್ಥಿತರಿದ್ದರು.


ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮರ್ಪಕ ನಿರ್ವಹಣೆಗೆ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ

ಜಾನುವಾರುಗಳಿಗೆ ಸೂಕ್ತ ರೀತಿ ಮೇವಿನ ವ್ಯವಸ್ಥೆ ಮಾಡುವಂತೆ ಸಲಹೆ

ಮೈಸೂರು, ನ.25(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಆದರೆ ಬೇಸಿಗೆಯಲ್ಲಿ ಸೂಕ್ತ ನಿರ್ವಹಣೆಗೆ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಬರ ನಿರ್ವಹಣೆ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಬೇಸಿಗೆಯಲ್ಲಿ ಎದುರಾಗುವ ಸವಾಲುಗಳ ನಿರ್ವಹಣೆಗೆ ವ್ಯವಸ್ಥಿತ ಪೂರ್ವತಯಾರಿ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದರು.

ಇದೇ ವೇಳೆ ಮುಂದಿನ ಮುಂಗಾರಿನವರೆಗೆ ಕುಡಿಯುವ ನೀರು ಕೊರತೆಯಾಗದಂತೆ ಕೈಗೊಳ್ಳಲಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸಂಭವಿಸಬಹುದಾದ ಮೇವಿನ ಕೊರತೆ ತಪ್ಪಿಸುವ ನಿಟ್ಟಿನಲ್ಲಿ ಮೇವು ವ್ಯಾಪಾರಿಗಳನ್ನು ಗುರುತಿಸಿ, ಸೂಕ್ತ ನಿರ್ದೇಶನ ನೀಡಬೇಕು. ಜೊತೆಗೆ ಜಾನುವಾರು ಶಿಬಿರಗಳ ಅವಶ್ಯಕತೆ ಬಗ್ಗೆ ಗಮನಹರಿಸಿ. ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಾಗುವುದರೊಳಗೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕರು ಹಾಗೂ ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕರಿಗೆ ಸೂಚನೆ ನೀಡಿದರು.



ಸದ್ಯಕ್ಕೆ ಸಮಸ್ಯೆಯಿಲ್ಲ: ಕಾವೇರಿ ಹಾಗೂ ಕಬಿನಿ ನೀರಿನ ಮಟ್ಟ ಆಧರಿಸಿ, ಮುಂದಿನ ಜುಲೈವರೆಗೆ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಗಂಭೀರ ಸಮಸ್ಯೆ ಉಂಟಾಗುವ ಸಾಧ್ಯತೆ ಇಲ್ಲ. ನಂತರದಲ್ಲಿ ಮುಂಗಾರು ಮಳೆಯಿಂದ ನೀರು ಹೊಂದಾಣಿಕೆಯಾಗಬಹುದು ಎಂದು ಕಾವೇರಿ, ಕಬಿನಿ, ಮೈಸೂರು ನಗರಪಾಲಿಕೆ ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶದ ಇಂಜಿನಿಯರ್‌ಗಳು ಮಾಹಿತಿ ನೀಡಿದರು.

ಪಾಲಿಕೆಯಿಂದ 3 ಪ್ಲಾನ್: ಮೈಸೂರು ನಗರದಲ್ಲಿ ನೀರು ಸರಬರಾಜು ಸಂಬಂಧ ಮೂರು ಯೋಜನೆ ರೂಪಿಸಿಕೊಳ್ಳಲಾಗಿದೆ. ಪ್ರಸ್ತುತ ಪರಿಸ್ಥಿತಿ ನಿರ್ವಹಣೆಗೆ ಪ್ಲಾನ್–ಎ, ಜಲಾಶಯಗಳ ನೀರಿನ ಮಟ್ಟ 65 ಅಡಿ ತಲುಪಿದರೆ ಪ್ಲಾನ್–ಬಿ ಹಾಗೂ ವಿಷಮ ಪರಿಸ್ಥಿತಿ ಎದುರಿಸಲು ಪ್ಲಾನ್–ಸಿ ರೂಪಿಸಿಕೊಂಡು ಎಲ್ಲಾ ಪರಿಸ್ಥಿತಿಯನ್ನೂ ನಿಭಾಯಿಸಲು ಸಿದ್ಧರಿರುವುದಾಗಿ ಮೈಸೂರು ನಗರಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅನಧಿಕೃತ ನೀರಿನ ಸಂಪರ್ಕಗಳ ಬಗ್ಗೆ ಎಚ್ಚರ ವಹಿಸುವುದರ ಜೊತೆಗೆ ಶೇ.15ರಷ್ಟು ನೀರು ವ್ಯರ್ಥವಾಗುವ ಸಾಧ್ಯತೆ ಬಗ್ಗೆಯೂ ಗಮನಹರಿಸಬೇಕು ಎಂದರು. ಕಾವೇರಿ ಹಾಗೂ ಕಬಿನಿ ಜಲಾಶಯಗಳ ಪರಿಸ್ಥಿತಿ ಬಗ್ಗೆ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಬೋರ್‌ವೆಲ್ ಬಗ್ಗೆ ಗಮನಹರಿಸಿ

ನಿಮ್ಮ ಕಾರ್ಯ ವ್ಯಾಪ್ತಿಯ ಬೋರ್‌ವೆಲ್‌ಗಳ ಪರಿಸ್ಥಿತಿ ಹಾಗೂ ಅವುಗಳಲ್ಲಿ ನೀರು ಬತ್ತಿದರೆ ಪರ್ಯಾಯ ಕ್ರಮವೇನು? ಎಂಬುದರ ಬಗ್ಗೆ ಇಂಜಿನಿಯರ್‌ಗಳು ಸಿದ್ಧತೆ ಮಾಡಿಕೊಳ್ಳಬೇಕು. ಚುನಾವಣಾ ನೀತಿ ಸಂಹಿತೆ ಜಾರಿಯಾಗುವುದರೊಳಗೆ ಎಲ್ಲಾ ಬೋರ್‌ವೆಲ್‌ಗಳನ್ನು ಗುರುತಿಸಿ, ಅವುಗಳಿಗೆ ದರ ನಿಗದಿಗೊಳಿಸುವ ಸಂಬಂಧ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಅನುದಾನ ಕೊರತೆಯಿಲ್ಲ: ಎಸ್‌ಡಿಆರ್‌ಎಫ್‌ನಲ್ಲಿ ಸಾಕಷ್ಟು ಅನುದಾನವಿದೆ. ಹಾಗಾಗಿ ಕುಡಿಯುವ ನೀರಿನ ಸೌಕರ್ಯಕ್ಕೆ ಬಳಕೆ ಮಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ಪ್ರತಿ ತಾಲೂಕಿಗೆ 25 ಲಕ್ಷ ರೂ. ವರ್ಗಾವಣೆ ಮಾಡಲಾಗುವುದು. ಮೂಲ ಸೌಕರ್ಯಗಳ ನಿರ್ವಹಣೆಗೆ ಜಲಜೀವನ್ ಮಿಷನ್ ಹಾಗೂ 15ನೇ ಹಣಕಾಸು ಯೋಜನೆ ಅನುದಾನವನ್ನು ಬಳಕೆ ಮಾಡಿಕೊಳ್ಳಬಹುದು ಎಂದು ಸಚಿವರು ತಿಳಿಸಿದರು. ಇದೇ ವೇಳೆ ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್, ವಿವಿಧ ಬೆಳೆಯ ಬಿತ್ತನೆ ಸಾಧನೆ, ಸದ್ಯದ ಪರಿಸ್ಥಿತಿ, ರೈತರಿಂದ ಭತ್ತ ಹಾಗೂ ರಾಗಿ ಖರೀದಿ ಸೇರಿದಂತೆ ಹಲವು ಮಾಹಿತಿಯನ್ನು ಸಚಿವರಿಗೆ ನೀಡಿದರು. ಜಿಲ್ಲಾ ಮಟ್ಟದ ಹಲವು ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

‘ತೇಜಸ್’ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ ಪ್ರಧಾನಿ
ಅದ್ಭುತ ಅನುಭವ ಎಂದ ಮೋದಿ







ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶನಿವಾರ ಬೆಂಗಳೂರಿನಲ್ಲಿ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ (HAL) ಭೇಟಿ ನೀಡಿದ ಸಂದರ್ಭದಲ್ಲಿ ತೇಜಸ್ ಲಘು ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದರು. ಹೆಚ್‌ಎಎಲ್‌ನ ಉತ್ಪಾದನಾ ಘಟಕದಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಪರಿಶೀಲಿಸಲು ಪ್ರಧಾನಮಂತ್ರಿ ಅವರು ಇಂದು ನಗರಕ್ಕೆ ಬಂದಿದ್ದರು. ತೇಜಸ್ ಯುದ್ಧ ವಿಮಾನ ಸೇರಿದಂತೆ ಹೆಚ್‌ಎಎಲ್‌ನ ಉತ್ಪಾದನಾ ಸೌಲಭ್ಯವನ್ನು ಪ್ರಧಾನಿ ತಮ್ಮ ಭೇಟಿ ವೇಳೆ ಸುಮಾರು 45 ನಿಮಿಷಗಳ ಕಾಲ ಪರಿಶೀಲನೆ ನಡೆಸಿದರು.

ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ ಬಳಿಕ ಟ್ವೀಟ್ ಮಾಡಿರುವ ಪ್ರಧಾನ ಮಂತ್ರಿಗಳು, ಇಂದು ತೇಜಸ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದೆ. ನಮ್ಮ ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಮನೋಭಾವದಿಂದಾಗಿ ಸ್ವಾವಲಂಬನೆಯ ಕ್ಷೇತ್ರದಲ್ಲಿ ಜಗತ್ತಿನ ಯಾವ ದೇಶಕ್ಕಿಂತ ನಾವು ಕಡಿಮೆಯಿಲ್ಲ ಎಂದು ನಾನು ಅಪಾರ ಹೆಮ್ಮೆಯಿಂದ ಹೇಳಬಲ್ಲೆ. ಭಾರತೀಯ ವಾಯುಪಡೆ, ಡಿಆರ್‌ಡಿಒ ಮತ್ತು ಹೆಚ್‌ಎಎಲ್ ಮತ್ತು ಎಲ್ಲಾ ಭಾರತೀಯರಿಗೆ ಮನದಾಳದ ಅಭಿನಂದನೆಗಳು.

ತೇಜಸ್ ಯುದ್ಧ ವಿಮಾನದಲ್ಲಿ ಒಂದು ಪಯಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಈ ಅನುಭವ ವಿಸ್ಮಯಕಾರಿಯಾಗಿತ್ತು. ನಮ್ಮ ದೇಶದ ರಕ್ಷಣಾ ಕ್ಷೇತ್ರದಲ್ಲಿ ಸ್ಥಳೀಯ ಉತ್ಪನ್ನಗಳ ಸಾಮರ್ಥ್ಯಗಳಲ್ಲಿ ನನ್ನ ವಿಶ್ವಾಸ ಖಂಡಿತಾ ಹೆಚ್ಚಾಗಿದೆ. ನಮ್ಮ ರಾಷ್ಟ್ರದ ಸಾಮರ್ಥ್ಯದ ಬಗ್ಗೆ ನನ್ನಲ್ಲಿ ಹೆಮ್ಮೆಯ ಭಾವ ಮತ್ತು ಆಶಾಭಾವನೆ ಹೆಚ್ಚಾಗಿದೆ ಎಂದರು.

2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಕ್ಷಣಾ ಉತ್ಪನ್ನಗಳ ಸ್ವದೇಶಿ ಉತ್ಪಾದನೆಗೆ ಒತ್ತಾಯಿಸುತ್ತಾ ಬಂದಿದೆ. ಕೇಂದ್ರ ಸರ್ಕಾರವು ಆತ್ಮ ನಿರ್ಭರ ಭಾರತ ಯೋಜನೆಯಡಿ ಸ್ವದೇಶಿ ರಕ್ಷಣಾ ವಸ್ತು, ತಂತ್ರಜ್ಞಾನಗಳ ಉತ್ಪಾದನೆ ಮತ್ತು ರಫ್ತುಗಳನ್ನು ಹೆಚ್ಚಿಸಿದೆ.

ಲಘು ಯುದ್ಧ ವಿಮಾನವಾದ ತೇಜಸ್ ಅನ್ನು ಖರೀದಿಸಲು ಹಲವಾರು ದೇಶಗಳು ಆಸಕ್ತಿ ತೋರಿಸಿವೆ. ಅಮೆರಿಕಾ ರಕ್ಷಣಾ ದೈತ್ಯ ಜಿಇ ಏರೋಸ್ಪೇಸ್ ಎಂಕೆ–II–ತೇಜಸ್‌ಗಾಗಿ ಜಂಟಿಯಾಗಿ ಎಂಜಿನ್‌ಗಳನ್ನು ಉತ್ಪಾದಿಸಲು ಹೆಚ್‌ಎಎಲ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. 2022–2023ರ ಆರ್ಥಿಕ ವರ್ಷದಲ್ಲಿ ಭಾರತದ ರಕ್ಷಣಾ ರಫ್ತು ಸಾರ್ವಕಾಲಿಕ ಗರಿಷ್ಠ 15,920 ಕೋಟಿ ರೂ.ಗೆ ತಲುಪಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ವರ್ಷದ ಏಪ್ರಿಲ್‌ನಲ್ಲಿ ಹೇಳಿದ್ದರು. ಇದು ದೇಶಕ್ಕೆ ಗಮನಾರ್ಹ ಸಾಧನೆಯಾಗಿದೆ ಎಂದು ಹೇಳಿದರು.

ಒಂದು ಕಾಲಕ್ಕೆ ಅಕ್ಷರದಿಂದ ದೂರವಿಟ್ಟರೂ ಮಹಿಳಾ ಛಾಪು ಸಾಹಿತ್ಯದಲ್ಲಿದೆ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ; ‘ಸಂಪ್ರದಾಯ ಸಂಸ್ಕೃತಿ’ ಕೃತಿ ಬಿಡುಗಡೆ



ಮೈಸೂರು,ನ.25(ಪಿಎಂ)– ನಮ್ಮ ಸಮಾಜದಲ್ಲಿ ಒಂದು ಕಾಲಕ್ಕೆ ಅಕ್ಷರದಿಂದ ದೂರವಿಟ್ಟಿದ್ದರೂ ಅಲ್ಲಲ್ಲಿ ಸಾಹಿತ್ಯ ಕೃಷಿಯಲ್ಲಿ ಮಹಿಳೆ ತನ್ನ ಛಾಪು ಮೂಡಿಸಿದ್ದಾಳೆ ಎಂದು ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ಹೇಳಿದರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಉದಯಗಿರಿ ಕನ್ನಡ ಸಂಘ, ಕದಂಬ ಕಲಾಪೀಠದ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸುಜಯಸುರೇಶ್ ಅವರ ‘ಸಂಪ್ರದಾಯ ಸಂಸ್ಕೃತಿ’ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆ ಬರೆಯುವುದು, ಬರೆದರೂ ಸಮಾಜ ಗೌರವಿಸುವುದು ಕಡಿಮೆ ಎಂಬುದು ನಮ್ಮ ಚರಿತ್ರೆಯಲ್ಲಿ ಕಾಣಬಹುದು. ಒಂದು ಕಾಲಕ್ಕೆ ನಮ್ಮ ಸಮಾಜ ಮಹಿಳೆಯನ್ನು ಅಕ್ಷರದಿಂದ ದೂರ ವಿಟ್ಟಿದ್ದರೂ ಆಕೆ ಸಾಹಿತ್ಯ ಕೃಷಿ ಮಾಡಿದ್ದಾಳೆ. ಮೊದಲ ತೀರ್ಥಂಕರನಾದ ಆದಿನಾಥ ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಅಕ್ಷರ ಕಲಿಸಿದ್ದ ಎಂಬ ಉಲ್ಲೇಖ ಜೈನ ಪುರಾಣದಲ್ಲಿ ದೊರೆಯುತ್ತದೆ. ವೇದಗಳಲ್ಲಿ ಕೆಲ ಮಹಿಳೆಯರು ಮಂತ್ರಗಳ ರಚನೆಯಲ್ಲಿ ತೊಡಗಿದ್ದರು ಎಂಬುದನ್ನು ಕಾಣಬಹುದು ಎಂದು ತಿಳಿಸಿದರು.

ಕನ್ನಡಕ್ಕೆ ಸಂಬಂಧಿಸಿದಂತೆ ಜನಪದ ಸಾಹಿತ್ಯದ ತ್ರಿಪದಿಗಳ ರಚನೆಯಲ್ಲಿ ಮಹಿಳೆಯರು ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಅಪಾರ ತ್ರಿಪದಿಗಳು ನಮ್ಮಲ್ಲಿದ್ದು, ಈ ಪರಂಪರೆ ಮೂಲಕ ಮಹಿಳೆಯರು ತಮ್ಮ ನೋವು–ನಲಿವುಗಳನ್ನು ಅನಾವರಣ ಮಾಡಿದ್ದಾರೆ. ವಚನ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ ಅವಿಸ್ಮರಣೀಯ. ವಚನಕಾರ್ತಿಯರು ತಮ್ಮ ಅನುಭವಗಳನ್ನು ವಚನಗಳ ಮೂಲಕ ವ್ಯಕ್ತಪಡಿಸಿ, ಸಮಾಜದ ತಪ್ಪುಗಳನ್ನು ಮಾತ್ರವಲ್ಲದೆ, ತಮ್ಮ ಒಡನಾಡಿಗಳ ಕೆಲ ತಪ್ಪುಗಳನ್ನು ಎತ್ತಿ ತೋರಿಸಿ ಪ್ರಶ್ನೆ ಮಾಡಿದ್ದಾರೆ. ಆ ಮೂಲಕ ತಮ್ಮ ದಿಟ್ಟತನ ಪ್ರದರ್ಶಿಸಿದ್ದಾರೆ ಎಂದರು.

ಒಬ್ಬ ಗೃಹಿಣಿ ಬರವಣಿಗೆ ಮಾಡುವುದು ಸಾಮಾನ್ಯ ಸಂಗತಿಯಲ್ಲ. ಯಾವುದೇ ವಿಷಯ ಕುರಿತು ಮಾತನಾಡಬಹುದು. ಆದರೆ ಅದನ್ನು ಬರವಣಿಗೆಯಲ್ಲಿ ತರುವುದು ಸುಲಭವಲ್ಲ. ಸುಜಯ ಸುರೇಶ್ ಅವರು ಅಕ್ಷರದ ಮೂಲಕ ತಮ್ಮಲ್ಲಿರುವ ಜ್ಞಾನ ಪ್ರಸಾರ ಮಾಡುವ ಪ್ರಯತ್ನದಲ್ಲಿ ತೊಡಗಿರುವುದು ಶ್ಲಾಘನೀಯ ಎಂದು ಹೇಳಿದರು. ವೈಜ್ಞಾನಿಕತೆಯ ಭರದಲ್ಲಿ ಬದುಕಿಗೆ ಅಗತ್ಯವಿರುವ ಸಂಪ್ರದಾಯಗಳನ್ನು ಮರೆಯುತ್ತಿದ್ದೇವೆ ಎಂಬುದು ಸುಜಯ ಸುರೇಶ್ ತಮ್ಮ ‘ಸಂಪ್ರದಾಯ ಸಂಸ್ಕೃತಿ’ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ. ಸಂಪ್ರದಾಯದಲ್ಲಿರುವ ಅರ್ಥಪೂರ್ಣ, ವೈಜ್ಞಾನಿಕತೆ ಆಚರಣೆಗಳನ್ನು ಮರೆಯುತ್ತಿದ್ದೇವೆ ಎಂಬುದನ್ನು ತೋರಿಸಿದ್ದಾರೆ. ಭಾರತೀಯ ಅಂತಃಸತ್ವ ಎಲ್ಲಿ ಅಡಗಿದೆ ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ ಎಂದು ತಿಳಿಸಿದರು.

ದೇವರಿಗೆ ಹೂ ಸಮರ್ಪಿಸುವಾಗ ಇರಬೇಕಾದ ಎಚ್ಚರಿಕೆ ಬಗ್ಗೆಯೂ ಹೇಳಿದ್ದಾರೆ. ಎಚ್ಚರಿಕೆಯು ನಾವು ಮೈಮರೆಯುವುದನ್ನು ತಪ್ಪಿಸುತ್ತದೆ. ಇದರಿಂದ ಶ್ರದ್ಧೆ ಮೂಡುತ್ತದೆ. ಒಳ್ಳೆಯ ನಂಬಿಕೆ ನಮ್ಮ ಬದುಕಿಗೆ ಮುಖ್ಯವಾದ ಆಧಾರ. ಅಂತಹ ನಂಬಿಕೆಯಿಂದ ನಮ್ಮ ಮನಸ್ಸು ಪ್ರಫುಲ್ಲಗೊಳ್ಳುತ್ತದೆ. ಆ ಮೂಲಕ ನಮ್ಮ ಕಾರ್ಯಸಿದ್ಧಿಯಾಗುತ್ತದೆ ಎನ್ನುವುದನ್ನು ಕೃತಿಯಲ್ಲಿ ಸೂಚ್ಯವಾಗಿ ಹೇಳುವ ಪ್ರಯತ್ನ ಮಾಡಿದ್ದಾರೆ. ವಚನಕಾರರೂ ಇಂತಹ ಎಚ್ಚರಿಕೆ ಬಗ್ಗೆಯೇ ಮಾತನಾಡಿದ್ದಾರೆ. ಎಚ್ಚರ, ಅರಿವು ಮತ್ತು ಶ್ರದ್ಧೆ ಬಗ್ಗೆ ಮಾತನಾಡಿ, ಮೌಢ್ಯ ನಿರಾಕರಣೆ ಮಾಡಿದ್ದಾರೆಯೇ ಹೊರತು ಒಳ್ಳೆಯ ನಂಬಿಕೆಯನ್ನಲ್ಲ ಎಂದು ಹೇಳಿದರು.

ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ.ಎಂ.ಕೆ.ಪೋತ್‌ರಾಜ್ ಪುಸ್ತಕ ಬಿಡುಗಡೆ ಮಾಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಾಹಿತಿ ಸತೀಶ್ ಜವರೇಗೌಡ, ಆರ್ಯ ಈಡಿಗರ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿ.ಜಯಣ್ಣ, ಕದಂಬ ಕಲಾಪೀಠದ ಅಧ್ಯಕ್ಷ ಬಿ.ವಿದ್ಯಾಸಾಗರ್, ಕೃತಿ ಕರ್ತೃ ಸುಜಯ ಸುರೇಶ್ ಮತ್ತಿತರರು ಹಾಜರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಮ್ಮ ಜನ್ಮದಿನದ ಅಂಗವಾಗಿ ಶನಿವಾರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಶ್ರೀಮತಿ ಚೆನ್ನಮ್ಮ ದಂಪತಿಯ ಆಶೀರ್ವಾದ ಪಡೆದರು. ಇದೇ ವೇಳೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಜಿಟಿಡಿ ಅವರಿಗೆ ಶುಭ ಕೋರಿದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್, ಮುಖಂಡರಾದ ರಾಮಚಂದ್ರೇಗೌಡ, ಪಾಲಾಕ್ಷ, ರಾಜೀವ್ ಉಪಸ್ಥಿತರಿದ್ದರು. ಮಾಜಿ ಪ್ರಧಾನಿ ದೇವೇಗೌಡರು ಎಕ್ಸ್‌ನಲ್ಲಿ ಮಾಜಿ ಸಚಿವರು, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರಿಗೆ ಜನ್ಮದಿನದ ಶುಭಾಶಯಗಳು. ನಿಮ್ಮ ನೇತೃತ್ವದಲ್ಲಿ ಪಕ್ಷ ಇನ್ನಷ್ಟು ಸಂಘಟಿತವಾಗಲಿ ಹಾಗೂ ಜನ ಸೇವೆ ಮಾಡಲು ಚಾಮುಂಡೇಶ್ವರಿ ತಾಯಿಯು ನಿಮಗೆ ಉತ್ತಮ ಆಯುರಾರೋಗ್ಯ, ಧೀರ್ಘಾಯುಷ್ಯ ದಯಪಾಲಿಸಲಿ ಎಂದು ಹಾರೈಸುತ್ತೇನೆ ಎಂದು ಶುಭ ಕೋರಿದ್ದಾರೆ.

ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಪಂಚಭೂತಗಳಲ್ಲಿ ಲೀನ



ಬೆಂಗಳೂರು: ಜಮ್ಮು–ಕಾಶ್ಮೀರದಲ್ಲಿ ಉಗ್ರರೊಂದಿಗಿನ ಕಾಳಗದಲ್ಲಿ ಹುತಾತ್ಮರಾದ ಕ್ಯಾಪ್ಟನ್ ಎಂವಿ ಪ್ರಾಂಜಲ್ ಅವರ ಅಂತ್ಯಕ್ರಿಯೆ ಸಕಲ ಸೇನಾ ಗೌರವಗಳೊಂದಿಗೆ ಇಂದು ನೆರವೇರಿತು.

ಸಾವಿರಾರು ಮಂದಿ ಹುತಾತ್ಮರಾದ ವೀರಯೋಧನಿಗೆ ಅಂತಿಮ ನಮನ ಸಲ್ಲಿಸಿದರು. ಅಮರ್ ರಹೇ ಘೋಷಣೆಯೊಂದಿಗೆ ಹುತಾತ್ಮ ಯೋಧನ ಅಂತ್ಯಕ್ರಿಯೆ ನೆರವೇರಿತು. ಶನಿವಾರ ಬೆಳಗ್ಗೆ 8ರಿಂದಲೂ ಜಿಗಣಿ ಸಮೀಪದ ನಂದನವನದಲ್ಲಿನ ಪ್ರಾಂಜಲ್ ಅವರ ನಿವಾಸದ ಮುಂಭಾಗದಲ್ಲಿ ಪ್ರಾಂಜಲ್ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಪೊಲೀಸ್ ಮತ್ತು ಮಿಲಿಟರಿ ಪಡೆಗಳು ಹುತಾತ್ಮ ಯೋಧನಿಗೆ ಗೌರವ ವಂದನೆ ಸಲ್ಲಿಸಿದರು. ಗೌರವ ವಂದನೆಯ ನಂತರ ಪಾರ್ಥಿವ ಶರೀರವನ್ನು ಪ್ರಾಂಜಲ್ ಅವರ ಮನೆಗೆ ಕೊಂಡೊಯ್ಯಲಾಯಿತು. ಕುಟುಂಬ ಸದಸ್ಯರು ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದ ಬಳಿಕ ಸೋಮಸುಂದರಪಾಳ್ಯದಲ್ಲಿನ ವಿದ್ಯುತ್ ಚಿತಾಗಾರದಲ್ಲಿ ಪ್ರಾಂಜಲ್ ಅವರ ಅಂತ್ಯಕ್ರಿಯೆ ನೆರವೇರಿತು.

ಪತ್ರಕರ್ತೆ ಸೌಮ್ಯ ವಿಶ್ವನಾಥನ್ ಹತ್ಯೆ: 4 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

ನವದೆಹಲಿ: ಪತ್ರಕರ್ತೆ ಸೌಮ್ಯ ವಿಶ್ವನಾಥನ್ ಹತ್ಯೆ ಪ್ರಕರಣದ ನಾಲ್ವರು ಅಪರಾಧಿಗಳಿಗೆ ದೆಹಲಿಯ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. 2008ರಲ್ಲಿ ಟಿವಿ ಪತ್ರಕರ್ತೆ ಸೌಮ್ಯ ವಿಶ್ವನಾಥನ್ ಅವರನ್ನು ಹತ್ಯೆ ಮಾಡಲಾಗಿತ್ತು ಪ್ರಕರಣದ 5 ನೇ ಆರೋಪಿಗೆ 3 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗಿದೆ.

ಆರೋಪಿಗಳಾದ ರವಿ ಕಪೂರ್, ಅಮಿತ್ ಶುಕ್ಲಾ, ಬಲ್ಜೀತ್ ಮಲೀಕ್ ಹಾಗೂ ಅಜಯ್‌ಕುಮಾರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿರುವ ನ್ಯಾಯಾಲಯ ಅಪರಾಧಿಗಳಿಗೆ ತಲಾ 1.25 ಲಕ್ಷ ರೂಪಾಯಿ ದಂಡ ವಿಧಿಸಿದೆ. ಐದನೇ ಅಪರಾಧಿ ಅಜಯ್ ಸೇಥಿಗೆ ಮೂರು ವರ್ಷಗಳ ಸಾದಾ ಜೈಲು ಶಿಕ್ಷೆ ಹಾಗೂ 7.25 ಲಕ್ಷ ರೂ ದಂಡ ವಿಧಿಸಲಾಗಿದೆ.

ಆದಾಗ್ಯೂ, ಅಪರಾಧಿಗಳು ಈಗಾಗಲೇ 14 ವರ್ಷಗಳಿಗಿಂತ ಹೆಚ್ಚು ಜೈಲು ಶಿಕ್ಷೆಯನ್ನು ಅನುಭವಿಸಿದ್ದಾರೆ ಎಂಬುದನ್ನು ನ್ಯಾಯಾಲಯ ಗಮನಿಸಿದೆ. ಅಪರಾಧಿಗಳಿಗೆ ವಿಧಿಸಲಾದ ಒಟ್ಟು ದಂಡದ ಮೊತ್ತದಲ್ಲಿ 12 ಲಕ್ಷ ರೂ.ಗಳನ್ನು ಸಂತ್ರಸ್ತೆಯ ಕುಟುಂಬಕ್ಕೆ ಪಾವತಿಸುವಂತೆ ನ್ಯಾಯಾಲಯ ಆದೇಶಿಸಿದೆ.

ಶಿಕ್ಷೆಯ ಪ್ರಮಾಣವನ್ನು ಆದೇಶಿಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು, ಅಪರಾಧವು ಅಪರೂಪದ ಅಪರೂಪದ ಪ್ರಕರಣಗಳ ವರ್ಗಕ್ಕೆ ಬರುವುದಿಲ್ಲ ಹಾಗಾಗಿ ಮರಣದಂಡನೆಗೆ ಕೋರಿಕೆಯನ್ನು ತಿರಸ್ಕರಿಸಲಾಗಿದೆ ಎಂದರು.

ಶಿಕ್ಷಣದಿಂದ ಮಾತ್ರ ಉಜ್ವಲ ಭವಿಷ್ಯ ಸಾಧ್ಯ
ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ



ಮೈಸೂರು,ನ.25(ಎಂಟಿವೈ)– ಎಲ್ಲರಿಗೂ ಶಿಕ್ಷಣದಿಂದ ಮಾತ್ರ ಭವಿಷ್ಯ ಉಜ್ವಲವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ಅಕ್ಕ ಐಎಎಸ್ ಅಕಾಡೆಮಿ ಸರ್ಕಾರಿ ವಿದ್ಯಾರ್ಥಿನಿಲಯದ ಪಿಯುಸಿ ವಿದ್ಯಾರ್ಥಿಗಳಿಗೆ ಸಿಎಲ್‌ಎಟಿ, ಎನ್‌ಇಇಟಿ, ಜೆಇಇ, ಸಿಯುಇಟಿ ಪರೀಕ್ಷೆಗಳಿಗೆ ಉಚಿತ ಮಾರ್ಗದರ್ಶನ ನೀಡುವ ‘ಸನ್ಮಾರ್ಗ’ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾರು ಉತ್ತಮ ಶಿಕ್ಷಣ ಪಡೆಯುತ್ತಾರೋ ಅವರ ಭವಿಷ್ಯ ಉತ್ತಮವಾಗಿರುತ್ತದೆ. ಎಲ್ಲರಿಗೂ ಶಿಕ್ಷಣವೇ ಆಸ್ತಿಯಾಗಿದ್ದು, ಅದು ಬೆಲೆ ಕಟ್ಟಲಾಗದ ಕೊಡುಗೆಯನ್ನು ಜೀವನ ಪರ್ಯಂತ ನೀಡುತ್ತದೆ. ಆ ಕಾರಣದಿಂದಲೇ ಎಲ್ಲರೂ ಶಿಕ್ಷಣ ಪಡೆಯಲು ಮುಂದಾಗಬೇಕು. ಉತ್ತಮ ಶಿಕ್ಷಣ ನಮ್ಮ ಭವಿಷ್ಯವನ್ನು ಉತ್ತಮಗೊಳಿಸುತ್ತದೆ. ಆ ಕಾರಣದಿಂದ ಸರ್ಕಾರದ ವಿವಿಧ ಸೌಲಭ್ಯವನ್ನು ಬಳಸಿಕೊಂಡು ಶಿಕ್ಷಣದಲ್ಲಿ ಸಾಧನೆ ಮಾಡಲು ಗಮನಹರಿಸಬೇಕು ಎಂದು ಸಲಹೆ ನೀಡಿದರು. ಪ್ರಸ್ತುತ ಸಂದರ್ಭದಲ್ಲಿ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಪರಿಣಾಮದಿಂದ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಾತ್ಮಕ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಎಲ್ಲರೂ ಸ್ಪರ್ಧೆಯಲ್ಲಿ ಮುನ್ನುಗ್ಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಸಜ್ಜಾಗಲು ಕಠಿಣ ಪರಿಶ್ರಮ ಪಡಬೇಕು. ಬೇಕಾದ ಜ್ಞಾನ ಸಂಪಾದಿಸಿಕೊಳ್ಳಬೇಕು. ಇದರೊಂದಿಗೆ ಮಾರ್ಗದರ್ಶನ, ತರಬೇತಿ ದೊರೆತರೆ ಸಾಧನೆ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ನಾವು ವಿದ್ಯಾರ್ಥಿಗಳಾಗಿದ್ದ ವೇಳೆ ದ್ವಿತೀಯ ಶ್ರೇಣಿಯಲ್ಲಿ ಪಾಸಾದರೂ ಹೆಮ್ಮೆ ಪಡುತ್ತಿದ್ದೆವು. ಆದರೆ, ಈಗ ಕಾಲ ಬದಲಾಗಿದೆ. ಪರೀಕ್ಷೆಯಲ್ಲಿ ಶೇ.95ರಷ್ಟು ಅಂಕಗಳಿಸಬೇಕೆಂಬ ಹಂಬಲ ವ್ಯಕ್ತಪಡಿಸುತ್ತಿದ್ದಾರೆ. ಇದರಿಂದ ಪೈಪೋಟಿ ಹೆಚ್ಚಾಗಿದೆ. ಈ ಬೆಳವಣಿಗೆಯಿಂದ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೇರಣಾ ಶಕ್ತಿಯಾಗಿ ನಿಲ್ಲಬೇಕು ಎಂದರು. ಅಕಾಡೆಮಿ ಸಂಸ್ಥಾಪಕ ಹಾಗೂ ನಿರ್ದೇಶಕ ಶಿವಕುಮಾರ್ ಮಾತನಾಡಿ, ನಮ್ಮ ಸಂಸ್ಥೆ ನಡೆಸುತ್ತಿರುವ ಸನ್ಮಾರ್ಗ ಕಾರ್ಯಕ್ರಮವು ರಜೆ ದಿನ ಹಾಗೂ ಸಂಜೆ ವೇಳೆ ವಿದ್ಯಾರ್ಥಿನಿಲಯಗಳಲ್ಲಿನ ಪಿಯುಸಿ ಮಕ್ಕಳಿಗೆ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿ 50 ಮಂದಿ ಸಂಪನ್ಮೂಲ ವ್ಯಕ್ತಿಗಳು ನಿಸ್ವಾರ್ಥ ಮನೋ ಭಾವದಿಂದ ಕೈಜೋಡಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಸಲಹೆಗಾರ ಬಸವರಾಜು ದೇವನೂರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಲಹೆಗಾರ ಎಸ್.ತುಕಾರಾಂ, ನಿವೃತ್ತ ಕೆಎಎಸ್ ಅಧಿಕಾರಿ ಎಸ್. ಪ್ರೇಮ್‌ಕುಮಾರ್ ಹಾಗೂ ಬರಹಗಾರ ಶಂಕನಪುರ ಮಹಾದೇವ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ದಸರಾ ವಸ್ತುಪ್ರದರ್ಶನದಲ್ಲಿ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆ ಮಳಿಗೆ ಆರಂಭ
ಮೈಸೂರು ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಉದ್ಘಾಟನೆ



ಮೈಸೂರು, ನ.25(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಹಾಗೂ ಆರೋಗ್ಯ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳ ಮಾಹಿತಿ ನೀಡುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಳಿಗೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಶನಿವಾರ ಉದ್ಘಾಟಿಸಿದರು.

ಬಳಿಕ ಮಳಿಗೆ ವೀಕ್ಷಣೆ ಮಾಡಿದ ಸಚಿವರು, ಮಳಿಗೆಯೊಳಗೆ ಹಮ್ಮಿಕೊಂಡಿದ್ದ ‘ಅನೀಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ’ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆರೋಗ್ಯವೇ ನಿಜವಾದ ಸಂಪತ್ತು. ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವುದು, ಅಪೌಷ್ಟಿಕತೆ ಸೇರಿದಂತೆ ಆರೋಗ್ಯ ವೃದ್ಧಿ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಹಾಗೂ ವಸ್ತುಪ್ರದರ್ಶನಕ್ಕೆ ಆಗಮಿಸುವ ಪ್ರವಾಸಿಗರಿಗೆ ಮಾಹಿತಿ ನೀಡುವಂತೆ ವೈದ್ಯಕೀಯ ಸಿಬ್ಬಂದಿಗಳಿಗೆ ಸೂಚನೆ ನೀಡಿದರಲ್ಲದೆ, ಪ್ರತಿಯೊಬ್ಬರು ಆರೋಗ್ಯದ ಕಡೆಗೂ ಗಮನಹರಿಸುವ ನಿಟ್ಟಿನಲ್ಲಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದರು. ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶಕಿ ಡಾ.ಪುಷ್ಪಲತಾ, ವಿಭಾಗೀಯ ಸಹ ನಿರ್ದೇಶಕಿ ಡಾ.ರಾಜೇಶ್ವರಿ ದೇವಿ, ಉಪ ನಿರ್ದೇಶಕಿ ಡಾ.ಮಲ್ಲಿಕಾ, ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಎಂ.ಎಸ್.ಜಯಂತ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವ್ ಪ್ರಸಾದ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಗೋಪಿನಾಥ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಬೃಂದಾ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ಸಿರಾಜ್ ಅಹಮದ್, ವೈದ್ಯಕೀಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

‘ಬೆಳೆ ತಾಕು’ ಆವರಣ ಉದ್ಘಾಟನೆ...

ಕೃಷಿ ಇಲಾಖೆ ಮಳಿಗೆಗೆ ತೆರಳಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಜಲಾನಯನ ಮಾದರಿಯಲ್ಲಿ ರೂಪುಗೊಂಡಿರುವ ವಿವಿಧ ಬೆಳೆಗಳ ‘ಬೆಳೆ ತಾಕು’ ಆವರಣವನ್ನು ಉದ್ಘಾಟಿಸಿದರು. ನಂತರ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶಾಲಾ ಶಿಕ್ಷಣ ಇಲಾಖೆ ಮಳಿಗೆಗಳಿಗೆ ತೆರಳಿ ವೀಕ್ಷಣೆ ಮಾಡಿದರು.

ಬಾಲ ನ್ಯಾಯ ಕಾಯ್ದೆ, ಪೋಕ್ಸೋ ಕಾಯ್ದೆಗಳು ಪ್ರಖರತೆ ಕಳೆದುಕೊಂಡವೇ...
ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪ್ರಶ್ನೆ



ಬೆಂಗಳೂರು, ನ.25– ಲೈಂಗಿಕ ಶೋಷಿತ ಮಕ್ಕಳ ನ್ಯಾಯ ಹಾಗೂ ಪೋಕ್ಸೋ ಆಶಯಗಳು ಮರೀಚಿಕೆಯಾಗುತ್ತಿವೆ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅಸಮಾದಾನ ವ್ಯಕ್ತಪಡಿಸಿದರು.

ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಮಗು ವಿನ ಸರ್ವತೋಮುಖ ಹಿತಾಸಕ್ತಿಗಾಗಿ ಎಂದೇ ಪ್ರಾರಂಭವಾದ ಬಾಲನ್ಯಾಯ ಕಾಯ್ದೆ ಹಾಗೂ ಲೈಂಗಿಕ ಶೋಷಿತ ಮಗುವಿಗೆ ಸಂಪೂರ್ಣ ನ್ಯಾಯ ಒದಗಿಸಲೆಂದು ಅನುಷ್ಠಾನಕ್ಕೆ ಬಂದ ಪೋಕ್ಸೋ ಕಾಯ್ದೆ ತನ್ನ ಪ್ರಖರತೆಯನ್ನು ಕಳೆದುಕೊಳ್ಳುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು. ಪೋಕ್ಸೋ ಕಾಯ್ದೆಯಡಿ ಬಂಧಿತರಾದರೆ ಯಾವುದೇ ಕಾರಣಕ್ಕೂ ಜೈಲಿನಿಂದ ಹೊರಬರಲು ಸಾಧ್ಯವಿಲ್ಲ. ಅಸರಾಂ ಬಾಪು ಇನ್ನೂ ಜೈಲಿನಲ್ಲಿರುವುದು ಇದಕ್ಕೆ ಉದಾಹರಣೆಯಾಗಿದೆ. ಆದರೆ, ಸ್ವಾಮೀಜಿ(ಚಿತ್ರದುರ್ಗದ ಮುರುಘಾ ಸ್ವಾಮೀಜಿ) ಹೇಗೆ ಹೊರ ಬಂದರು...? ಮಕ್ಕಳ ಹಾಗೂ ಮಹಿಳೆಯರ ಹಿತರಕ್ಷಣೆ ಮಾಡುವ ಅನೇಕ ಸಂಘ–ಸಂಸ್ಥೆಗಳಿವೆ. ಆದರೆ, ಅವ್ಯಾವು ಈ ಪ್ರಕರಣ ಕುರಿತು ಮಾತನಾಡುತ್ತಿಲ್ಲ ರಾಜಕೀಯ ಪಕ್ಷಗಳ ಮುಖಂಡರು, ವಿರೋಧ ಪಕ್ಷಗಳು ಸುಮ್ಮನೆ ಕುಳಿತು ಬಿಟ್ಟಿವೆ. ಯಾರು ಬಾಯಿ ಬಿಡುತ್ತಿಲ್ಲ ವೇಕೇ? ಎಂದು ಪ್ರಶ್ನಿಸಿದರು. ಒಡನಾಡಿ ಸಂಸ್ಥೆಯ ಪರಶುರಾಮ, ಸ್ಟ್ಯಾನ್ಲಿ ಉಪಸ್ಥಿತರಿದ್ದರು.

ಕೊಡಗಿನಲ್ಲಿ ಇನ್ನೈದು ವರ್ಷ ಅಭಿವೃದ್ಧಿ ಮರೀಚಿಕೆ

ಸಂಸದ ಪ್ರತಾಪ್ ಸಿಂಹ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ

ಕೆ.ಜಿ.ಬೋಪಯ್ಯ ತಂದಿದ್ದ ಅನುದಾನಕ್ಕೆ ಬೇರೆಯವರು ಗುದ್ದಲಿ ಪೂಜೆ



ವಿರಾಜಪೇಟೆ, ನ.25– ಈಗಿನ ಸರಕಾರದ ಅಭಿವೃದ್ಧಿ ಶೂನ್ಯವಾಗಿದೆ ಇನ್ನು ಐದು ವರ್ಷಗಳು ಕೊಡಗಿನಲ್ಲಿ ಅಭಿವೃದ್ಧಿ ಕಾಮಗಾರಿ ಮರೀಚಿಕೆಯಾಗಲಿದೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಸಂಸದ ಪ್ರತಾಪ್ ಸಿಂಹ ಅವರು, ಹಿಂದಿನ ಸರ್ಕಾರ ಅವಧಿಯಲ್ಲಿ ಕೆ.ಜಿ.ಬೋಪಯ್ಯ ತಂದಿದ್ದ ಅನುದಾನಕ್ಕೆ ಇಂದು ಬೇರೆಯವರು ಭೂಮಿ ಪೂಜೆ ಮಾಡುತ್ತಿದ್ದಾರೆ ಎಂದಿದ್ದಾರೆ.

ಕೇಂದ್ರ ಸರಕಾರದ ವಿಕಸಿತ ಭಾರತ ಸಂಕಲ್ಪಯಾತ್ರೆ ಪ್ರಯುಕ್ತ ವಿರಾಜಪೇಟೆ ಪುರಭವನದಲ್ಲಿ ಆಯೋಜಿಸಿದ್ದ ಉಜ್ವಲ ಯೋಜನೆಯಡಿ ಅಡುಗೆ ಅನಿಲ ವಿತರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ಇಂದು ಅಭಿವೃದ್ಧಿ ಕಾರ್ಯ ಕುಂಠಿತವಾಗಿದ್ದು, ಬಡ ಕಾರ್ಮಿಕರು ಕೂಲಿ ಕೆಲಸದಿಂದ ವಂಚಿತರಾಗುತ್ತಿದ್ದಾರೆ ಎಂದರು.

ಪ್ರಧಾನಿ ಮೋದಿ ಆಡಳಿತದಲ್ಲಿ ಜಾತಿ, ಧರ್ಮಗಳಿಲ್ಲದೆ ಎಲ್ಲರಿಗೂ ಉತ್ತಮ ಸೌಲತ್ತು ನೀಡಲಾಗಿದೆ. ಮೊದಲ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ತಾಯಂದಿರ ಸಂಕಷ್ಟ ನೀಗಲು ಶೌಚಾಲಯಗಳ ಘೋಷಣೆ ಮಾಡಿದರು ಹಾಗೂ ಜನಧನ್ ಮುದ್ರ ಯೋಜನೆ, ಉಜ್ವಲ ಯೋಜನೆ ಹೀಗೆ ಹತ್ತು ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ರೈತರು ಬೆಳೆಗೆ ಔಷಧ ಸಿಂಪಡಿಸುವ ಸಂದರ್ಭ ಜೀವಕ್ಕೆ ಹಾನಿಯಾಗದಂತೆ ಡ್ರೋಣ್ ವ್ಯವಸ್ಥೆಯನ್ನು ಕೃಷಿ ಕ್ಷೇತ್ರದಲ್ಲಿ ತರಲಾಗಿದೆ ಇದರಿಂದ ಶುಂಠಿ, ಅಡಿಕೆ, ಕಾಫಿ ತೋಟ ಸೇರಿದಂತೆ ಎಲ್ಲ ಕಡೆ ಔಷದ ಸಿಂಪರಣೆ ಸುಲಭವಾಗಲಿದೆ ಎಂದು ಅವರು ಹೇಳಿದರು.

ಮೋದಿಯವರಿಗೆ ಮತ್ತೊಮ್ಮೆ ಪ್ರಧಾನಿಯಾಗಿ ಇನ್ನಷ್ಟು ಉತ್ತಮ ಕೆಲಸ ಮಾಡಲು ಅವಕಾಶ ನೀಡುವಂತಾಗಬೇಕು ಎಂದ ಸಂಸದ ಪ್ರತಾಪ್ ಸಿಂಹ ಅವರು ಸಮಾರಂಭದಲ್ಲಿ 40 ಮಂದಿ ಫಲಾನುಭವಿಗಳಿಗೆ ಅಡುಗೆ ಅನಿಲವನ್ನು ವಿತರಿಸಿದರಲ್ಲದೆ ಏಕತಾ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು. ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ ನಾಯ್ಡು, ಗೋಣಿಕೊಪ್ಪ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಪ್ರಭಾಕರ್, ಮಡಿಕೇರಿ ಕೆನರ ಬ್ಯಾಂಕ್ ಪ್ರಾದೇಶಿಕ ವಿಭಾಗೀಯ ವ್ಯವಸ್ಥಾಪಕ ಹೆಚ್.ಪಿ.ಸುರೇಶ್, ಸಿಎಲ್‌ನ ಮಾರಾಟಾಧಿಕಾರಿಗಳಾದ ಬಿ.ಪಿ. ರಾಹುಲ್, ನಿತೀನ್ ಲೆವೆಸ್, ಜಿಲ್ಲಾ ನಬಾರ್ಡ್ ಅಧಿಕಾರಿ ರಮೇಶ್ ಬಾಬು, ತಾಲೂಕು ನಾಗರಿಕ ಅಹಾರ ಸರಬರಾಜು ಇಲಾಖೆ ಅಧಿಕಾರಿ ಸೀನಾಕುಮಾರಿ, ಅರುಣ್‌ಕುಮಾರ್, ಪುರಸಭ ಸದಸ್ಯೆ ಜೂನ ಮತ್ತಿತರರು ಉಪಸ್ಥಿತರಿದ್ದರು.

ಪೊಲೀಸರು ಕಾಂಗ್ರೆಸ್ ಏಜೆಂಟರಂತೆ ವರ್ತಿಸಿದರೆ ನಾವು ಠಾಣೆಗೆ ನುಗ್ಗಬೇಕಾಗುತ್ತೆ

ಬಿಜೆಪಿ ಕಾರ್ಯಕರ್ತನಿಗೆ ಪೊಲೀಸರ ಕಿರುಕುಳ ಆರೋಪ: ಸಂಸದ ಪ್ರತಾಪ್ ಸಿಂಹ ಎಚ್ಚರಿಕೆ



ವಿರಾಜಪೇಟೆ, ನ.25– ಬಿಜೆಪಿ ಕಾರ್ಯಕರ್ತರಿಗೆ ವಿನಾಕಾರಣ ತೊಂದರೆ ನೀಡುವುದನ್ನು ತಕ್ಷಣ ನಿಲ್ಲಿಸುವಂತೆ ಆಗ್ರಹಿಸಿರುವ ಕೊಡಗು–ಮೈಸೂರು ಸಂಸದ ಪ್ರತಾಪ್ ಸಿಂಹ, ಪೊಲೀಸರು ಕಾಂಗ್ರೆಸ್ ಪಕ್ಷದ ಏಜೆಂಟರಂತೆ ವರ್ತಿಸಿದರೆ ಠಾಣೆಗೆ ನುಗ್ಗಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್ ವಿರುದ್ಧ ವಿರಾಜಪೇಟೆ ಪೊಲೀಸರು ಕ್ರಮಕ್ಕೆ ಮುಂದಾಗಿರುವುದನ್ನು ಅರಿತ ಸಂಸದ ಪ್ರತಾಪ್ ಸಿಂಹ, ಪೊಲೀಸ್ ಠಾಣೆಗೆ ತೆರಳಿ ಘಟನೆ ಕುರಿತು ಮಾಹಿತಿ ಪಡೆದರು.

ಜಾಲತಾಣದಲ್ಲಿ ಏನೇ ಬರೆದರು ಅದಕ್ಕಾಗಿ ನಮ್ಮ ಬಿಜೆಪಿ ಕಾರ್ಯಕರ್ತರನ್ನು ವಿನಾಕಾರಣ ಠಾಣೆಗೆ ಕರೆಸಿ ಮುಚ್ಚಳಿಕೆ ಬರೆಸುವುದು, ಬೆದರಿಸುವುದು ಮತ್ತು ಪ್ರಕರಣ ದಾಖಲಿಸುವ ಕೆಲಸ ಕೊಡಗಿನಲ್ಲಿ ನಡೆಯುತ್ತಿದೆ. ಮುಚ್ಚಳಿಕೆ ಬರೆಸಿಕೊಳ್ಳುವ ಅಧಿಕಾರ ಪೊಲೀಸರಿಗಿಲ್ಲ ಎಂದರು.

ಈ ಕುರಿತು ಈಗಾಗಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಈ ರೀತಿ ಆಗದಂತೆ ನೋಡಿಕೊಳ್ಳಲು ತಿಳಿಸಿದ್ದೇನೆ ಎಂದು ಪೊಲೀಸ್ ಅಧಿಕಾರಿಗಳಿಗೆ ಹೇಳಿದರು.

ಪೊಲೀಸರು ರಾಜ್ಯ ಕಾಂಗ್ರೆಸ್ ಸರ್ಕಾರದ ಏಜೆಂಟರಂತೆ ವರ್ತಿಸುವುದು ಸರಿಯಲ್ಲ. ಕಾನೂನು ಮೀರಿ ನಡೆಯುವ ಯಾವ ಅಧಿಕಾರವೂ ಪೊಲೀಸರಿಗೆ ಇಲ್ಲ. ಜಾಲತಾಣದಲ್ಲಿ ಸೂಕ್ಷ್ಮ ವಿಚಾರಗಳಿದ್ದು ವ್ಯವಸ್ಥೆಗೆ ಧಕ್ಕೆ ತರುವಂತಿದ್ದರೆ ಕ್ರಮಕೈಗೊಳ್ಳಬಹುದು. ಆದರೆ ಕ್ಷುಲ್ಲಕ ವಿಚಾರಕ್ಕೆ ಪೊಲೀಸರು ದೂರು ಸ್ವೀಕರಿಸಿ ಕಾನೂನು ಕ್ರಮ ಕೈಗೊಳ್ಳುವಂತಿಲ್ಲ ಎಂಬುದನ್ನು ಮನಗಾಣಬೇಕು. ನಮ್ಮ ಕಾರ್ಯಕರ್ತರಿಗೆ ವಿನಾಕಾರಣ ತೊಂದರೆ ನೀಡುವುದನ್ನು ತಕ್ಷಣ ನಿಲ್ಲಿಸುವಂತೆ ಸೂಚಿಸಿದರು. ಪೊಲೀ ಸರು ಇದೇ ರೀತ ವರ್ತಿಸುತ್ತಿದ್ದರೆ ನಾವು ಠಾಣೆಗೆ ನುಗ್ಗಬೇಕಾಗುತ್ತದೆ ಎಂದು ಅವರು ಹೇಳಿದರು.

ಈ ಸಂದರ್ಭ ವಿರಾಜಪೇಟೆ ಡಿವೈಎಸ್‌ಪಿ ಆರ್. ಮೋಹನ್‌ಕುಮಾರ್, ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ, ಪ್ರಮುಖರಾದ ಮಾಚಿಮಾಡ ರವೀಂದ್ರ ಮತ್ತಿತ್ತರು ಹಾಜರಿದ್ದರು.

ನೂತನ ಅಧ್ಯಕ್ಷರಾಗಿ ಪೆಬ್ಬಾಟಂಡ ಎ.ಪೆಮ್ಮಯ್ಯ



ನಾಪೋಕ್ಲು, ನ.25– ಮಡಿಕೇರಿ ತಾಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಮತ್ತು ಪರಿವರ್ತನಾ ಸಂಘ ಮೂರ್ನಾಡು ಶಾಖೆಯ ಪದಾಧಿಕಾರಿಗಳ ಚುನಾವಣೆ ಶನಿವಾರ ಸಂಘದ ಸಭಾಂಗಣದಲ್ಲಿ ನಡೆಯಿತು. ನೂತನ ಅಧ್ಯಕ್ಷರಾಗಿ ಪೆಬ್ಬಾಟಂಡ ಎ.ಪೆಮ್ಮಯ್ಯ, ಉಪಾಧ್ಯಕ್ಷರಾಗಿ ಮುಂಡಂಡ ಕೆ.ಕುಟ್ಟಪ್ಪ ಅವಿರೋಧವಾಗಿ ಆಯ್ಕೆಯಾದರು, ನಿರ್ದೇಶಕರಾಗಿ ಪುದಿಯೋಕ್ಕಡ ಬೆಲ್ಲು ಸೋಮಯ್ಯ, ಸುಭಾಷ್ ವಾಂಚಿರ ಕೆ, ಬಡುವಂಡ ಬೆಲ್ಲು ಚಿಣ್ಣಪ್ಪ, ಮೂಡೇರ ಅಶೋಕ ಅಯ್ಯಪ್ಪ, ಕೈಪೆಟ್ಟಿರ ಹರೀಶ್ ಅಯ್ಯಪ್ಪ, ಅವರೆಮಾದಂಡ ಸುಗುಣ ಸುಬ್ಬಯ್ಯ, ನೆರವಂಡ ಅನುಪ್ ಮುತ್ತಯ್ಯ, ನಾಯಕಂಡ ದೀಪು ಚಂಗಪ್ಪ, ಆಂಗೀರ ಸಂತೋಷ್ ಮಾದಪ್ಪ , ತೆಕ್ಕಡೆ ಶೋಭಾ ಮೋಹನ್, ಚಂಗಂಡ ಕನ್ನಿಕಾ ಸೂರಜ್, ಎಂ.ಟಿ. ದೇವಪ್ಪ, ಹೆಚ್.ಎಸ್ ಗೋಪಾಲ್ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಪಟ್ಟಡ ಮೋಹನ್, ಸಿಬ್ಬಂದಿಯವರು ಭಾಗವಹಿಸಿದ್ದರು.

ತೆಪ್ಪೋತ್ಸವ, ಪಲ್ಲಕಿ ಉತ್ತವ, ದಟ್ಟೋತ್ಸವ, ಹುತ್ತರಿ ಹಬ್ಬ

ಮಡಿಕೇರಿ: ನಗರದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಪ್ರತಿ ವರ್ಷದ ಸಂಪ್ರದಾಯದಂತೆ ನ.27 ರಂದು ಸಂಜೆ 5.30ಕ್ಕೆ 'ತೆಪ್ಪೋತ್ಸವ, ಪಲ್ಲಕಿ ಉತ್ಸವ, ದಟ್ಟೋತ್ಸವ' ಹಾಗೂ ಅಂದು ಕೊಡಗಿನ ಸಂಪ್ರಾದಾಯಿಕ ಹಬ್ಬ 'ಹುತ್ತರಿ ಹಬ್ಬದ' ಪ್ರಯುಕ್ತ ದೇವಾಲಯ ಹಾಗೂ ಕೊಡವ ಸಮಾಜದ ವತಿಯಿಂದ ರಾತ್ರಿ 8.45ಕ್ಕೆ ದೇವಾಲಯದ ಗದ್ದೆಯಲ್ಲಿ ಕದಿರು ಕುಯ್ಯುವುದು ಕಾರ್ಯಕ್ರಮವಿದೆ.

ಪೊನ್ನಂಪೇಟೆ ಬಳಿ ಮುಂದುವರಿದ ಹುಲಿ ದಾಳಿ

ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಗಬ್ಬದ ಹಸುವನ್ನು ಕೊಂದು, ತಿಂದು ಪರಾರಿ



ಮಡಿಕೇರಿ/ಗೋಣಿಕೊಪ್ಪ, ನ.25– ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ಟಿ.ಶೆಟ್ಟಿಗೇರಿ ಗ್ರಾಮದಲ್ಲಿ ಮತ್ತೆ ಹುಲಿ ದಾಳಿ ಮುಂದುವರೆದಿದ್ದು, ಒಂದು ಗಬ್ಬದ ಹಸುವನ್ನು ಕೊಂದು ಹಾಕಿದೆ. ಕಾಡ್ಯಮಾಡ ಸುಮನ್ ಎಂಬುವರ ತೋಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಹೆಚ್.ಎಲ್. ಪಾರ್ವತಿ ಅವರ ಗಬ್ಬದ ಹಸುವಿನ ಮೇಲೆ ಇಂದು ಬೆಳಿಗ್ಗೆ 10.30ರ ಸಮಯದಲ್ಲಿ ಹುಲಿ ದಾಳಿ ಮಾಡಿ ಕೊಂದು ಹಾಕಿದೆ. ಮಾತ್ರವಲ್ಲದೇ ಅಂದಾಜು 100 ಅಡಿಗಳಷ್ಟು ದೂರ ಹಸುವಿನ ಕಳೇಬರವನ್ನು ಎಳೆದೊಯ್ದು ಸ್ವಲ್ಪ ಭಾಗ ತಿಂದು ಹಾಕಿರುವುದು ಕಂಡು ಬಂದಿದೆ.

ಘಟನಾ ಸ್ಥಳಕ್ಕೆ ಕರ್ನಾಟಕ ರಾಜ್ಯ ರೈತ ಸಂಘದ ಶ್ರೀ ಮಂಗಲ ಹೋಬಳಿ ಅಧ್ಯಕ್ಷ ಕಂಬ ಕಾರ್ಯಪ್ಪ, ವಿರಾಜಪೇಟೆ ತಾಲೂಕು ಅಧ್ಯಕ್ಷ ಬಾಚಮಾಡ ಭವಿಕುಮಾರ್, ಸಾಮೂಹಿಕ ರೈತ ಸಂಘದ ಚಿಮ್ಮಂಗಡ ಗಣೇಶ್, ಟಿ.ಶೆಟ್ಟಿಗೇರಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಚ್ಚಮಾಡ ಸುಮಂತ್ ಹಾಗೂ ಗ್ರಾಮಸ್ಥರು, ರೈತ ಸಂಘದ ಪದಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪೊನ್ನಂಪೇಟೆ ತಾಲೂಕಿನ ಕೆಲವು ಕಡೆಗಳಲ್ಲಿ ನಿರಂತರ ಹುಲಿ ದಾಳಿ ಪ್ರಕರಣ ನಡೆಸುತ್ತಿದ್ದು, ಅರಣ್ಯ ಇಲಾಖೆ ಹುಲಿ ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಜಾನುವಾರು ಕಳೆದುಕೊಂಡ ಮಾಲೀಕರಿಗೆ ಸೂಕ್ತ ಪರಿಹಾರವನ್ನು ಶೀಘ್ರದಲ್ಲೇ ವಿತರಿಸಬೇಕೆಂದು ಅರಣ್ಯ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದರು.

ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆಯ ಆರ್‌ಎಫ್‌ಓ ಶಂಕರ್, ದಿವಾಕರ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹುಲಿಯ ಚಲನ ವಲನ ಪತ್ತೆ ಹಚ್ಚಲು ಸ್ಥಳದಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲಾಗುತ್ತದೆ. ಹುಲಿ ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಲು ಬೋನ್ ಇರಿಸಲಾಗುತ್ತದೆ. ಹಸುವನ್ನು ಕಳೆದುಕೊಂಡ ಮಾಲೀಕರಿಗೆ ಕೂಡಲೇ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದರು.

ವಿರಾಜಪೇಟೆ ಪುರಸಭಾ ಸದಸ್ಯನ ಪುತ್ರ ಆತ್ಮಹತ್ಯೆ



ವಿರಾಜಪೇಟೆ, ನ.25– ಅಂಚೆ ಕಛೇರಿಯ ಉದ್ಯೋಗಿ ಸಿ.ಪಿ.ಆಕಾಶ್ (28) ಎಂಬುವರು ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ.

ವಿರಾಜಪೇಟೆ ಪುರಸಭೆ ಸದಸ್ಯ, ಕಾಂಗ್ರೆಸ್ ಪ್ರಮುಖರಾದ ಸಿ.ಕೆ. ಪ್ರಥ್ವಿನಾಥ್ ಅವರ ಪುತ್ರ ಆಕಾಶ್ ಕಳೆದ ಮೂರು ತಿಂಗಳ ಹಿಂದೆಯಷ್ಟೆ ವಿವಾಹವಾಗಿದ್ದರು. ಪತ್ನಿ ಮತ್ತು ತಮ್ಮ ಕುಟುಂಬದಲ್ಲಿ ಎಲ್ಲರೂ ದೊಡ್ಡ–ದೊಡ್ಡ ಹುದ್ದೆಗಳಲಿದ್ದು, ತಾನೂ ಮಾತ್ರ ಸಣ್ಣ ಹುದ್ದೆಯಲ್ಲಿರುವ ಬಗ್ಗೆ ಬೇಸರಗೊಂಡಿದ್ದ ಆಕಾಶ್ ಖಿನ್ನತೆಗೊಳಗಾಗಿದ್ದರು ಎನ್ನಲಾಗಿದೆ. ಇದರಿಂದ ಮನನೊಂದು ನಾಲ್ಕು ದಿನಗಳ ಹಿಂದೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಇಂದು ಸಾವನ್ನಪ್ಪಿದರು ಎಂದು ಪೊಲೀಸರು ತಿಳಿಸಿದ್ದಾರೆ.

ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ವಿರಾಜಪೇಟೆ ಸರಕಾರಿ ಆಸ್ಪತ್ರೆಯಲ್ಲಿ ಶವ ಪರಿಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಮೃತರು ತಂದೆ, ತಾಯಿ, ಅಕ್ಕ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ನ.28, ಗಣಿತ ಶಿಕ್ಷಕರ ನೇಮಕಕ್ಕೆ ನೇರ ಸಂದರ್ಶನ

ಮಡಿಕೇರಿ ನ.25– ಗಾಳಿಬೀಡು ಜವಾಹರ್ ನವೋದಯ ವಿದ್ಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಗಣಿತ ಶಿಕ್ಷಕರ 2 ಹುದ್ದೆಗಳಿಗೆ ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ನ.28 ರಂದು ಬೆಳಗ್ಗೆ 10.30ಕ್ಕೆ ಜವಾಹರ್ ನವೋದಯ ಶಾಲೆಯ ಪ್ರಾಂಶುಪಾಲರ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ https://navodaya.gov.in/nvs/nvs-school/KODAGU/en/home/ ಮೊ. 8921089811, 6361148504 ಅನ್ನು ಸಂಪರ್ಕಿಸಬಹುದು ಎಂದು ಗಾಳಿಬೀಡು ನವೋದಯ ವಿದ್ಯಾಲಯದ ಪ್ರಾಂಶುಪಾಲ ಪಂಕಜಾಕ್ಷನ್ ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ವಸತಿ ಶಾಲೆಗಳಲ್ಲಿ

ಮೂಲ ಸೌಕರ್ಯ, ಗುಣಮಟ್ಟದ ಶಿಕ್ಷಣಕ್ಕೆ ಕೊರತೆಯಾಗದಂತೆ ಎಚ್ಚರ ವಹಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್ ಸೂಚನೆ



ಚಾಮರಾಜನಗರ, ನ.25– ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ವಸತಿ ಶಾಲೆಗಳಲ್ಲಿ ಮೂಲ ಸೌಕರ್ಯ, ಗುಣಮಟ್ಟದ ಶಿಕ್ಷಣಕ್ಕೆ ಕೊರತೆಯಾಗದಂತೆ ಅಧಿಕಾರಿಗಳು ಎಚ್ಚರ ವಹಿಸಬೇಕು ಎಂದು ಸಹಕಾರ ಇಲಾಖೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ಹಾಗೂ ಜಿಪಂ ವಿಶೇಷ ಸಾಮಾನ್ಯ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾವು ವಸತಿ ಶಾಲೆಗಳಿಗೆ ಭೇಟಿ ನೀಡಿದ ವೇಳೆ ಮೂಲ ಸೌಕರ್ಯ ಕೊರತೆ ಇರುವುದು ಕಂಡು ಬಂದಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ವಸತಿ ಶಾಲೆಗಳಲ್ಲಿ ಸಮರ್ಪಕವಾಗಿ ಮೂಲ ಸೌಲಭ್ಯಗಳು ಇವೆಯೇ ಎಂಬ ಬಗ್ಗೆ ಅಧಿಕಾರಿಗಳು ಭೇಟಿ ಕೊಟ್ಟು ಪರಿಶೀಲಿಸಬೇಕು. ನ್ಯೂನತೆ ಕೊರತೆಗಳಿದ್ದಲ್ಲಿ ಪಟ್ಟಿ ಮಾಡಿ ಗಮನಕ್ಕೆ ತರಬೇಕು. ಇದು ನಿಮ್ಮ ಜವಾಬ್ದಾರಿಯಾಗಿದೆ. ಸೌಲಭ್ಯಗಳ ಸುಧಾರಣೆಗೆ ನಿರಂತರ ಗಮನ ಹರಿಸಬೇಕು. ಶೈಕ್ಷಣಿಕ ಗುಣಮಟ್ಟ ಹೆಚ್ಚಳವಾಗಬೇಕು ಎಂದು ನಿರ್ದೇಶನ ನೀಡಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲಿಸಿದ ಉಸ್ತುವಾರಿ ಕಾರ್ಯದರ್ಶಿಗಳು ಸರ್ಕಾರದ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜನರನ್ನು ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು. ಯೋಜನೆಗಳ ಅನುಷ್ಠಾನದಲ್ಲಿ ವೇಗ ಇರಬೇಕು ಎಂದರು.

ಕೃಷಿ ಇಲಾಖೆ ಪ್ರಗತಿ ಪರಿಶೀಲನೆ ವೇಳೆ ಬೆಳೆ ಇನ್ನಿತರ ವಿವರ ಪಡೆದ ಕಾರ್ಯದರ್ಶಿಗಳು ಮಳೆ ಕೊರತೆ ಕಾರಣದಿಂದ ಬೆಳೆಯಬಹುದಾದ ಪರ್ಯಾಯ ಬೆಳೆಗಳಿಗೆ ಹೆಚ್ಚು ಒತ್ತು ನೀಡಬೇಕಿದೆ. ರೈತರಿಗೆ ಸಕಾಲದಲ್ಲಿ ಅವಶ್ಯವಿರುವ ನೆರವು ಮಾರ್ಗದರ್ಶನ ಸಿಗಬೇಕು. ಕೃಷಿ ಚಟುವಟಿಕೆಗಳಿಗೆ ಪೂರಕವಾದ ವ್ಯವಸ್ಥೆಗಳನ್ನು ಕಲ್ಪಿಸಬೇಕು ಎಂದರು.

ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ವಿತರಿಸಿರುವ ಸಾಲ ಸೌಲಭ್ಯದ ಪ್ರಗತಿ ಪರಿಶೀಲಿಸಿದ ವೇಳೆ ಸಹಕಾರ ಸಂಘಗಳಿಗೆ ರೈತರನ್ನು ನೋಂದಣಿ ಮಾಡಿಸುವಲ್ಲಿ ಸಹಕಾರ ಇಲಾಖೆ ವಿಶೇಷ ಮುತುವರ್ಜಿ ವಹಿಸಬೇಕು. ಸಹಕಾರ ಸಂಘಗಳಿಗೆ ಸದಸ್ಯರಾಗುವುದರಿಂದ ಯಶಸ್ವಿನಿ ಯೋಜನೆ ಸೇರಿದಂತೆ ಇತರೆ ಸೌಲಭ್ಯಗಳನ್ನು ಪಡೆದುಕೊಳ್ಳಲು ಅನುಕೂಲವಾಗಲಿದೆ. ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದ ರೈತರಿಗೆ ಸಹಕಾರ ಸಂಘದ ಸದಸ್ಯತ್ವಕ್ಕೆ ಇಲಾಖೆಯಿಂದಲೇ ಆರ್ಥಿಕ ನೆರವು ನೀಡಲಾಗುತ್ತಿದೆ. ಈ ಕಾರ್ಯಕ್ರಮ ಸದ್ಬಳಕೆಯಾಗಬೇಕು ಎಂದು ತಿಳಿಸಿದರು.

ಇದೇ ವೇಳೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲಿಸಲಾಯಿತು. ಸಭೆಯಲ್ಲಿ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಸಿ ಮಹೇಶ್, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಸೀಲ್ದಾರರು, ತಾಪಂ ಇಓಗಳು ಉಪಸ್ಥಿತರಿದ್ದರು.

ಕ್ರೀಡಾ ಶಾಲೆಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಭೇಟಿ, ಪರಿಶೀಲನೆ



ಚಾಮರಾಜನಗರ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವ್ಯಾಪ್ತಿಗೆ ಸೇರಿದ ತಾಲೂಕಿನ ಸಂತೆಮರಳ್ಳಿಯಲ್ಲಿರುವ ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾ ಶಾಲೆಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಭೇಟಿ ನೀಡಿ ಪರಿಶೀಲಿಸಿದರು.

ಕ್ರೀಡಾ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕತ್ತಿವರಸೆ, ಬಿಲ್ವಿದ್ಯೆ ತರಬೇತುದಾರರು ನೀಡುತ್ತಿರುವ ತರಬೇತಿ ಬಗ್ಗೆ ವಿವರ ಪಡೆದುಕೊಂಡರು. ಕ್ರೀಡಾ ಶಾಲೆಯಲ್ಲಿರುವ ಕೊಠಡಿಗಳು, ತರಬೇತಿ ಆವರಣ, ಊಟದ ಹಾಲ್, ಇತರೆ ಸೌಲಭ್ಯಗಳನ್ನು ಪರಿಶೀಲಿಸಿದರು.

ತರಬೇತಿಗಾಗಿ ಮತ್ತೊಂದು ಕಾಮಗಾರಿ ಕೈಗೊಂಡಿರುವ ಸ್ಥಳಕ್ಕೆ ಭೇಟಿ ನೀಡಿ ತ್ವರಿತವಾಗಿ ಕೆಲಸ ಮುಗಿಸಬೇಕು. ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದಲ್ಲಿ ಪ್ರಸ್ತಾವ ಸಲ್ಲಿಸುವಂತೆ ನಿರ್ದೇಶನ ನೀಡಿದರು.

ಈ ವೇಳೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್, ಉಪವಿಭಾಗಾಧಿಕಾರಿ ಮಹೇಶ್, ತಹಶೀಲ್ದಾರ್ ಬಸವರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕರಾದ ಶಿವಸ್ವಾಮಿ ಇತರೆ ಅಧಿಕಾರಿಗಳು ಇದ್ದರು.

ಮಾದಪ್ಪನ ರುದ್ರಾಕ್ಷಿ ವಾಹನ ಸೇವೆಗೆ ಸಮರ್ಪಣೆ



ಚಾಮರಾಜನಗರ, ನ.25– ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರ ಶ್ರೀಮಲೆ ಮಹದೇಶ್ವರ ಬೆಟ್ಟದ ಮಾದಪ್ಪನ ಸನ್ನಿಧಿಯಲ್ಲಿ ದಾನಿಗಳು ನೀಡಿದ್ದ ರುದ್ರಾಕ್ಷಿ ಉತ್ಸವ ವಾಹನ ದೇವರ ಸೇವೆಗೆ ಸಮರ್ಪಿಸಲಾಯಿತು.

ಬೆಟ್ಟದಲ್ಲಿ ಮಹದೇಶ್ವರರ ಮೂರ್ತಿಯನ್ನು ಒಳಗೊಂಡಿರುವ ಹುಲಿ, ಬಸವ ಹಾಗೂ ರುದ್ರಾಕ್ಷಿ ವಾಹನ ಉತ್ಸವವನ್ನು ನಿತ್ಯ ನೆರವೇರಿಸಲಾಗುತ್ತಿದೆ. ಆದರೆ, ಈ 3 ವಾಹನಗಳನ್ನು ಹಲವು ವರ್ಷಗಳಿಂದಲೂ ಬಳಸುತ್ತಿರುವುದರಿಂದ ಅವುಗಳ ಮರಗಳು ಶಿಥಿಲಗೊಂಡಿದ್ದವು. ಹಾಗಾಗಿ, ಹೊಸ ಉತ್ಸವ ವಾಹನಗಳ ಅಗತ್ಯವಿತ್ತು. ಈ ಬಗ್ಗೆ ಬೇಡಗಂಪಣ ಅರ್ಚಕರು 2 ವರ್ಷಗಳ ಹಿಂದೆ ಮೈಸೂರಿನ ವೈದ್ಯರೊಬ್ಬರನ್ನು ಭೇಟಿಯಾಗಿ ಈ ಬಗ್ಗೆ ಪ್ರಸ್ತಾಪಿಸಿದ್ದರು. ಹೀಗಾಗಿ, ಆ ವೈದ್ಯ ದಂಪತಿ ಮಾದಪ್ಪನ ಸನ್ನಿಧಿಗೆ 2021ರಲ್ಲಿ ಹುಲಿ ಉತ್ಸವ ವಾಹನ ಹಾಗೂ 2022ರಲ್ಲಿ ಬಸವ ಉತ್ಸವ ವಾಹನವನ್ನು ಕೊಡುಗೆಯಾಗಿ ನೀಡಿದ್ದರು. ಇದೀಗ 15 ಅಡಿ ಎತ್ತರದ ರುದ್ರಾಕ್ಷಿ ಉತ್ಸವ ವಾಹನವನ್ನು ನೀಡಿದ್ದಾರೆ.

ಬೆಳಗ್ಗೆ 6 ಗಂಟೆಗೆ ಬ್ರಾಹ್ಮೀ ಮುಹೂರ್ತದಲ್ಲಿ ಮಾದಪ್ಪನ ಸನ್ನಿಧಿಯಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ವಿವಿಧ ಪುಷ್ಪ ಹಾಗೂ ತಳಿರು ತೋರಣದಿಂದ ಸಿಂಗರಿಸಲಾಗಿದ್ದ ನೂತನ ರುದ್ರಾಕ್ಷಿ ಉತ್ಸವ ವಾಹನದಲ್ಲಿ ಸ್ವಾಮಿಯ ಮೂರ್ತಿ ಕೂರಿಸಲಾಯಿತು. ವಾಹನಕ್ಕೆ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ಹಾಗೂ ದಾನಿಗಳ ಸಮ್ಮುಖದಲ್ಲಿ ದೀಪ, ಧೂಪಧಾರತಿ ಹಾಗೂ ಮಂಗಳಾರತಿ ಜೊತೆಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಬಳಿಕ ದೇಗುಲದ ಸುತ್ತ ಉತ್ಸವ ವಾಹನವನ್ನು ಪ್ರದಕ್ಷಿಣೆ ಹಾಕಿಸುವ ಮೂಲಕ ಭಕ್ತರ ಸೇವೆಗೆ ಸಮರ್ಪಿಸಲಾಯಿತು.

ವಿದ್ಯಾರ್ಥಿಗಳು ಜಾನಪದದ ಕನ್ನಡ ಸಾಹಿತ್ಯದ ಸಾರ ಅರಿಯಿರಿ



ಯಳಂದೂರು, ನ.25– ವಿದ್ಯಾರ್ಥಿಗಳು ನಮ್ಮ ಜನಪದದಲ್ಲಿರುವ ಕನ್ನಡ ಸಾಹಿತ್ಯದ ಅರ್ಥ ಅರಿತು ಅದನ್ನು ಬಳಸುವ ಮೂಲಕ ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಬೇಕು ಎಂದು ಸಂತೆಮರಹಳ್ಳಿ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಗೂಳೀಪುರ ನಾ.ಮಂಜುನಾಥಸ್ವಾಮಿ ಕರೆ ನೀಡಿದರು.

ತಾಲೂಕಿನ ವಡಗೆರೆ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಉಪನ್ಯಾಸ ಹಾಗೂ ಕನ್ನಡ ಗೀತೆಗಳ ನೃತ್ಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಭಾಷೆಯ ನಿರಂತರತೆಗೆ ಸಾವಿರಾರು ವರ್ಷಗಳ ಐತಿಹ್ಯವಿದೆ. ಇಂದು ಪರಕೀಯ ಭಾಷೆಯ ಪ್ರಭಾವ ಹೆಚ್ಚಿದೆ. ಆದರೆ ನಮ್ಮಲ್ಲಿರುವ ಭಾಷೆಯ ಸೊಬಗು ವಿಭಿನ್ನವಾಗಿದೆ ಪ್ರತಿ ಪದದ ಉಚ್ಚಾರಣೆಯಲ್ಲೇ ಭಾವಗಳನ್ನು ವ್ಯಕ್ತಪಡಿಸುವ ಗುಣವಿದೆ. ಇದನ್ನು ತಿಳಿದುಕೊಳ್ಳುವ ಕೆಲಸ ಮಾಡಬೇಕು. ನಮ್ಮ ಪೂರ್ವಜರು, ಗ್ರಾಮೀಣರು ತಮ್ಮ ಭಾಷೆಯಲ್ಲಿ ವಿಶೇಷ ನೈಪುಣ್ಯತೆ ಹೊಂದಿದ್ದರು. ಆದರೆ ಇಂದು ಅನ್ಯ ಭಾಷೆಯ ಪ್ರಭಾವದಿಂದ ಹಾಗೂ ನಗರೀಕರಣ ಪಾಶ್ಚಾತ್ಯ ಸಂಸ್ಕೃತಿ ನಮ್ಮನ್ನಾಳುತ್ತಿದೆ. ಜನಪದವನ್ನು ಇಂದು ನಾವು ಕಲಿತರೆ ಮುಂದಿನ ಪೀಳಿಗೆಗೆ ಇದನ್ನು ಜೋಪಾನ ಮಾಡುವ ಕೆಲಸವಾದಂತಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಯೋಚಿಸುವಂತಾಗಬೇಕು ಎಂದು ಸಲಹೆ ನೀಡಿದರು.

ಎಸ್‌ಐ ಚಂದ್ರಹಾಸ ನಾಯಕ್ ಮಾತನಾಡಿ, ತಾಲೂಕಿನಲ್ಲಿ ಸಾಹಿತ್ಯ ಪರಿಷತ್ ಸಕ್ರೀಯವಾಗಿದೆ ಪ್ರತಿ ಶಾಲೆಗಳಲ್ಲೂ ಇಂತಹ ಸಾಹಿತ್ಯ ಚಟುವಟಿಕೆ ಹಮ್ಮಿಕೊಂಡಿರುವುದು ಶ್ಲಾಘನೀಯ. ಇದರಿಂದ ಭಾಷೆ, ನಾಡು ನುಡಿಯ ಬಗ್ಗೆ ಮಕ್ಕಳನ್ನು ಇನ್ನಷ್ಟು ಜಾಗೃತ ಗೊಳಿಸುವ ಕೆಲಸ ಮಾಡಿದಂತಾಗುತ್ತದೆ ಎಂದರು.

ಕೃಷಿಕ ರೇವಣ್ಣ, ಹಿರಿಯ ಪತ್ರಕರ್ತ ಶಿವಕುಮಾರ್, ಕಸಾಪ ತಾಲೂಕು ಅಧ್ಯಕ್ಷ ನಾಗೇಂದ್ರ, ಕರವೇ ತಾಲೂಕು ಅಧ್ಯಕ್ಷ ನಾಗರಾಜು, ಸಿಆರ್‌ಪಿ ಶಾಂತಮೂರ್ತಿ, ಪಪಂ ಮಾಜಿ ಉಪಾಧ್ಯಕ್ಷ ಭೀಮಪ್ಪ, ಶಾಲೆಯ ಪ್ರಾಂಶುಪಾಲ ಬಸವಣ್ಣ ಮಾತನಾಡಿದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಲೋಕೇಶ್, ಗೌಡಹಳ್ಳಿ ಗ್ರಾಮ ಅಧ್ಯಕ್ಷೆ ಗಾಯತ್ರಿ, ಮಾಜಿ ಅಧ್ಯಕ್ಷ ರವಿ, ಪ್ರೇಮ, ಗೋಪಾಲ್, ಡಿ.ಪಿ.ಮಹೇಶ್, ಫೈರೋಜ್ ಖಾನ್, ನವಾಜ್ ಬೇಗ್, ಪ್ರಸಾದ್, ನಾಗರಾಜು, ಶಶಿಧರ, ಪ್ರಬುಲ್ಲಾ, ನಂದೀಶ್, ಶ್ಯಾಮ್ ಸುಂದರ್, ಚಾಂದಿನಿ, ಮಮತ, ಎಎಸ್‌ಐ ಗೋವಿಂದರಾಜು, ಮುರುಳಿ, ಕೇಶವ ನಾಯಕ ಸೇರಿದಂತೆ ಇನ್ನಿತರರಿದ್ದರು.

ಶಿಕ್ಷಕರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಿ

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧೆ: ಮರಿತಿಬ್ಬೇಗೌಡ



ಚಾಮರಾಜನಗರ: ಕೊಳ್ಳೇಗಾಲದ ಶಾಲಾ ಕಾಲೇಜುಗಳಿಗೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಭೇಟಿ ನೀಡಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಶಿಕ್ಷಕರಿಗೆ ಮನವಿ ಮಾಡಿದರು. ಪಟ್ಟಣದ ಎಂಜಿಎಸ್‌ಇ ಪ್ರೌಢಶಾಲೆ, ವಾಸವಿ ವಿದ್ಯಾಕೇಂದ್ರ, ಎಸ್‌ವಿಕೆ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಮಾನಸ ಶಿಕ್ಷಣ ಸಂಸ್ಥೆ ಇನ್ನಿತರ ಶಾಲಾ ಕಾಲೇಜು ಭೇಟಿ ನೀಡಿ, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡುತ್ತೇನೆ. ಶಿಕ್ಷಕರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಮೇಲುಸ್ತುವಾರಿಯನ್ನು ಜಿಪಂಗೆ ವಹಿಸುವ ಸುತ್ತೋಲೆಯನ್ನು ಹಿಂಪಡೆಯುವಂತೆ ಮುಖ್ಯಮಂತ್ರಿಗಳಿಗೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲಾಗಿದೆ. ಸುತ್ತೋಲೆ ಹಿಂಪಡೆಯುವಂತೆ ರಾಜ್ಯಾದ್ಯಂತ ಶಿಕ್ಷಕರು ನಡೆಸುವ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದರು. ಈ ವೇಳೆ ಕೊಳ್ಳೇಗಾಲ ತಾಲೂಕು ಸಹ ಶಿಕ್ಷಕರ ಸಂಘದ ಅಧ್ಯಕ್ಷ ಅಕ್ಬರ್, ಮಹದೇವು, ಶಿಕ್ಷಕ ಪಿಳ್ಳಪ್ಪ ಹಾಜರಿದ್ದರು.

ಇಂದು ಮಂತ್ರ ಮಾಂಗಲ್ಯದ ಮೂಲಕ ಎಡಿಸಿ ವಿವಾಹ



ಚಾಮರಾಜನಗರ: ಸಂವಿಧಾನ ದಿನವಾದ ನ.26ರಂದು ಮಂತ್ರ ಮಾಂಗಲ್ಯದ ಮೂಲಕ ಚಾಮರಾಜನಗರ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದಾ ನವ ಜೀವನಕ್ಕೆ ಕಾಲಿಡಲಿದ್ದಾರೆ.

ಮದುವೆ ಎಂದರೆ ಅದ್ದೂರಿತನ ಪ್ರದರ್ಶನ, ವಿಜೃಂಭಣೆಯೇ ಆಗಿರುವ ಈ ಕಾಲದಲ್ಲಿ ಸರಳವಾಗಿ, ವೈಚಾರಿಕವಾಗಿ ಉನ್ನತ ಅಧಿಕಾರಿಯೊಬ್ಬರು ನವ ಜೀವನಕ್ಕೆ ಕಾಲಿಡುವ ಮೂಲಕ ಇತರರಿಗೆ ಮಾದರಿಯಾಗಲಿದ್ದಾರೆ.

ಚಾಮರಾಜನಗರದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದಾ ಅವರು ಹರೀಶ್ ಕುಮಾರ್ ಅವರೊಂದಿಗೆ ಮೈಸೂರಿನಲ್ಲಿ ಮಂತ್ರ ಮಾಂಗಲ್ಯದ ಮೂಲಕ ವಿವಾಹವಾಗಲಿದ್ದು, ವಿವಾಹ ಆಮಂತ್ರಣದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಕುವೆಂಪು ಚಿತ್ರಗಳನ್ನು ಹಾಕಿಸಿ ವೈಚಾರಿಕತೆ ಮೆರೆದಿದ್ದಾರೆ. ವಿವಾಹ ಕಾರ್ಯಕ್ರಮದಲ್ಲಿ ಸಾಹಿತಿ ಕುಂ.ವೀರಭದ್ರಪ್ಪ ಪಾಲ್ಗೊಂಡು ಮಂತ್ರ ಮಾಂಗಲ್ಯವನ್ನು ಬೋಧನೆ ಮಾಡಲಿದ್ದಾರೆ.

ಎಡಿಸಿ ಗೀತಾ ಹುಡೇದಾ ಮಾತನಾಡಿ, ಅನಗತ್ಯದ ವೆಚ್ಚ ಬೇಡ. ಸರಳವಾಗಿ, ವೈಚಾರಿಕವಾಗಿ ಸಂವಿಧಾನದ ದಿನದಂದು ಮಂತ್ರ ಮಾಂಗಲ್ಯ ಮೂಲಕ ವಿವಾಹವಾಗುತ್ತಿದ್ದೇವೆ ಎಂದು ತಿಳಿಸಿದ್ದಾರೆ.



ಮೈಸೂರಿನಲ್ಲಿ ಶನಿವಾರ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ ಜಿ.ಡಿ.ಹರೀಶ್‌ಗೌಡ ಫೌಂಡೇಷನ್ ವತಿಯಿಂದ ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿಗಳು ಹಾಗೂ ಸಿಹಿ ವಿತರಣೆ ಮಾಡಲಾಯಿತು. ಫೌಂಡೇಷನ್ ಅಧ್ಯಕ್ಷ ಪ್ರಜ್ವಲ್ ರಾಮಣ್ಣ ದಾಸನಕೊಪ್ಪಲು, ಜಂಯು ಕರ್ನಾಟಕ ಜಿಲ್ಲಾ ಉಪಾಧ್ಯಕ್ಷ ಕಾಂತರಾಜು, ಮುಖಂಡರಾದ ಪ್ರವೀಣ್, ಪ್ರಸನ್ನ ಕುಮಾರ್ ಮತ್ತಿತರರು ಹಾಜರಿದ್ದರು.



ಮೈಸೂರಿನಲ್ಲಿ ಶನಿವಾರ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶ್ರೀನಿವಾಸ್ ಕುಮಾರ್ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಇಂದಿರಾಗಾಂಧಿ ಬ್ಲಾಕ್ ಉಪಾಧ್ಯಕ್ಷ ರವಿ ಮಂಚೀಗೌಡನಕೊಪ್ಪಲು, ಮಾಜಿ ಉಪ ಮೇಯರ್ ಮಹದೇವಪ್ಪ, ಮುಖಂಡರಾದ ಯಶವಂತ್, ಉತ್ತಮ್, ಸುನೀಲ್ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಒಂದನೇ ಪುಟದಿಂದ

ಭ್ರೂಣ ಹತ್ಯೆ

ಈ ಕೃತ್ಯ ಎಸಗುತ್ತಿದ್ದು, ತಿಂಗಳಿಗೆ 25ರಿಂದ 30 ಭ್ರೂಣಹತ್ಯೆಗಳು ನಡೆಯುತ್ತಿದ್ದವು ಎಂಬುದು ವಿಚಾರಣೆಯಲ್ಲಿ ತಿಳಿದುಬಂದಿದೆ. ಭ್ರೂಣಲಿಂಗ ಪತ್ತೆಗೆ 25ರಿಂದ 30 ಸಾವಿರ ರೂ. ಹಾಗೂ ಭ್ರೂಣಹತ್ಯೆಗೆ 50 ಸಾವಿರ ರೂ.ಗಳನ್ನು ಈ ತಂಡ ಪಡೆಯುತ್ತಿತ್ತು. ಭ್ರೂಣಲಿಂಗ ಪತ್ತೆ ಹಾಗೂ ಭ್ರೂಣಹತ್ಯೆಗೆ ಕಿಂಗ್‌ಪಿನ್ ಶಿವಲಿಂಗೇಗೌಡ ತಂಡ ತಮ್ಮದೇ ಮಾರುತಿ ವ್ಯಾನ್‌ನಲ್ಲಿ ಗರ್ಭಿಣಿಯರನ್ನು ಮಂಡ್ಯದ ಆಲೆಮನೆಗೆ ಮತ್ತು ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು.

ಸಿಕ್ಕಿಬಿದ್ದಿದ್ದು ಹೇಗೆ?: ಬೈಯ್ಯಪ್ಪನಹಳ್ಳಿ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್ ಹಾಗೂ ಸಿಬ್ಬಂದಿ ಕಳೆದ ಅಕ್ಟೋಬರ್ 15ರಂದು ಬೆಂಗಳೂರಿನ ಹಳೇ ಮದ್ರಾಸ್ ರಸ್ತೆಯಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ ಅನುಮಾನಾಸ್ಪದವಾಗಿ ಕಂಡುಬಂದ ಮಾರುತಿ ಸುಜುಕಿ ಬ್ರೀಜ಼ಾ ಕಾರಿನಲ್ಲಿದ್ದ (ಕೆಎ 55–ಎನ್ 1456) ಶಿವಲಿಂಗೇಗೌಡ ಅಲಿಯಾಸ್ ಶಿವ ಮತ್ತು ನಯನ್‌ಕುಮಾರ್ ಅಲಿಯಾಸ್ ನಯನ್ ಅವರುಗಳನ್ನು ವಿಚಾರಣೆಗೊಳಪಡಿಸಿದ ವೇಳೆ ಭ್ರೂಣಹತ್ಯೆ ಜಾಲ ಬಯಲಾಗಿದೆ. ಇವರು ನೀಡಿದ ಮಾಹಿತಿಯನ್ವಯ ಆಗಲೇ ವೀರೇಶ್ ಮತ್ತು ನವೀನ್‌ಕುಮಾರ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರಿಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿತ್ತು. ಶಿವಲಿಂಗೇಗೌಡ ಮತ್ತು ನಯನ್‌ಕುಮಾರ್‌ನನ್ನು ಪೊಲೀಸ್ ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೊಳಪಡಿಸಿದ ವೇಳೆ ಈ ಜಾಲದ ಕಾರ್ಯಚಟುವಟಿಕೆಯ ಬಗ್ಗೆ ತಿಳಿದುಬಂದಿದೆ. ಚೆನ್ನೈನ ವೈದ್ಯ ಡಾ. ತುಳಸಿರಾಮ್, ಮೈಸೂರಿನ ಮಾತಾ ಆಸ್ಪತ್ರೆಯ ವ್ಯವಸ್ಥಾಪಕಿ ಸಿ.ಎಂ. ಮೀನಾ ಮತ್ತು ರಿಸೆಪ್ಷನಿಸ್ಟ್ ರಿಜ್ಮಾಖಾನುಮ್ ಅವರನ್ನು ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದರಾದರೂ, ಮಾತಾ ಆಸ್ಪತ್ರೆ ವೈದ್ಯ ಡಾ. ಚಂದನ್ ಬಲ್ಲಾಳ್ ತಲೆಮರೆಸಿಕೊಂಡಿದ್ದಾನೆ. ಈ ಜಾಲದಲ್ಲಿ ಮತ್ತಷ್ಟು ಮಂದಿ ಶಾಮೀಲಾಗಿರುವ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ಡಿ. ದೇವರಾಜ್ ನಿರ್ದೇಶನದ ಮೇರೆಗೆ ಹಲಸೂರು ಉಪವಿಭಾಗದ ಎಸಿಪಿ ಬಿ.ರಾಮಚಂದ್ರ ಮಾರ್ಗದರ್ಶನದಲ್ಲಿ ಬೈಯ್ಯಪ್ಪನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಎಂ.ಪ್ರಶಾಂತ್, ಸಬ್ ಇನ್ಸ್‌ಪೆಕ್ಟರ್‌ಗಳಾದ ರಾಜಶೇಖರ ಸಾಗನೂರ, ಮಂಜುನಾಥ್, ಎಎಸ್‌ಐಗಳಾದ ಗೋವಿಂದರಾಜು, ನಾಗಯ್ಯ ಹಿರೇಮಠ, ಸಿಬ್ಬಂದಿಗಳಾದ ಎಸ್. ರಾಜು, ಮುತ್ತುನಾಯಕ, ರಾಘವೇಂದ್ರ ಅವನ್ನೊಳಗೊಂಡ ತಂಡ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು.

ಸಮೀಕ್ಷಾ ವರದಿ ಸ್ವೀಕರಿಸಿ, ಜಾರಿಗೊಳಿಸಿ

ಕಾರ್ಯದರ್ಶಿ ಸಹಿ ಇಲ್ಲದಿರುವುದನ್ನು ಸಮರ್ಥಿಸಿಕೊಂಡರು. ಮೂಲ ಪ್ರತಿ ಕಳೆದು ಹೋಗಿದೆ ಎಂಬುದಕ್ಕೂ ನಮಗೂ ಸಂಬಂಧವಿಲ್ಲ, ಅದು ಆಯೋಗಕ್ಕೆ ಬಿಟ್ಟ ವಿಚಾರ, ನಾವು ಏನು ಸಿದ್ಧಪಡಿಸಿದ್ದೇವೋ ಅದರಲ್ಲಿ ಯಾವುದೇ ಬದಲಾವಣೆ ಮಾಡಲು ಹಾಲಿ ಅಧ್ಯಕ್ಷರಿಗೆ ಅಧಿಕಾರವಿಲ್ಲ. ನಮ್ಮ ವರದಿಯನ್ನು ಯಥಾವತ್ತಾಗಿ ಸ್ವೀಕರಿಸಿ, ಸಾರ್ವಜನಿಕರ ಮುಂದಿಡಬೇಕು, ನಂತರ ಸರ್ಕಾರ ಮುಂದಿನ ತೀರ್ಮಾನ ಕೈಗೊಳ್ಳಬೇಕು.

ಹಾಲಿ ಅಧ್ಯಕ್ಷರು ಪ್ರತ್ಯೇಕವಾಗಿ ವರದಿ ನೀಡಲು ಅಧಿಕಾರವಿದೆ, ನಮ್ಮ ಮೂಲ ವರದಿಗೆ ಅವರು ಧಕ್ಕೆ ತರುವಂತಿಲ್ಲ. ಹಾಲಿ ಅಧ್ಯಕ್ಷರು ಗೊಂದಲಕ್ಕೆ ಸಿಲುಕಿದ್ದಾರೆ. ಅವರ ಮೇಲೆ ಯಾವ ಒತ್ತಡ ಬಂದಿದೆಯೋ ತಿಳಿಯದು. ಅವರ ಅಭಿಪ್ರಾಯ ಹೇಳಲು ಅವರಿಗೆ ಅಧಿಕಾರವಿದೆ ಎಂದರು. ಅಂದಿನ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಮಾಡಲು ಆದೇಶ ನೀಡಿತ್ತು. ಅದರಂತೆ ನಾವು ಇಡೀ ರಾಜ್ಯದಲ್ಲಿ ಸಮೀಕ್ಷೆ ನಡೆಸಿ ವೈಜ್ಞಾನಿಕ ವರದಿ ಸಿದ್ಧಪಡಿಸಿದ್ದೇವೆ. ಸಮೀಕ್ಷೆ ಕಾರ್ಯ ಮುಗಿಸುವುದಕ್ಕೂ ಮೊದಲು ರಾಜ್ಯದುದ್ದಕ್ಕೂ ಮನೆ–ಮನೆ ಗಣತಿ ಮಾಡಿ, ಜಾತಿ ಗಣತಿ ಜೊತೆಗೆ ಸಾಮಾಜಿಕ, ಶೈಕ್ಷಣಿಕ, ಉದ್ಯೋಗ, ಕೌಟುಂಬಿಕ, ಚಿರಾಸ್ತಿ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಒಟ್ಟು 55 ಅಂಶಗಳ ಮಾಹಿತಿಯನ್ನು ಗಣತಿಯಲ್ಲಿ ಆಯೋಗವು ಪಡೆದಿರುತ್ತದೆ. ಇದು ಬರೀ ಜಾತಿಯನ್ನಷ್ಟೇ ಗುರುತಿಸುವ ಸಮೀಕ್ಷೆಯಲ್ಲ, 1931ರಲ್ಲಿ ನಡೆದ ಜಾತಿ ಗಣತಿಯ ನಂತರ ಇಂತಹ ವಿಶಾಲವಾದ ಸಮೀಕ್ಷೆ ರಾಜ್ಯಮಟದಲ್ಲಿ ಇದೇ ಮೊದಲಾಗಿದೆ ಎಂದು ಸಮರ್ಥಿಸಿಕೊಂಡರು. ವರದಿ ಸಿದ್ಧಗೊಂಡ ನಂತರ ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಆ ನಂತರ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಲ್ಲಿಸಲು ಪತ್ರ ಬರೆದು ಕೇಳಿದೆವಾದರೂ ನಮಗೆ ಸಮಯಾವಕಾಶ ನೀಡಲಿಲ್ಲ. ಇದೇ ವೇಳೆ ಮುಖ್ಯಕಾರ್ಯದರ್ಶಿ ಅವರಿಗೂ ಪತ್ರ ಬರೆದೆವು, ಅಲ್ಲಿಂದಲೂ ಸ್ಪಂದನೆ ದೊರೆಯಲಿಲ್ಲ. ನಮ್ಮ ಅವಧಿ ಪೂರ್ಣಗೊಂಡ ನಂತರ ಸರ್ಕಾರ ನಮ್ಮನ್ನು ಕರ್ತವ್ಯದಿಂದ ಮುಕ್ತಗೊಳಿಸಿತು, ಆ ಸಂದರ್ಭದಲ್ಲಿ ನಾವು ವರದಿಯನ್ನು ಪೆಟ್ಟಿಗೆಯಲ್ಲಿಟ್ಟು ಮೊಹರು ಮಾಡಿ ಬಂದೆವು ಎಂದರು.

ಬಿಜೆಪಿಯಲ್ಲಿ ಅಸಮಾಧಾನ ಸ್ಫೋಟ

ಸ್ಥಾನಮಾನದ ಬಗ್ಗೆ ನೀವೇ ನಿರ್ಧಾರ ಕೈಗೊಳ್ಳಬೇಕು ಎಂದು ವಿನಂತಿಸಲಿದ್ದಾರೆ. ಕೆಲವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಚಿಸುವ ಕ್ಷೇತ್ರಗಳ ಟಿಕೆಟ್ ಪಡೆಯಲು ಒತ್ತಡ ಹಾಕಲಿದ್ದಾರೆ. ವರಿಷ್ಠರು ತಮ್ಮ ಮನವಿಗೆ ಸ್ಪಂದಿಸದಿದ್ದರೆ, ಕೆಲವರು ರಾಜಕೀಯವಾಗಿ ತಟಸ್ಥವಾಗಿ ಉಳಿದರೆ ಮತ್ತೆ ಕೆಲವರು ಪಕ್ಷ ಬಿಡುವ ತೀರ್ಮಾನ ಕೈಗೊಳ್ಳಲಿದ್ದಾರೆ. ವರಿಷ್ಠರನ್ನು ಭೇಟಿ ಮಾಡಲು ಡಿಸೆಂಬರ್ 7ರಂದು ದೆಹಲಿಗೆ ತೆರಳುತ್ತಿರುವುದಾಗಿ ತಿಳಿಸಿದರಲ್ಲದೆ, ಮೂರು ದಿನ ಅಲ್ಲಿಯೇ ಬಿಡಾರ ಹೂಡುವುದಾಗಿ ಹೇಳಿದ್ದಾರೆ. ಲೋಕಸಭಾ ಚುನಾವಣೆಗೂ ಮುನ್ನ ರಾಜಕೀಯ ನಿರ್ಧಾರ ಕೈಗೊಳ್ಳಲಿರುವ ಸೋಮಣ್ಣ ಇಂದು ಬೆಳಗ್ಗೆ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಮಠದ ಸಿದ್ದಲಿಂಗ ಸ್ವಾಮೀಜಿ ಬಳಿ ಚುನಾವಣೆಯಲ್ಲಿ ತಮಗಾದ ಸೋಲು ಮತ್ತು ನಂತರದ ಬೆಳವಣಿಗೆಯ ಬಗ್ಗೆ ಅಳಲು ತೋಡಿಕೊಂಡರು.

ಕೇಂದ್ರ ಗೃಹ ಸಚಿವ ಅಮಿತ್ ಷಾ ನಮ್ಮ ಮನೆಯಲ್ಲಿ ಎರಡು ಗಂಟೆ ಕುಳಿತು ವರುಣಾದಿಂದ ಕಣಕ್ಕಿಳಿಯುವಂತೆ ಒತ್ತಡ ಹೇರಿದರು. ಆದರೆ ನಾನು, ಗೋವಿಂದ ರಾಜ ಕ್ಷೇತ್ರ ಬಿಟ್ಟು ಹೊರಹೋಗಲು ಸಮ್ಮತಿಸಲಿಲ್ಲ, ನಂತರ ಪ್ರಧಾನಿ ಅವರು ತಮ್ಮನ್ನು ದೆಹಲಿಗೆ ಕರೆಸಿಕೊಂಡು ಸ್ಪರ್ಧೆ ಮಾಡುವಂತೆ ಸೂಚಿಸಿದರು. ಅವರ ಮಾತಿಗೆ ತಲೆಬಾಗಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ, ಚಿನ್ನದಂತಹ ಕ್ಷೇತ್ರ ಬಿಟ್ಟುಹೋಗಿದ್ದಕ್ಕೆ ಎರಡು ಕಡೆಯೂ ಸೋತೆ. ಸೋಲಿಗೆ ನಮ್ಮ ಪಕ್ಷದ ಮುಖಂಡರು ಮತ್ತು ಸ್ವಜಾತಿಯವರೇ ಕಾರಣ, ಇದೆಲ್ಲಾ ಮಾಹಿತಿಯನ್ನು ವರಿಷ್ಠರಿಗೆ ನೀಡಿದ್ದೆ, ನನ್ನನ್ನು ಸೋಲಿಸಿದವರಿಗೆ ಈಗ ಪಕ್ಷದಲ್ಲಿ ಸ್ಥಾನಮಾನ ಸಿಕ್ಕಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನನ್ನ ಸಂಬಂಧ ಮುಗಿದ ಅಧ್ಯಾಯ

ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಕೆಲಸ ಮಾಡುತ್ತೇನೆ ಎಂದರು. ಬಿಜೆಪಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ನನ್ನ ಸಹಾಯ ಕೇಳುವ ಪರಿಸ್ಥಿತಿ ಇಂದು ಇಲ್ಲ. ಯಡಿಯೂರಪ್ಪ ಅವರನ್ನು ತಂದೆಯ ಸ್ಥಾನದಲ್ಲಿ ಗೌರವಿಸಿದರೆ, ಶ್ರೀರಾಮುಲು ಅವರನ್ನು ಮಗು ರೂಪದಲ್ಲಿ ನೋಡುತ್ತೇನೆ. ಅವರು ಆಯಾ ಪಕ್ಷದಲ್ಲಿ ಚೆನ್ನಾಗಿರಲಿ ಎಂದು ಬಯಸುತ್ತೇನೆಯೇ ಹೊರತು ಆಹ್ವಾನ ಮಾಡಲ್ಲ ಎಂದರು. ರಾಜಕೀಯಕ್ಕಾಗಿ ಕೌಟುಂಬಿಕ ಸಂಬಂಧ ಕಡಿದುಕೊಂಡ ವಿಚಾರವಾಗಿ ಮಾತನಾಡಿದ ಜನಾರ್ದನ ರೆಡ್ಡಿ, ರಾಜಕೀಯ, ಸಿದ್ಧಾಂತ ಇಟ್ಟುಕೊಂಡು ನಾನು ಹೋಗುವಾಗ ಯಾವ ಸ್ನೇಹ, ಸಂಬಂಧದ ಪ್ರಶ್ನೆ ಬರುವುದೇ ಇಲ್ಲ. ನನ್ನ ಯೋಚನೆ, ಯೋಜನೆಗಳೇ ಪ್ರತ್ಯೇಕವಾಗಿರುವಾಗ ನನ್ನ ಹಾದಿಯಲ್ಲೇ ನಾನು ಹೋಗುತ್ತೇನೆ. ಯಾರಿಗೆ ಯಾವ ಹಾದಿ ಇಷ್ಟ ಆಗುತ್ತದೋ ಆ ಹಾದಿಯಲ್ಲಿ ಅವರು ಹೋಗಬಹುದು ಎಂದರು.

ದೇಶದ ಸಾಧನೆಗಾಗಿ ಪ್ರತಿಯೊಬ್ಬರಿಗೂ ಉನ್ನತ ಶಿಕ್ಷಣ ಅವಶ್ಯ

ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ್ ಅಭಿಮತ



ಮೈಸೂರು, ನ.25(ಜಿಎ)–ಆಹಾರ ಉತ್ಪಾದನಾ ಕ್ಷೇತ್ರದಲ್ಲಿ ದೇಶ ತೋರಿದ ಸಾಧನೆಯ ರೀತಿಯಲ್ಲಿಯೇ ವಿವಿಧ ಕ್ಷೇತ್ರದಲ್ಲಿ ದೇಶ ಉನ್ನತ ಸಾಧನೆ ತೋರಲು ಪ್ರತಿಯೊಬ್ಬರಿಗೂ ಗುಣಮಟ್ಟದ ಉನ್ನತ ಶಿಕ್ಷಣ ದೊರೆಯುವ ಅವಶ್ಯಕತೆ ಇದೆ ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ್ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾಲಯದ ಬಟಾನಿಕಲ್ ಸೊಸೈಟಿ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ವತಿಯಿಂದ ವಿಭಾಗದ ಸಭಾಂಗಣದಲ್ಲಿ ಶನಿವಾರ ಹಸಿರು ಕ್ರಾಂತಿಯ ಹರಿಕಾರ ಡಾ.ಎಂ.ಎಸ್. ಸ್ವಾಮಿನಾಥನ್ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿ, ದೇಶ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಲು ಶಿಕ್ಷಣದ ಪಾತ್ರ ಮಹತ್ವದ್ದು. ಸ್ವಾಮಿನಾಥನ್ ಅವರಿಗೆ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ ದೊರೆಯದೆ ಇದ್ದಿದ್ದರೆ ಹಸಿರು ಕ್ರಾಂತಿ ಸಾಧ್ಯವಾಗುತ್ತಿತ್ತೇ? ಹಾಗಾಗಿ ಶಿಕ್ಷಣದ ಮಹತ್ವವನ್ನು ನಾವು ಇನ್ನಾದರೂ ಅರಿತುಕೊಳ್ಳಬೇಕು. ಶಿಕ್ಷಣದ ಮೂಲಕ ಮಾತ್ರ ನಮ್ಮ ದೇಶ ಹೊಂದಿರುವ ವಿವಿಧ ಗುರಿಗಳನ್ನು ಸಾಧಿಸಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಶಿಕ್ಷಣ ಮತ್ತು ದಾಸೋಹ ಒಟ್ಟಿಗೆ ಸಾಗುವ ಅವಶ್ಯಕತೆ ಇದೆ ಎಂದರು.

ಪ್ರಸ್ತುತ ಸರ್ಕಾರಗಳು ಬಡಜನರ ಹಸಿವು ನೀಗಿಸುವ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುತ್ತಿವೆ. ಇದರ ಜೊತೆಗೆ ಪ್ರತಿಯೊಬ್ಬರಿಗೂ ಗುಣಮಟ್ಟದ ಉನ್ನತ ಶಿಕ್ಷಣ ದೊರೆಯುವಂತೆ ಮಾಡುವ ಕಾರ್ಯ ಆಗಬೇಕಾಗಿದೆ. ವಿಶ್ವದ 200 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ನಮ್ಮ ವಿಶ್ವ ವಿದ್ಯಾಲಯಗಳು ಇಲ್ಲದೆ ಇರುವುದು ಬೇಸರದ ವಿಚಾರ. ಹಾಗಾಗಿ ಉನ್ನತ ಶಿಕ್ಷಣದ ವ್ಯವಸ್ಥೆ ಸುಧಾರಣೆಗೊಳ್ಳುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು.

ಹಸಿರುಕ್ರಾಂತಿಯ ಪರಿಣಾಮವಾಗಿ ದೇಶದಲ್ಲಿ ಆಹಾರ ಉತ್ಪಾದನೆ ಹೆಚ್ಚಾಯಿತು. ಹೆಚ್ಚು ಇಳುವರಿ ನೀಡುವ ಹಲವು ಹೊಸ ತಳಿಗಳನ್ನು ಪರಿಚಯಿಸಲಾಯಿತು. ಸ್ವಾಮಿನಾಥನ್ ಅವರು ಸರ್ಕಾರದ ಮನವೊಲಿಸಿ 18 ಸಾವಿರ ಟನ್ ಬಿತ್ತನೆ ಬೀಜವನ್ನು ಮೆಕ್ಸಿಕೋದಿಂದ ಆಮದು ಮಾಡಿಸಿದ್ದರು. ಇದೆಲ್ಲದರ ಪರಿಣಾಮ ಭತ್ತ ಹಾಗೂ ಗೋಧಿ ಆಹಾರ ಉತ್ಪಾದನೆ ಪ್ರಮಾಣ 1966ರಲ್ಲಿ 11.4 ಮೆಟ್ರಿಕ್ ಟನ್, 1977 16.5 ಮೆಟ್ರಿಕ್ ಟನ್ ಹಾಗೂ 1970ರಲ್ಲಿ 23 ಮೆಟ್ರಿಕ್ ಟನ್‌ಗೆ ಏರಿಕೆಯಾಯಿತು ಎಂದು ವಿವರಿಸಿದರು.

ಹಸಿರುಕ್ರಾಂತಿ ಕೇವಲ ಆಹಾರ ಉತ್ಪಾದನೆಯನ್ನು ಮಾತ್ರ ಹೆಚ್ಚು ಮಾಡಲಿಲ್ಲ. ಬದಲಿಗೆ ಗ್ರಾಮೀಣ ಭಾಗದಲ್ಲಿ ದೊಡ್ಡ ಪ್ರಮಾಣದ ಉದ್ಯೋಗವನ್ನು ಸೃಷ್ಟಿ ಮಾಡಿತು. ಹಸಿರುಕ್ರಾಂತಿಯ ನಂತರ ಕೃಷಿ ಕ್ಷೇತ್ರದಲ್ಲಿ ಯಂತ್ರೋಪಕರಣಗಳನ್ನು ಪರಿಚಯಿಸಲಾಯಿತು. ಹಸಿರುಕ್ರಾಂತಿ ಕೇವಲ ಭಾರತದ ಹಸಿವನ್ನು ಮಾತ್ರವಲ್ಲ ಜಾಗತಿಕ ಹಸಿವನ್ನು ನೀಗಿಸುವಲ್ಲಿ ಮಹತ್ವದ ಕೊಡುಗೆ ನೀಡಿತು. ಆದರೆ, ಪ್ರಸ್ತುತ ಯುವ ಸಮುದಾಯ ಕೃಷಿಯಿಂದ ವಿಮುಖರಾಗುತ್ತಿದೆ. ಕೃಷಿ ಲಾಭದಾಯಕವಲ್ಲ ಎಂಬುದೇ ಇದಕ್ಕೆ ಪ್ರಮುಖ ಕಾರಣ. ಹಣದಿಂದ ಆಹಾರ ಸೃಷ್ಟಿಸಲು ಸಾಧ್ಯವಿಲ್ಲ. ರೈತ ಹೊಲದಲ್ಲಿ ಬಿತ್ತಿದರೆ ಮಾತ್ರ ಆಹಾರ ದೊರೆಯಲು ಸಾಧ್ಯ. ಹಾಗಾಗಿ ಆಹಾರವೇ ಮುಂದಿನ ಭವಿಷ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಶಿವಮೊಗ್ಗದ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಂ.ಕೆ.ನಾಯ್ಕ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ವಿ. ಸುರೇಶ, ಮೈಸೂರು ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಸ್. ಉಮೇಶ, ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಕೆ. ಎನ್. ಅಮೃತೇಶ್ ಮತ್ತಿತರರು ಉಪಸ್ಥಿತರಿದ್ದರು.

ಮಹಾರಾಜ ಪಿಯು ಕಾಲೇಜಲ್ಲಿ ಜಿಲ್ಲಾಮಟ್ಟದ ಅಣಕು ಸಂಸತ್ ಸ್ಪರ್ಧೆ



ಮೈಸೂರು,ನ.25(ಎಂಟಿವೈ)– ಕಾಲೇಜು ವಿದ್ಯಾರ್ಥಿಗಳಲ್ಲಿ ಶಾಸಕಾಂಗದ ಕಾರ್ಯವೈಖರಿ ಪರಿಚಯಿಸುವ ನಿಟ್ಟಿನಲ್ಲಿ ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಅಣಕು ಸಂಸತ್ ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡು ಗಮನ ಸೆಳೆದರು.

ಈಗಾಗಲೇ ತಾಲೂಕು ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡಿ ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾದ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಗಮನಾರ್ಹ ಪ್ರದರ್ಶನ ನೀಡಿ, ಸಂಸತ್‌ನಲ್ಲಿ ರಾಜಕೀಯ ನಾಯಕರು ಚರ್ಚಿಸುವಂತೆ, ಹಾಸ್ಯ ಚಟಾಕಿ ಹಾರಿಸುವುದರೊಂದಿಗೆ ಆಡಳಿತಾರೂಢ–ಪ್ರತಿ ಪಕ್ಷಗಳ ನಡುವೆ ನಡೆಯುವ ವಾಕ್ಸಮರ ಪ್ರದರ್ಶಿಸಿ ಭವಿಷ್ಯದ ರಾಜಕಾರಣಿಗಳಾಗುವ ಆಸಕ್ತಿ ಪ್ರದರ್ಶಿಸಿದರು. ಸಂಸತ್‌ನಲ್ಲಿರುವಂತೆ ವಿವಿಧ ಪಾತ್ರಧಾರಿಗಳಾಗಿ ಆಯ್ಕೆಯಾಗಿದ್ದ ವಿದ್ಯಾರ್ಥಿಗಳು ಆಡಳಿತ ಮತ್ತು ಪ್ರತಿಪಕ್ಷಗಳ ಸಾಲಿನಲ್ಲಿ ಪ್ರತ್ಯೇಕ ಸ್ಥಳದಲ್ಲಿ ಆಸೀನರಾಗಿ ತಮ್ಮ ಮಾತಿನ ಚಾಟಿ ಮೂಲಕ ಗಮನ ಸೆಳೆದರು.

ಚಾಲನೆ: ಇದಕ್ಕೂ ಮುಂಚೆ ಮಹಾರಾಜ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಣಕು ಸಂಸತ್ ಸ್ಪರ್ಧೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮರಿಸ್ವಾಮಿ ಉದ್ಘಾಟಿಸಿ ಮಾತನಾಡಿ, ಭಾರತದಲ್ಲಿ ಯುವ ಜನರ ಸಂಖ್ಯೆ ಹೆಚ್ಚಾಗಿದೆ. ಇಂದಿನ ಯುವಜನರೇ ಭವಿಷ್ಯದ ಭವ್ಯ ಭಾರತದ ನಾಯಕರಾಗಲಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ಸಂಸತ್ತಿನ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ಇದರಿಂದ ಜನಪ್ರತಿನಿಧಿಗಳ ಕರ್ತವ್ಯ ವಿದ್ಯಾರ್ಥಿಗಳಿಗೆ ಮನವರಿಕೆಯಾದರೆ, ಮುಂದಿನ ದಿನಗಳಲ್ಲಿ ಉತ್ತಮ ಜನನಾಯಕರು ಹೊರಹೊಮ್ಮಲು ಸಹಕಾರಿಯಾಗುತ್ತದೆ ಎಂದರು.

ಕಾರ್ಯಕ್ರಮದ ಸಂಘಟನಾಧಿಕಾರಿ ಡಾ.ಬಿ.ಶಶಿಕಲಾ ಮಾತನಾಡಿ, ಬೆಳೆಯುವ ಸಿರಿ ಮೊಳಕೆಯಲ್ಲಿಯೇ ಎಂಬಂತೆ ವಿದ್ಯಾರ್ಥಿಗಳಿಗೆ ಅಣಕು ಸಂಸತ್ ಸ್ಪರ್ಧೆ ಆಯೋಜಿಸಿ, ರಾಜಕೀಯ ಪ್ರಜ್ಞೆ, ಆಡಳಿತ ವೈಖರಿ, ಜನಪ್ರತಿನಿಧಿಗಳ ಕಾರ್ಯ ವ್ಯಾಪ್ತಿ ಬಗ್ಗೆ ಮನವರಿಕೆ ಮಾಡಲಾಗುತ್ತಿದೆ. ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಯುವ ಜನತೆಯ ಪಾತ್ರ ಪ್ರಮುಖವಾಗಿದ್ದು, ಮುಂಬರುವ ವರ್ಷಗಳಲ್ಲಿ ರಾಷ್ಟ್ರದ ಅಭಿವೃದ್ಧಿಯಲ್ಲೂ ಯುವಶಕ್ತಿ ತನ್ನದೇ ಆದ ಕೊಡುಗೆ ನೀಡಲಿದೆ. ಈ ನಿಟ್ಟಿನಲ್ಲಿ ಕಾಲೇಜು ಹಂತದಲ್ಲಿಯೇ ಸಂಸತ್ತಿನ ಕಾರ್ಯಕಲಾಪಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. ಪ್ರಜಾಪ್ರಭುತ್ವದ ಯಶಸ್ವಿಗೆ ಬುನಾದಿಯಾದಂತೆ ರಾಜಕೀಯದಲ್ಲಿ ಯುವಕರಿಗೆ ನಾಯಕತ್ವದ ಗುಣಗಳನ್ನು ಬೆಳೆಸಲು ಈ ಅಣಕು ಪ್ರದರ್ಶನ ಮಹತ್ವದ ಪಾತ್ರ ವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾರಾಜ ಪದವಿ ಕಾಲೇಜಿನ ಪ್ರಾಂಶುಪಾಲ ಉದಯಶಂಕರ್ ಮಾತನಾಡಿ, ವಿದ್ಯಾರ್ಥಿಗಳು ಶಾಲಾ–ಕಾಲೇಜು ಹಂತದಲ್ಲಿ ರಾಜಕೀಯ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕಾಲೇಜು ಹಂತದಲ್ಲಿ ರಾಜಕೀಯ ಗುಣಗಳನ್ನು ಮೈಗೂಡಿಸಿಕೊಂಡರೆ ಭವಿಷ್ಯದಲ್ಲಿ ಉತ್ತಮ ನಾಯಕರಾಗಿ ಹೊರಹೊಮ್ಮಬಹುದು ಎಂದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ನೌಕರರ ಸಂಘದ ಗೌರವಾಧ್ಯಕ್ಷ ಎ.ಎಲ್ ಉಮೇಶ್, ಕರ್ನಾಟಕ ಜಿಲ್ಲಾ ಉಪನ್ಯಾಸಕರ ಸಂಘ ಅಧ್ಯಕ್ಷ ಮಹದೇವ, ಪಶುಪತಿ, ಪ್ರಾಂಶುಪಾಲರಾದ ನಾಗರತ್ನಮ್ಮ ಉಪನ್ಯಾಸಕರಾದ ಹೇಮಲತಾ, ಶಶಿರೇಖಾ, ಡಾ.ಆಶಾ, ರೇಖಾ, ರಮೇಶ್, ನಟರಾಜ್, ಡಾ.ಮಂಗಳಾಮೂರ್ತಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ರುದ್ರಾಭಿಷೇಕ, ರುದ್ರ ಪಾರಾಯಣ

ಮೈಸೂರು, ನ.25–ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ಉತ್ತರಾದಿ ಮಠದ, ಸಿಎಫ್‌ಟಿಆರ್‌ಐ ಪಕ್ಕದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಸನ್ನಿಧಿಯಲ್ಲಿ ನ.27ರಂದು ಸೋಮವಾರ ಸಂಜೆ 5 ಗಂಟೆಗೆ ಕಾರ್ತಿಕ ಮಾಸದ ಪರ್ವ ಕಾಲದ ಪ್ರಯುಕ್ತ ಶ್ರೀ ಬಾಗೇವಾಡಿ ಆಚಾರ್ಯರವರ ನೇತೃತ್ವದಲ್ಲಿ ರುದ್ರಾಭಿಷೇಕ, ರುದ್ರ ಪಾರಾಯಣ (ನಮಕ–ಚಮಕ ಸಮೇತ) ಬಿಲ್ವಾರ್ಚನೆ ಹಾಗೂ ದೀಪಾರಾಧನೆಯನ್ನು ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮಾಜಿ ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ಹಾಗೂ ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್ ಭಾಗವಹಿಸಲಿದ್ದಾರೆಂದು ಶ್ರೀ ಉತ್ತರಾದಿ ಮಠದ ಪ್ರಧಾನ ವ್ಯವಸ್ಥಾಪಕ ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿಯವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9686978861 ಸಂಪರ್ಕಿಸಬಹುದು.

ಡಿ.3ಕ್ಕೆ ಮೈಸೂರು ಗ್ರಾವೆಲ್ ಫೆಸ್ಟ್



ಮೈಸೂರು, ನ.25(ಜಿಎ)–ಆಟೋಮೋಟಿವ್ ಸ್ಪೋರ್ಟ್ಸ್ ಕ್ಲಬ್ ಆಫ್ ಮೈಸೂರು ವತಿಯಿಂದ ಡಿ.3ರಂದು ನಗರದ ಲಲಿತ ಮಹಲ್ ಹೆಲಿಪ್ಯಾಡ್ ಮೈದಾನದಲ್ಲಿ 'ಮೈಸೂರು ಗ್ರಾವೆಲ್ ಫೆಸ್ಟ್' ಆಟೋಕ್ರಾಸ್ ರೇಸ್ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಫಾಲ್ಗುಣ ವಿ. ಅರಸ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಸ್ಟ್‌ನಲ್ಲಿ ದೇಶದ ವಿವಿಧ ಭಾಗಗಳಿಂದ 100 ಚಾಲಕರು ಭಾಗವಹಿಸಲಿದ್ದಾರೆ. ನವದೆಹಲಿ, ಮಹಾರಾಷ್ಟ್ರ, ಗೋವಾ, ತೆಲಂಗಾಣ, ಆಂಧ್ರ, ತಮಿಳುನಾಡು, ಮತ್ತು ಕೇರಳ ಮೂಲದ ಅಗ್ರಮಾನ್ಯ ಚಾಲಕರು ನಮ್ಮ ರಾಜ್ಯದ ನುರಿತ ಚಾಲಕರೊಂದಿಗೆ ಪೈಪೋಟಿ ಮಾಡಲಿದ್ದಾರೆ. ಡೆನ್ ತಿಮ್ಮಯ್ಯ, ಚೇತನ್ ಶಿವರಾಮ್, ಜಾಹನ್ ಗಿಲ್, ಡೀನ್ ಎಮ್, ಪ್ರಾತಿ ಗೌಡ, ನಿಕಿತಾ ತಕಲೆ ಮುಂತಾದ ದೇಶದ ಅಗ್ರಮಾನ್ಯ ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ದಿನದ ಅತ್ಯಂತ ವೇಗದ ಚಾಲಕನಿಗೆ "ಮೈಸೂರು ಗ್ರಾವೆಲ್ ಕಿಂಗ್–2023" ಬಿರುದಿದೊಂದಿಗೆ ಎರಡು ಲಕ್ಷ ನಗದು ಬಹುಮಾನ ಹಾಗೂ ಎಲ್ಲಾ ವಿಜೇತರಿಗೆ ಬೆಳ್ಳಿ ಟ್ರೋಫಿ ನೀಡಲಾಗುತ್ತಿದೆ ಎಂದರು.

ರೇಸ್ ನೋಡಲು ಬರುವ ಪ್ರೇಕ್ಷಕರಿಗೆ ಯಾವುದೇ ಟಿಕೆಟ್ ಇರುವುದಿಲ್ಲ ದಿನದ ಮೊದಲ ರೇಸ್ ಬೆಳಗ್ಗೆ 8:30 ಶುರುವಾಗಲಿದ್ದು, ಕಾರ್ಯಕ್ರಮವು ಸಂಜೆ 5ಕ್ಕೆ ಮುಕ್ತಾಯಗೊಳ್ಳಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಅರುಣ ಅರಸ್, ಚರಣ್‌ರಾಜ್ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ನ 25– ಮೈಸೂರಿನ ರುಡ್‌ಸೆಟ್ ಸಂಸ್ಥೆಯಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕ ಯುವತಿಯರಿಗಾಗಿ ಸ್ವಉದ್ಯೋಗ ಮಾಡಲು ವಿವಿಧ ರೀತಿಯ ಕೌಶಲ್ಯ ತರಬೇತಿಗಳನ್ನು ಪ್ರಾರಂಭಿಸಲಾಗುವುದು.

ಫೋಟೋಗ್ರಫಿ ಮತ್ತು ವೀಡಿಯೋಗ್ರಫಿ : ಡಿ. 13 ರಿಂದ 11 (30 ದಿನಗಳು). ಬ್ಯೂಟಿಪಾರ್ಲರ್ ಮ್ಯಾನೇಜ್‌ಮೆಂಟ್: ಡಿ. 15 ರಿಂದ ಜ. 13) (30 ದಿನಗಳು)

ಅಭ್ಯರ್ಥಿಗಳ ಅರ್ಹತೆ : 18 ರಿಂದ 45 ವರ್ಷಗಳ ವಯೋಮಿತಿಯನ್ನು ಹೊಂದಿರಬೇಕು. ಕನ್ನಡ ಓದು ಬರಹ ಬಲ್ಲವರಾಗಿರಬೇಕು. ಸ್ವ ಉದ್ಯೋಗವನ್ನು ಮಾಡಬೇಕೆಂಬ ಆಸಕ್ತಿ ಹೊಂದಿರಬೇಕು.

ಆಸಕ್ತರು ಸಂಸ್ಥೆಗೆ ಖುದ್ದಾಗಿ ಬಂದು ಇಲ್ಲವೇ ದೂರವಾಣಿ ಮುಖಾಂತರ ತರಬೇತಿಗೆ ಹೆಸರು ನೋಂದಾಯಿಸಲು ತಿಳಿಸಲಾಗಿದೆ.

ತರಬೇತಿಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನೇರ ಸಂದರ್ಶನ ಮೂಲಕ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 0821–2519663, 9844013948, 9880196581, 6361019245, 9740430061, 8746803006 ಸಂಪರ್ಕಿಸಬಹುದು.

ನ.28, ಸಂವಿಧಾನ ರಕ್ಷಣೆ, ಜಾಗೃತಿ ಸಮಾವೇಶ



ಮೈಸೂರು, ನ.25(ಜಿಎ)–ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಮಿತಿ ವತಿಯಿಂದ ನ.28 ರಂದು ಬೆಳಗ್ಗೆ 11ಕ್ಕೆ ನಗರದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಸಂವಿಧಾನ ರಕ್ಷಣೆ ಹಾಗೂ ಪ್ರಜಾಪ್ರಭುತ್ವ ಉಳಿವು ಬಗ್ಗೆ ಜಿಲ್ಲಾ ಮಟ್ಟದ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಸಂಚಾಲಕ ಮಲ್ಲಹಳ್ಳಿ ನಾರಾಯಣ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದಾರೆ. ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಧ್ಯಕ್ಷತೆ ವಹಿಸುತ್ತಿದ್ದಾರೆ. ಪ್ರೊ. ಅರವಿಂದ್ ಮಾಲಗತ್ತಿ ಅವರು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಕುರಿತು ಮಾತನಾಡಲಿದ್ದಾರೆ. ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಡಿ.ರವಿಶಂಕರ್, ಮಾಜಿ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಎಚ್.ಪಿ. ಮಂಜುನಾಥ್ ಭಾಗವಹಿಸಲಿದ್ದಾರೆ. ಜಾಗೃತಿ ಸಮಾವೇಶದಲ್ಲಿ ಕೆಲವು ಹಕ್ಕೊತ್ತಾಯಗಳನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರನ್ನು ಆಗ್ರಹಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಬನ್ನಳ್ಳಿ ಸೋಮಣ್ಣ, ವಾಟಾಳ್ ನಾಗರಾಜು, ಬಸವರಾಜು ದೇವರಸನಹಳ್ಳಿ, ಅಶೋಕ ಧಮ್ಮ ಉಪಸ್ಥಿತರಿದ್ದರು.

ಬುಡಕಟ್ಟು ಸಮುದಾಯದವರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು

ಆಯಿಷ್ ಮುಖ್ಯಸ್ಥ ಡಾ. ಎಂ.ಸಂದೀಪ್ ಸಲಹೆ



ಮೈಸೂರು,ನ.25(ಎಂಟಿವೈ)– ಬುಡಕಟ್ಟು ಸಮುದಾಯ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಮೂಲಕ ಉನ್ನತ ಹುದ್ದೆ ಅಲಂಕರಿಸುವತ್ತ ಗಮನ ಹರಿಸಬೇಕು ಎಂದು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (ಆಯಿಷ್) ಸಂವಹನ ನ್ಯೂನತೆಗಳ ತಡೆಗಟ್ಟುವಿಕೆ ವಿಭಾಗದ ಮುಖ್ಯಸ್ಥ ಡಾ.ಎಂ.ಸಂದೀಪ್ ಸಲಹೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಯೋಗದಲ್ಲಿ 'ಜನ ಜಾತೀಯ ಗೌರವ್' ದಿವಸದ ಅಂಗವಾಗಿ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಆದಿವಾಸಿ ನಾಯಕ ಬಿರ್ಸಾಮುಂಡಾ ಜಯಂತಿ ಕಾರ್ಯಕ್ರಮದಲ್ಲಿ ಬಿರ್ಸಾ ಮುಂಡಾ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದೇಶದಲ್ಲಿ ಬುಡಕಟ್ಟು ಸಮುದಾಯವನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮ ರೂಪಿಸಲಾಗುತ್ತಿದೆ. ಸರ್ಕಾರ ಜಾರಿಗೊಳಿಸಿದ ಯೋಜನೆಗಳ ಸದುಪಯೋಗ ಮಾಡಿಕೊಳ್ಳಬೇಕು. ಇದರೊಂದಿಗೆ ಪ್ರಮುಖವಾಗಿ ಬುಡಕಟ್ಟು ಸಮುದಾಯದ ಜನ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಯಾವುದೇ ಕಾರಣಕ್ಕೂ ಮಕ್ಕಳನ್ನು ಶಾಲೆ ಬಿಡಿಸಬಾರದು ಎಂದು ಸಲಹೆ ನೀಡಿದರು.

ಬುಡಕಟ್ಟು ಸಮುದಾಯದ ಮಕ್ಕಳು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು. ಉನ್ನತ ಶಿಕ್ಷಣ ಪಡೆದು ಸರ್ವತೋಮುಖ ಅಭಿವೃದ್ಧಿ ಹೊಂದಬೇಕು. ಸರ್ಕಾರದ ಯೋಜನೆಗಳನ್ನು ಬಳಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸಬೇಕು. ಆದಿವಾಸಿ ಮಕ್ಕಳು ಶಿಕ್ಷಣ ಪಡೆದರೆ ಸಾಮಾಜಿಕ ಸ್ಥಿತಿಗತಿ ಬದಲಾಗುತ್ತದೆ ಎಂದರು.

ಬುಡಕಟ್ಟು ಸಮುದಾಯ ನಾಯಕ ಬಿರ್ಸಾಮುಂಡಾ 1875ರಲ್ಲಿ ಜನಿಸಿದರು. ಹುಟ್ಟು ಹೋರಾಟಗಾರರಾಗಿ ಬುಡಕಟ್ಟು ಸಮುದಾಯದ ಏಳಿಗೆಗಾಗಿ ತಮ್ಮ ವೈಯಕ್ತಿಕ ಬದುಕನ್ನು ತ್ಯಾಗ ಮಾಡಿದರು. ಬಿರ್ಸಾಮುಂಡಾ ಅವರ ತತ್ವ, ಆದರ್ಶ, ಹೋರಾಟದ ಗುಣಗಳನ್ನು ಪ್ರತಿಯೊಬ್ಬ ಆದಿವಾಸಿಗಳು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬುಡಕಟ್ಟು ಸಮುದಾಯದ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯುವುದರೊಂದಿಗೆ ತಮ್ಮ ಆರೋಗ್ಯ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು. ಈಗಾಗಲೇ ರಾಜ್ಯ ಬುಡಕಟ್ಟು ಸಂಶೋಧನಾ ಕೇಂದ್ರವು ಆಶ್ರಮ ಶಾಲೆಗಳಲ್ಲಿರುವ ಮಕ್ಕಳ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸುತ್ತಾ ಬಂದಿದೆ. ಈಗಾಗಲೇ ಜಿಲ್ಲೆಯಲ್ಲಿರುವ 21 ಆಶ್ರಮ ಶಾಲೆಗಳ ಮಕ್ಕಳಿಗೂ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಇಂದು ಹೆಚ್.ಡಿ ಕೋಟೆ ತಾಲೂಕಿನ ಡಿ.ಬಿ.ಕುಪ್ಪೆ ಆಶ್ರಯ ಶಾಲೆಯ 33 ಮಕ್ಕಳಿಗೆ ಅಗತ್ಯ ಚಿಕಿತ್ಸೆ ನೀಡಲಾಗಿದೆ. ಯಾವುದೇ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ವಾಕ್ ಮತ್ತು ಶ್ರವಣ ದೋಷದ ಲಕ್ಷಣ ಕಂಡು ಬಂದರೆ ಪೋಷಕರು ನಿರ್ಲಕ್ಷಿಸದೆ, ಮೈಸೂರಲ್ಲಿರುವ ವಾಕ್ ಮತ್ತು ಶ್ರವಣ ಸಂಸ್ಥೆಗೆ ಕರೆತಂದು ತಪಾಸಣೆ ಮಾಡಿಸಬೇಕು. ಇದರಿಂದ ದೋಷ ಕಂಡು ಬಂದರೆ, ಆರಂಭಿಕ ಹಂತದಲ್ಲೇ ಚಿಕಿತ್ಸೆ ನೀಡಿದರೆ, ಪೂರ್ಣ ಪ್ರಮಾಣದಲ್ಲಿ ದೋಷ ನಿವಾರಿಸಿ, ಗುಣಪಡಿಸಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪ ನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ವಾಕ್ ಮತ್ತು ಶ್ರವಣ ಸಂಸ್ಥೆಯ ತಜ್ಞರಾದ ಪ್ರೊ. ಡಾ. ಅಜೀಶ್ ಅಬ್ರಹಾಂ, ಡಾ.ರವೀಶ್‌ಗಣಿ, ಡಾ.ಮಹಾದೇವಪ್ಪ, ಡಾ.ಕೆ ಅರುಣ್‌ರಾಜ್, ಡಾ.ಸಾರಾನ್ಸ್ ಜೈನ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಕನ್ನಡಕ್ಕೆ ಆಂಗ್ಲರ ಆಶ್ರಯ!





"ಆಳುವವರ ಭಾಷೆಯಾಗಿದ್ದರಿಂದ ಹಲವರು ಇಂಗ್ಲಿಷನ್ನು ಕಲಿತರು. ಸ್ವಾತಂತ್ರ್ಯ ಬಂದ ನಂತರ, ಸಂವಿಧಾನದ ರಚನೆಯಾಯಿತು. ಹಲವು ಕಾರಣಗಳಿಂದ ತ್ರಿಭಾಷಾ ಸೂತ್ರ ಬಂತು. ಭಾಷಾವಾರು ವಿಂಗಡಣೆಯಾದಾಗ, ಕೇಂದ್ರದೊಂದಿಗಿನ ವ್ಯವಹಾರಕ್ಕಾಗಿ ಹಿಂದಿಯೂ ಎಲ್ಲೆಡೆ ಚಾಲ್ತಿಗೆ ಬಂತು. ಮಾತೃಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಮಾಡಿಕೊಳ್ಳಲು ಸಂವಿಧಾನದ 345ನೇ ವಿಧಿ ರಾಜ್ಯಗಳಿಗೆ ಪರಮಾಧಿಕಾರ ನೀಡಿತು. ಆದರೆ ಇಂಗ್ಲಿಷ್‌ನ ಬಳಕೆಗೆ ಆಕ್ಷೇಪ ಒಡ್ಡಲಿಲ್ಲ. ಇದನ್ನೇ ನೆಪವಾಗಿಸಿಕೊಂಡ ನಮ್ಮ ಕರ್ನಾಟಕದಲ್ಲಿ, ಆಡಳಿತ ಭಾಷೆ ಕನ್ನಡವಾಗಿದ್ದರೂ, ಎಲ್ಲ ಸರ್ಕಾರಿ ಕಡತಗಳ ಇಂಗ್ಲಿಷ್ ಅನುವಾದವೂ ದೊರಕುವುದರಿಂದ, ಕನ್ನಡವನ್ನು ಕಲಿಯುವ ಕಡ್ಡಾಯ ಪರಿಸರ ಕರ್ನಾಟಕದಲ್ಲಿ ಸೃಷ್ಟಿಯಾಗಲೇ ಇಲ್ಲ. ಇಲ್ಲಿಗೆ ನಿಯೋಜನೆಗೊಂಡು ಬರುವ ಅಧಿಕಾರಿಗಳಲ್ಲಿ ಬಹುತೇಕರು ಕನ್ನಡ ಕಲಿಯುವ ಆಸಕ್ತಿಯನ್ನೇ ತೋರುವುದಿಲ್ಲ.

"ರಾಜ್ಯೋತ್ಸವದ ತಿಂಗಳು ಮುಗಿಯುತ್ತಲಿದೆ. ಸುವರ್ಣ ಸಂಭ್ರಮ ಇಡೀ ವರ್ಷ ಇದ್ದರೂ, ನಾವು ಕನ್ನಡಿಗರಿಗೆ ಕನ್ನಡದ ಅಸ್ಮಿತೆಯ ಬಗೆಗಿನ ಸಂಕಟ ಕಾಡುವುದು ನವೆಂಬರ್‌ನಲ್ಲಿ ಮಾತ್ರ ಎಂಬುದು ಸೂರ್ಯ ಚಂದ್ರರಷ್ಟೇ ನಿಜ. ನಮ್ಮನ್ನು ಆಳುವವರಿಗೂ ಈ ತಿಂಗಳಲ್ಲಿ ಕನ್ನಡದ ಉಳಿವಿಗೆ ನೂರಾರು ಕೆಲಸ ಮಾಡುವ ಅಥವಾ ಉಪಾಯವನ್ನು ಘೋಷಿಸುವ ಉಮೇದು. ನಂತರ ಎಲ್ಲವೂ ಠುಸ್ ಪಟಾಕಿ! ಕನ್ನಡ ಆಡಳಿತ ಭಾಷೆಯಾಗಲು ಸಾಧ್ಯವಿಲ್ಲವೇ? ಇದರ ಸಾಧ್ಯಾಸಾಧ್ಯತೆಗಳು ಎಷ್ಟು ಎನ್ನುವುದನ್ನು ಯೋಚಿಸುತ್ತಿರುವಾಗ, ಎಂದಿನಿಂದ ಈ ಇಂಗ್ಲಿಷ್ ಆಡಳಿತ ಭಾಷೆಯಾಯ್ತು ಎಂಬುದನ್ನು ತಿಳಿಯ ಹೊರಟಾಗ ಅಚ್ಚರಿಯಾಯಿತು. ಇಂಗ್ಲಿಷರನ್ನೇ ಇಂಗ್ಲಿಷ್ ಹೇರಿಕೆಗೆ ದೂರುವುದನ್ನು ಹವ್ಯಾಸವಾಗಿಸಿಕೊಂಡಿರುವ ನಮಗೆ, ಅವರೂ ಆಡಳಿತದಲ್ಲಿ ಕನ್ನಡ ಇರುವಂತೆ ನೋಡಿಕೊಂಡಿದ್ದರು ಎಂಬುದು ಅತ್ಯಾಶ್ಚರ್ಯ ತರುವಂಥದ್ದೇ.

■ ಹೆಚ್.ನಿವೇದಿತಾ
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು, ಮೈಸೂರು.
ಮೊ.9964038916

ಆಡಳಿತ ಭಾಷೆಯಾಗಿ ಕನ್ನಡವನ್ನು ತರುವ ವಾದ ಮುನ್ನೆಲೆಗೆ ಬಂದಾಗಲೆಲ್ಲಾ, ಸಾಹಿತಿಗಳು ತಮ್ಮ ಅಮೂಲ್ಯ ಸಲಹೆಗಳನ್ನು ನೀಡುತ್ತಲೇ ಬಂದಿದ್ದಾರೆ. ಸರ್ಕಾರ ಅದನ್ನು ಕಾಲಾಂತರದಿಂದ ಅವಗಣನೆ ಮಾಡುತ್ತಲೇ ಬಂದಿದೆ. ಕುವೆಂಪು ಅವರೇ ಆಳುವವರ ಈ ಧೋರಣೆಯಿಂದ ಬೇಸತ್ತು, **"ಇಂಗ್ಲಿಷರು ಆಳುತ್ತಿದ್ದಾಗಲೂ ಕೇವಲ ಒಂದು ಶೇಕಡಾ ಜನರಿಗೆ ಮಾತ್ರ ಇಂಗ್ಲಿಷ್ ಕಲಿಸಿ ಆಯಾ ಪ್ರಾಂತ್ಯಗಳನ್ನು ಅಲ್ಲಿನ ಮಾತೃಭಾಷೆ ಬಳಸಿಯೇ ಆಳುತ್ತಿದ್ದರು. ಅಂತಹುದರಲ್ಲಿ ನಮಗೇಕೆ ಸಾಧ್ಯವಾಗುತ್ತಿಲ್ಲ?"** ಎಂದು ಖಾರವಾಗಿಯೇ ಪ್ರಶ್ನಿಸಿದ್ದರು.

ಇತಿಹಾಸವನ್ನು ಅವಲೋಕಿಸಿದಾಗ ಕರ್ನಾಟಕ, ಕನ್ನಡ ಮತ್ತು ಕನ್ನಡೇತರ ರಾಜವಂಶಗಳಿಂದ ಆಳಲ್ಪಟ್ಟಿದೆ. ಸಂಸ್ಕೃತದ ಪ್ರಭಾವದ ಜೊತೆ, ನಮ್ಮನ್ನು ಆಳಿದ ಮರಾಠಿ ದೊರೆಗಳು, ಮುಸ್ಲಿಮ್ ದೊರೆಗಳು ಮತ್ತು ಟಿಪ್ಪುವಿನ ಕಾಲದಲ್ಲಿ ಕನ್ನಡಕ್ಕೆ ಹೇರಳವಾಗಿ ಮರಾಠಿ, ಉರ್ದು ಮತ್ತು ಪರ್ಶಿಯನ್ ಭಾಷೆಗಳ ಆಮದಾಯಿತು. ನಂತರದಲ್ಲಿ ಯೂರೋಪಿಯನ್ನರು ಭಾರತಕ್ಕೆ ಕಾಲಿಟ್ಟರು. ಅದರಲ್ಲೂ ಬ್ರಿಟಿಷ್ ಅಂದರೆ ಇಂಗ್ಲಿಷ್ ದೊರೆಗಳ ಪ್ರಾಬಲ್ಯ ಹೆಚ್ಚಾಯಿತು. ಬೇರೆಲ್ಲ ಭಾಷೆಗಳಂತೆ, ಇಂಗ್ಲಿಷ್‌ಗೂ ಕನ್ನಡಿಗರು ಕದ ತೆರೆದರು.

ಸ್ವಾರಸ್ಯವೆಂದರೆ, ಕರ್ನಾಟಕದಲ್ಲಿ ಅಂದರೆ ಆಗಿನ ಕನ್ನಡ ಪ್ರಾಂತ್ಯದಲ್ಲಿ ಆಡಳಿತ ನಡೆಸುತ್ತಿದ್ದ ಹಲವು ಇಂಗ್ಲಿಷ್ ಅಧಿಕಾರಿಗಳು ಕನ್ನಡದ ಬಳಕೆಗೆ, ಓದಿಗೆ ಪ್ರಾಶಸ್ತ್ಯ ಕೊಟ್ಟಿದರ ಬಗ್ಗೆ ನಮಗೆ ದಾಖಲೆಗಳು ದೊರಕುತ್ತವೆ. ಕಚೇರಿ ವ್ಯವಹಾರಗಳಲ್ಲಿ ಕನ್ನಡವೇ ಬಳಕೆಯಲ್ಲಿತ್ತು. ಕಡತಗಳು, ರಾಜ್ಯಪತ್ರಗಳು, ಆದೇಶಗಳು, ಅಧಿಸೂಚನೆಗಳು, ಪ್ರಕಟಣೆಗಳು, ಕೈಪಿಡಿಗಳು, ಇವೆಲ್ಲವೂ ಕನ್ನಡದಲ್ಲಿಯೇ ಇರುವಂತೆ ಬ್ರಿಟಿಷರು ನೋಡಿಕೊಂಡಿದ್ದರು. ಕನ್ನಡ ಭಾಷೆಗೆ ಮಹತ್ವದ ಕೊಡುಗೆ ನೀಡಿದವರ ಪಟ್ಟಿಯೇ ಇದೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಇ.ಪಿ.ರೈಸ್ ಬರೆದರೆ, ವಿಲಿಯಮ್ ಕ್ಯಾರಿ ಮ್ಯಾಕ್ಕರೆಲ್ ಕನ್ನಡ ವ್ಯಾಕರಣ ಪುಸ್ತಕ ರಚಿಸಿದರು. ಬಿ.ಎಲ್.ರೈಸ್ ಅವರು ಕನ್ನಡ ಶಾಸನಗಳ ಪಿತಾಮಹ ಎಂದು ಹೆಸರಾದರೆ, ಕಿಟ್ಟೆಲ್‌ರ ಕನ್ನಡ ನಿಘಂಟು ಅವರನ್ನು ಪ್ರಾತಃಸ್ಮರಣೀಯರನ್ನಾಗಿಸಿತು.

ಇವರುಗಳಲ್ಲದೆ, ಇನ್ನೂ ಹಲವು ಅಧಿಕಾರಿಗಳು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವೆಡೆ ಆಸಕ್ತಿ ತಳೆದು ಫರ್ಮಾನುಗಳನ್ನೂ ಹೊರಡಿಸಿದರು. ಅವರಲ್ಲಿ,

ಥಾಮಸ್ ಮುನ್ರೋ: ನ್ಯಾಯಾಲಯದ ಕಾರ್ಯಕಲಾಪಗಳು ಕನ್ನಡದಲ್ಲಿ ನಡೆಯಬೇಕು, ಆಗ ಮಾತ್ರ ನ್ಯಾಯ ಎಲ್ಲರಿಗೂ ದೊರಕುತ್ತದೆ ಎಂದು ನಂಬಿದವರು. ನ್ಯಾಯಾಲಯದಲ್ಲಿ ಕನ್ನಡ ಬಳಕೆಗೆ ಸೂಚನೆಗಳನ್ನು ನೀಡಿದರು.

ಮಾರ್ಕ್ ಕಬ್ಬನ್: ಕಬ್ಬನ್ ಪಾರ್ಕ್‌ಗೆ ಹೆಸರಾದ ಮಾರ್ಕ್ ಕಬ್ಬನ್, ತಮ್ಮ ಅಧಿಕಾರಾವಧಿಯಲ್ಲಿ ಎಲ್ಲ ಕಡೆ ಕನ್ನಡ ಬಲ್ಲ ಅಧಿಕಾರಿಗಳನ್ನು ಮಾತ್ರ ನೇಮಿಸುತ್ತಿದ್ದರು. ಅಲ್ಲದೇ, ತಾಲೂಕು ಕಚೇರಿಗಳಲ್ಲಿ ಕನ್ನಡವೇ ಆಡಳಿತ ಭಾಷೆಯಾಗಬೇಕೆಂದು ಆದೇಶ ಹೊರಡಿಸಿದ.

ಎಲ್ ರಿಕೆಟ್ಸ್: ಮೈಸೂರ್ ಗೆಜೆಟ್‌ನ ಸಂಪಾದಕನಾಗಿದ್ದ ಈತ, ಸರ್ಕಾರದ ಎಲ್ಲ ಆದೇಶಗಳೂ ಜನಸಾಮಾನ್ಯರಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿರಬೇಕು ಎಂದು ಆದೇಶಿಸಿದ್ದ.

ಎ.ಎಫ್.ಜೆ.ಮೆಕಾರ್ಡಿ: ಬಳ್ಳಾರಿಯಲ್ಲಿ ಮೂರು ಅವಧಿಗೆ ಜಿಲ್ಲಾಧಿಕಾರಿಯಾಗಿದ್ದ ಈತ, ಬಳ್ಳಾರಿ ಜಿಲ್ಲೆಯ ಹಡಗಲಿ, ಹರಪನಹಳ್ಳಿ, ಶಿರಗುಪ್ಪ, ಕೂಡ್ಲಿಗಿ ಮತ್ತು ಹೊಸಪೇಟೆಗಳಲ್ಲಿ ಕನ್ನಡದ ವ್ಯಾಪಕ ಬಳಕೆಯನ್ನು ಮನಗಂಡು, ಅವುಗಳನ್ನು ಕನ್ನಡ ಪ್ರಾಂತ್ಯಗಳೆಂದು ಘೋಷಿಸುವಂತೆ ಮಾಡಿದ. ಹಾಗೆಯೇ, ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ತೆಲುಗು ಅಧಿಕಾರಿಗಳನ್ನು ಎತ್ತಂಗಡಿ ಮಾಡಿಸಿ, ಕನ್ನಡ ಅಧಿಕಾರಿಗಳನ್ನು ನೇಮಿಸಿದ.

ಡಬ್ಲ್ಯೂ.ಎಲ್.ರಫೇಲ್: ಉತ್ಕಟ ಕನ್ನಡಾಭಿಮಾನಿಯಾಗಿದ್ದ ಈ ಇಂಗ್ಲಿಷ್ ಅಧಿಕಾರಿ, ಮರಾಠಿ ಆಳ್ವಿಕೆಯಲ್ಲಿದ್ದ ಉತ್ತರ ಕರ್ನಾಟಕವನ್ನು ಕನ್ನಡ ಪ್ರಾಂತ್ಯವೆಂದು ಘೋಷಿಸಿದವನು. ಕನ್ನಡದ ಶಾಲಾ ಕಾಲೇಜುಗಳನ್ನು ತೆರೆದನು.

ವಾಲ್ಟರ್ ಈಲಿಯಟ್: ಕನ್ನಡ ಭಾಷಾಂತರಕಾರನಾಗಿದ್ದ ಈತ, ಧಾರವಾಡದಲ್ಲಿ ಮರಾಠಿ ಶಾಲೆಯನ್ನು ತೆರೆದಾಗ ಪ್ರತಿಭಟಿಸಿದ್ದ. ತನ್ನದೇ ಖರ್ಚಿನಲ್ಲಿ ಕನ್ನಡ ಶಾಲೆಯನ್ನು ಸ್ಥಾಪಿಸಿ ಹಲವು ವರ್ಷಗಳವರೆಗೆ ನಡೆಸಿದ.

ಹೀಗೆ ಕನ್ನಡ ನಾಡಿನಲ್ಲಿದ್ದು, ಕನ್ನಡಾಭಿಮಾನ ಮೆರೆದ ಹಲವು ಇಂಗ್ಲಿಷರು ನಮಗೆ ಚರಿತ್ರೆಯಲ್ಲಿ ದೊರೆಯುತ್ತಾರೆ.


ಆಳುವವರ ಭಾಷೆಯಾಗಿದ್ದರಿಂದ ಹಲವರು ಇಂಗ್ಲಿಷನ್ನು ಕಲಿತರು. ಸ್ವಾತಂತ್ರ್ಯ ಬಂದ ನಂತರ, ಸಂವಿಧಾನದ ರಚನೆಯಾಯಿತು. ಹಲವು ಕಾರಣಗಳಿಂದ ತ್ರಿಭಾಷಾ ಸೂತ್ರ ಬಂತು. ಭಾಷಾವಾರು ವಿಂಗಡಣೆಯಾದಾಗ, ಕೇಂದ್ರದೊಂದಿಗಿನ ವ್ಯವಹಾರಕ್ಕಾಗಿ ಹಿಂದಿಯೂ ಎಲ್ಲೆಡೆ ಚಾಲ್ತಿಗೆ ಬಂತು. ಮಾತೃಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಮಾಡಿಕೊಳ್ಳಲು ಸಂವಿಧಾನದ 345ನೇ ವಿಧಿ ರಾಜ್ಯಗಳಿಗೆ ಪರಮಾಧಿಕಾರ ನೀಡಿತು. ಆದರೆ ಇಂಗ್ಲಿಷ್‌ನ ಬಳಕೆಗೆ ಆಕ್ಷೇಪ ಒಡ್ಡಲಿಲ್ಲ. ಇದನ್ನೇ ನೆಪವಾಗಿಸಿಕೊಂಡ ನಮ್ಮ ಕರ್ನಾಟಕದಲ್ಲಿ, ಆಡಳಿತ ಭಾಷೆ ಕನ್ನಡವಾಗಿದ್ದರೂ, ಎಲ್ಲ ಸರ್ಕಾರಿ ಕಡತಗಳ ಇಂಗ್ಲಿಷ್ ಅನುವಾದವೂ ದೊರಕುವುದರಿಂದ, ಕನ್ನಡವನ್ನು ಕಲಿಯುವ ಕಡ್ಡಾಯ ಪರಿಸರ ಕರ್ನಾಟಕದಲ್ಲಿ ಸೃಷ್ಟಿಯಾಗಲೇ ಇಲ್ಲ. ಇಲ್ಲಿಗೆ ನಿಯೋಜನೆಗೊಂಡು ಬರುವ ಅಧಿಕಾರಿಗಳಲ್ಲಿ ಬಹುತೇಕರು ಕನ್ನಡ ಕಲಿಯುವ ಆಸಕ್ತಿಯನ್ನೇ ತೋರುವುದಿಲ್ಲ.

ತಮಿಳುನಾಡು, ಒರಿಸ್ಸಾ, ಮಣಿಪುರ ಮತ್ತು ಹಿಂದಿ ಮಾತನಾಡುವ ಹಲವು ರಾಜ್ಯಗಳಲ್ಲಿ ಆಯಾ ಭಾಷೆಗಳನ್ನು ಕಲಿತರೆ ಮಾತ್ರ ಜೀವನ ಸುಲಭ. ಆದರೆ ಕನ್ನಡಿಗರ ಅತಿ ಔದಾರ್ಯ ಮತ್ತು ಅಭಿಮಾನ ಶೂನ್ಯತೆ, ಇಂದು ಕನ್ನಡಕ್ಕೇ ಸಂಚಕಾರ ತರುತ್ತಿದೆ. ಅಲ್ಲದೇ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದನ್ನು ಕಡ್ಡಾಯ ಮಾಡದಿದ್ದರೆ, ಕನ್ನಡ ಬರದ ಮಕ್ಕಳು, ಮುಂದಿನ ಪೀಳಿಗೆ, ಏನು ತಾನೆ ಕನ್ನಡದಲ್ಲಿ ಆಡಳಿತ ನಡೆಸಿಯಾರು? ಮೂಲ ಸಮಸ್ಯೆ ಇರುವುದೇ ಅಲ್ಲಿ. ಶಾಲೆಯಲ್ಲಿ ಕನ್ನಡ ಕಡ್ಡಾಯವಾದರೆ ಮಾತ್ರ ಆಡಳಿತದಲ್ಲಿ ಕನ್ನಡವನ್ನು ಸುಲಭವಾಗಿ ಅನಾಯಾಸವಾಗಿ ಜಾರಿ ಮಾಡಬಹುದು. ಇದೆಲ್ಲಾ ಯಾವಾಗ ಆಗುತ್ತದೆ ಎಂಬ ಯಕ್ಷಪ್ರಶ್ನೆಗೆ ಕಾಲವೇ ಉತ್ತರ ನೀಡಬೇಕು.

ಮಕ್ಕಳ ಚಿತ್ರಕಥೆ

ಮನುಷ್ಯರ ಸ್ವಭಾವವೇ ಹೀಗೆ...!

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಅದೊಂದು ನದಿ ಪಾತ್ರ. ಆ ನದಿಯಲ್ಲಿ ಮೀನೊಂದು ವಾಸಿಸುತಿತ್ತು. ನದಿಯ ಪಕ್ಕದಲ್ಲಿದ್ದ ಮರದಲ್ಲಿ ನವಿಲೊಂದು ಮನೆಮಾಡಿತ್ತು. ಅವೆರಡರ ನಡುವೆ ಹೇಗೋ ಎಂತೋ ಬಹಳ ಗೆಳೆತನವಾಯಿತು. ಗೆಳೆತನ ಬೆಳೆಯುತ್ತಾ ಹೋದಂತೆ ಒಬ್ಬರಿಗೊಬ್ಬರು ಜೀವ ಬಿಡಲೂ ಸಿದ್ಧ ಎಂಬಷ್ಟು ಆತ್ಮೀಯವಾದವು. ಹೀಗಿರುವಾಗ ಒಮ್ಮೆ ಬೇಟೆಗಾರರ ತಂಡವೊಂದು ಅಲ್ಲಿಗೆ ಬಂದಿತು. ಮರದ ಮೇಲೆ ಕುಳಿತು ನೀರಿನಲ್ಲಿದ್ದ ಮೀನಿನೊಂದಿಗೆ ಹರಟುತ್ತಿದ್ದ ನವಿಲನ್ನು ಆ ತಂಡದ ಒಬ್ಬ ಆಸಾಮಿ ನೋಡಿಬಿಟ್ಟ. ಅದನ್ನು ಹಿಡಿದು ಕೈಕಾಲು ಕಟ್ಟಿ, ಒಯ್ಯಲು ಅನುವಾದ.




ಮೀನು, ನೀರಿನಿಂದ ಇದನ್ನೆಲ್ಲಾ ನೋಡಿಬಿಟ್ಟಿತು. ಮೆಲ್ಲಗೆ ತಲೆ ಹೊರಗೆ ಹಾಕಿ "ಅಣ್ಣಾ.. ಬೇಟೆಗಾರನೇ.... ಇದುವರೆಗೂ ಯಾರೂ ಕಂಡಿರದ ಅಮೂಲ್ಯವಾದ ಮುತ್ತನ್ನು ನಾನು ತಂದುಕೊಡುತ್ತೇನೆ. ನನ್ನ ಗೆಳೆಯನನ್ನು ಬಿಟ್ಟುಬಿಡು...!" ಎಂದಿತು. ಬೇಟೆಗಾರ ಒಪ್ಪಿದ. ಮೀನು ನೀರಿನಾಳಕ್ಕೆ ಹೋಗಿ ಒಂದು ಮುತ್ತನ್ನು ಕಚ್ಚಿ ತಂದು ಅವನಿಗೆ ಕೊಟ್ಟಿತು.




ಬೇಟೆಗಾರ ಮುತ್ತನ್ನು ನೋಡಿದವನೇ ಕಣ್ಣರಳಿಸಿದ. ಇಂಥ ಮುತ್ತನ್ನು ಅವನೆಂದೂ ಕಂಡಿರಲಿಲ್ಲ. ಅದರ ಬೆಲೆ ಅಂದಾಜಿಸಿದ. ಅದೇ ಗುಂಗಿನಲ್ಲಿ ನವಿಲನ್ನು ಬಿಡುಗಡೆಗೊಳಿಸಿದ. ನವಿಲು ಮತ್ತೆ ಮೇಲಕ್ಕೆ ಹಾರಿತು.



ಮರುದಿನ ಬೇಟೆಗಾರ ಪುನಃ ಬಂದ. ಅವನ ಕಣ್ಣುಗಳಲ್ಲಿ ದುರಾಸೆ ಕುಣಿಯುತ್ತಿತ್ತು. ಮೀನಿಗೆ ಕೂಡಲೆ ಗೊತ್ತಾಯಿತು. ಮೀನನ್ನು ನೋಡಿದವನೇ "ಒಂಟಿ ಮುತ್ತಿಗೆ ಅಷ್ಟೇನೂ ಬೆಲೆ ಇಲ್ಲವಂತೆ ಜೋಡಿಗೆ ಬೆಲೆ..... ಎಂದು ಅಕ್ಕಸಾಲಿಗ ಹೇಳಿದ. ಹಾಗಾಗಿ ನೀನು ಇಂಥದೇ ಇನ್ನೊಂದು ಮುತ್ತು ತಂದುಕೊಟ್ಟರೆ..... ನಿನ್ನ ಗೆಳೆಯನ ತಂಟೆಗೆ ನಾನು ಇನ್ನೆಂದೂ ಬರುವುದಿಲ್ಲ... ಎಂದು ಮಾತು ಕೊಡುತ್ತೇನೆ...!" ಎಂದ.



ಆ ಜಾಣ ಮೀನು, ತಕ್ಷಣವೇ ಅಂಥದೇ ಇನ್ನೊಂದು ಮುತ್ತು ಹುಡುಕಬೇಕಾದರೆ ನಿನ್ನ ಕೈಲಿರುವುದನ್ನು ಕೊಡಬೇಕು... ನಾನು ಅಂಥದ್ದೇ ಮುತ್ತನ್ನು ಹುಡುಕಿ ತರುತ್ತೇನೆ...!" ಎಂದು ಹೇಳಿ ಬಂಡೆಯ ಮೇಲೆ ಮುತ್ತನ್ನು ಇಡಲು ಹೇಳಿತು. ಬೇಟೆಗಾರ ಹಾಗೆಯೇ ಮಾಡಿದ. ಮೀನು ಹಾರಿ ಮುತ್ತನ್ನು ಕಚ್ಚಿಕೊಂಡು ನೀರಿನೊಳಗೆ ಇಳಿಯಿತು.



ಅಲ್ಲಿಂದಲೇ ತಲೆಯೆತ್ತಿ "ಬೇಟೆಗಾರನೇ, ನನ್ನ ಗೆಳೆಯ...ನಿನ್ನ ಕೈಗೆಟುಕದಷ್ಟು ದೂರಕ್ಕೆ ನಿನ್ನೆಯೇ ಹೊರಟುಹೋಗಿದ್ದಾನೆ. ನೀನು ಮರಳಿ ಬಂದೇ ಬರುತ್ತೀಯಾ ಎಂದು ನಮಗೆ ತಿಳಿದಿತ್ತು. ನೀವು ಮನುಷ್ಯರ ಸ್ವಭಾವವೇ ಹೀಗೆ...ಬೇಕುಗಳ ಸಂತೆಯಲ್ಲಿ ಕಳೆದುಹೋಗುತ್ತೀರಿ. ಆದ್ದರಿಂದಲೇ ನೀವು ದುಃಖಿಗಳು. ತೃಪ್ತಿಯೇ ಸುಖದ ಮೊದಲ ಹೆಜ್ಜೆ. ಆದರೆ ನಿಮಗದರ ಅರಿವು ಇಲ್ಲವೇ ಇಲ್ಲ. ಅತಿಯಾಸೆಯಿಂದ ನಿನಗೆ ಸಿಕ್ಕಿದನ್ನೂ ಕಳೆದುಕೊಂಡೆ... ಹೋಗು ಹೊರಟುಹೋಗು...!" ಎನ್ನುತ್ತಾ ನೀರಿನಲ್ಲಿ ಮುಳುಗಿ ಮಾಯವಾಯಿತು.



ವಾರಭವಿಷ್ಯ

26.11.2023 ರಿಂದ 2.12.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ಮೇಷ, ವೃಷಭ, ಮಿಥುನ, ಕಟಕ, ಕುಜ–ವೃಶ್ಚಿಕ, ಬುಧ–ಧನುಸ್ಸು, ಗುರು, ಮೇಷ, ಶುಕ್ರ–ಕನ್ಯಾ, ತುಲಾ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720


ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಮನೆಯಲ್ಲಿ ಹರುಷ ಉಲ್ಲಾಸಗಳ ವಾತಾವರಣ. ಇಷ್ಟ ಬಂಧು–ಮಿತ್ರರ ಸಮಾಗಮ. ರಜತ, ತಾಮ್ರ, ಎಲೆಕ್ಟ್ರಿಕಲ್ ವಸ್ತು ವ್ಯಾಪಾರಿಗಳಿಗೆ ಹೇರಳ ಧನಲಾಭ. ಉನ್ನತ ಶಿಕ್ಷಣಾರ್ಥಿಗಳಿಗೆ ಉತ್ತಮ ಶ್ರೇಣಿಯಲ್ಲಿ ಸಫಲತೆ. ಮಾತೃಶ್ರೀಯವರ ಆಶೀರ್ವಾದದಿಂದ ಮನೆ ಕಟ್ಟಡ ಕೆಲಸ ಸುಖಾಂತ್ಯವಾಗುವುದು. ನೆರೆಹೊರೆಯಲ್ಲಿ ನಿಷ್ಠುರಕ್ಕೆ ಕಾರಣವಾಗುವಂತಹ ಮಾತನ್ನು ಆಡಬೇಡಿ.

ಶ್ರೀ ನೃಸಿಂಹಸ್ವಾಮಿ ಉಪಾಸನೆ. ಶುಭ ಸಂಖ್ಯೆ–1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹಣಕಾಸಿನ ಪರಿಸ್ಥಿತಿಯು ಸ್ವಲ್ಪ ನಿರಾಶಾದಾಯಕವಾಗಿದ್ದರೂ ನಿಧಾನವಾಗಿ ಸುಧಾರಿಸುತ್ತದೆ. ಉಚ್ಚ ಚಂದ್ರನ ಸಂಚಾರ ನಿಮ್ಮ ಪಾಲಿಗೆ ವರದಾನವಾದೀತು. ವ್ಯಾಪಾರ ವ್ಯವಹಾರಗಳು ಲಾಭದಾಯಕವಾಗಿ ಸಾಗುವುದು. ದೂರ ಪ್ರಯಾಣಗಳನ್ನು ಮುಂದೂಡುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ನೀಡಿ ಹಾಗೂ ಅವರ ಚಲನ–ವಲನದ ಮೇಲೆ ನಿಗಾ ಇಡಿ.

ಶ್ರೀದೇವೀ ಸ್ತುತಿ. ಶುಭ ಸಂಖ್ಯೆ–6.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಈ ವಾರ ದೈವಿಕ ಸೇವಾ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೆಚ್ಚಾಗುವುದು. ಬಂಧು ಮಿತ್ರರ ಆಗಮನ ಸಂತಸ ತರುತ್ತದೆ. ವೃತ್ತಿಪರ ಉದ್ಯೋಗಗಳಲ್ಲಿ ಅನುಕೂಲತೆ ಉಂಟಾಗುತ್ತದೆ. ಹೊಸ ಆದಾಯ ಮಾರ್ಗಗಳು ಹೆಚ್ಚಾಗುತ್ತದೆ. ಕುಟುಂಬ ಸದಸ್ಯರ ಆರೋಗ್ಯದ ಬಗ್ಗೆ ವೈದ್ಯಕೀಯ ಸಮಾಲೋಚನೆಯ ಅಗತ್ಯವಿದೆ. ಸಮಯ ಪ್ರಜ್ಞೆಯಿಂದ ಕೆಲವು ದೀರ್ಘಕಾಲದ ವಿವಾದಗಳು ಪರಿಹಾರದತ್ತ ಸಾಗುತ್ತವೆ.

ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶ್ಯಾಧಿಪತಿಯ ಅನುಗ್ರಹದಿಂದ ಹಾಗೂ ಜಾಣತನದಿಂದ ಶತ್ರು ಸಮಸ್ಯೆಗಳಿಂದ ಮುಕ್ತಿ ದೊರೆಯುತ್ತದೆ. ಬರಬೇಕಾದ ಹಣ ಸಕಾಲದಲ್ಲಿ ವಸೂಲಿಯಾಗುತ್ತದೆ. ಹೋಟೆಲ್, ಟ್ರಾವೆಲ್ ಏಜೆನ್ಸಿಯವರಿಗೆ ಕೈತುಂಬಾ ಕೆಲಸ ಹಾಗೂ ಧನ ಸಂಪಾದನೆ. ಸರ್ಕಾರಿ ಅಧಿಕಾರಿಗಳೊಂದಿಗೆ ಜಟಾಪಟಿ ಉಂಟಾಗಬಹುದು. ಮಕ್ಕಳ ಶೈಕ್ಷಣಿಕ ಪ್ರಗತಿ ಚುರುಕಾಗಿರುತ್ತದೆ. ಆತುರದ ಡ್ರೈವಿಂಗ್ ಮುಳುವಾಗಬಹುದು.

ಶ್ರೀ ಆಂಜನೇಯ ಪೂಜೆ, ಶುಭ ಸಂಖ್ಯೆ–8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಬಂಧುಗಳು ಮತ್ತು ಗುರು ಜನರಿಂದ ನಿರ್ಣಾಯಕ ಸಮಯದಲ್ಲಿ ಸಹಾಯ ಮತ್ತು ಬೆಂಬಲ ದೊರೆಯುತ್ತದೆ. ಸಮಾಜ ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಜನಪ್ರಿಯರಾಗುವಿರಿ. ವೃತ್ತಿಪರ ವ್ಯವಹಾರಗಳಲ್ಲಿ ಒಳ್ಳೆಯ ಪ್ರಗತಿ ಹಾಗೂ ಧನಾದಾಯ ಉಂಟಾಗುವುದು. ಬಾಲ್ಯದ ಸ್ನೇಹಿತರೊಂದಿಗೆ ಭೋಜನ, ಮನೋರಂಜನೆ ಮನಸ್ಸಿಗೆ ಮುದ ನೀಡುವುದು. ಆರೋಗ್ಯದಲ್ಲಿ ವ್ಯತ್ಯಯವಾದೀತು.

ಶ್ರೀಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಣ್ಣ ಕೈಗಾರಿಕೆ ಸಂಸ್ಥೆಗಳಿಗೆ ಹೊಸ ಆರ್ಡರ್ ದೊರೆಯುವುದು. ಜೊತೆಗೆ ಹಿರಿಯರ ಸಲಹೆ ಪಡೆದು ಮುನ್ನಡೆಯುವುದು ಉತ್ತಮ. ಐಟಿಬಿಟಿ ಉದ್ಯೋಗಿಗಳಿಗೆ ಹೆಚ್ಚುವರಿ ಕೆಲಸದ ಹೊರೆಯಿಂದಾಗಿ ಸಮಯಕ್ಕೆ ಸರಿಯಾಗಿ ಆಹಾರ–ನಿದ್ರೆಗಳಿರುವುದಿಲ್ಲ. ವಾರದ ಉತ್ತರಾರ್ಧಕ್ಕೆ ಮನೆಯ ವಾತಾವರಣ ಸಂಭ್ರಮದಿಂದ ಕೂಡಿರುತ್ತದೆ. ಬೆಲೆ ಬಾಳುವ ಗೃಹೋಪಯೋಗಿ ವಸ್ತುಗಳನ್ನು ಖರೀದಿಸುವಿರಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಕೈಗೆತ್ತಿಕೊಂಡ ಕೆಲಸಗಳು ಸಕಾಲದಲ್ಲಿ ಪೂರ್ಣಗೊಳ್ಳುತ್ತವೆ. ಹೊಸ ವಸ್ತ್ರಾಭರಣಗಳನ್ನು ಖರೀದಿಸುವಿರಿ. ಮನೆಯ ಹೊರಗೆ ನಿಮ್ಮ ಮಾತಿಗೆ ಮೌಲ್ಯ ದೊರೆಯುತ್ತದೆ. ದೀರ್ಘ ಕಾಲದ ಆರೋಗ್ಯ ಸಮಸ್ಯೆಗಳಿಂದ ಪರಿಹಾರ ದೊರಕುತ್ತದೆ. ನಿಮಗಾಗದವರು ಸ್ನೇಹ ಬಯಸಿ ಬಂದರೆ ತಿರಸ್ಕರಿಸದಿರಿ. ನಿರುದ್ಯೋಗಿಗಳ ಪ್ರಯತ್ನಗಳು ಫಲ ನೀಡುತ್ತದೆ. ನರ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ದುರ್ಗಾ ಪರಮೇಶ್ವರಿ ಆರಾಧನೆ, ಶುಭ ಸಂಖ್ಯೆ–5.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದ ಆದಿಗೆ ಪ್ರಮುಖ ವಿಷಯಗಳಲ್ಲಿ ನಿಮ್ಮ ಶತ್ರುಗಳ ಮೇಲೆ ಯಶಸ್ಸು ಸಾಧಿಸುತ್ತೀರಿ. ಭೂಮಿಗೆ ಸಂಬಂಧಿಸಿದ ಖರೀದಿಗಳು ಅನುಕೂಲಕರವಾಗಿರುತ್ತವೆ. ಸಮಾಜದಲ್ಲಿ ಪ್ರಸಿದ್ಧ ವ್ಯಕ್ತಿಗಳ ಸಂಪರ್ಕದಿಂದ ನಿಮಗೆ ಹೆಚ್ಚಿನ ಪ್ರಯೋಜನವಾಗಲಿದೆ. ಮರಮುಟ್ಟು, ಫರ್ನಿಚರ್ ವ್ಯಾಪಾರಸ್ಥರಿಗೆ ಉತ್ತಮ ವ್ಯಾಪಾರ ಹಾಗೂ ಆದಾಯವಾಗುವುದು. ಕುಟುಂಬ ಸದಸ್ಯರೊಂದಿಗೆ ಸಣ್ಣಪುಟ್ಟ ವಿವಾದಗಳು ಉಂಟಾಗಬಹುದು.

ಶ್ರೀ ಗಣಪತಿ ಅರ್ಚನೆ. ಶುಭ ಸಂಖ್ಯೆ–2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಿಮ್ಮ ರಾಶ್ಯಾಧಿಪತಿ ವಿದ್ಯಾನಿಧಿಯಾದ ಗುರುವು ನಿಮ್ಮ ಮಹತ್ವಾಕಾಂಕ್ಷೆಯ ಯೋಜನೆಗಳಿಗೆ ವಿದ್ಯೆಯಲ್ಲಿ ಉನ್ನತ ಸಾಧನೆಗೈಯಲು ಬೆಂಗಾವಲಾಗಿ ನಿಂತಿದ್ದಾರೆ. ವ್ಯಾಪಾರ ವ್ಯವಹಾರಗಳು ಲಾಭಾಂಶದಲ್ಲಿ ನಡೆಯುವುದು. ಸಾಲ ತೀರುವಳಿಯಾಗಿ ಮನಸ್ಸಿನ ಭಾರ ಕಳೆಯುವುದು. ಸರ್ಕಾರಿ ಕಚೇರಿ ಸಂಬಂಧಿತ ಕೆಲಸಗಳು ವಿಳಂಬ ಗತಿಯಲ್ಲಿ ಸಾಗುವುದು. ಮಾತೃಶ್ರೀಯವರ ಆರೋಗ್ಯದ ಕಡೆ ಲಕ್ಷ್ಯ ನೀಡಿ.

ಶ್ರೀರಾಘವೇಂದ್ರಸ್ವಾಮಿ ದರ್ಶನ. ಶುಭ ಸಂಖ್ಯೆ–7.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

'ಬಿತ್ತಿದ್ದನ್ನು ಬೆಳೆದುಕೊ' ಎಂಬ ನಾಣ್ಣುಡಿ ಇದೆ. ಹಣಕಾಸಿನ ಪರಿಸ್ಥಿತಿ ಸುಧಾರಿಸಿದರೂ ನಿರೀಕ್ಷೆ ಮೀರಿದ ಖರ್ಚುಗಳೂ, ಸಾಲಗಾರರ ಒತ್ತಡವೂ ನಿಮ್ಮನ್ನು ಕಂಗಾಲು ಮಾಡುತ್ತದೆ. ವಿದ್ಯಾರ್ಜನೆ ವಿಷಯಗಳು ಆಸಕ್ತಿಹೀನವಾಗುತ್ತವೆ. ವಿದ್ಯಾರ್ಥಿಗಳು ತಮ್ಮ ತಪ್ಪನ್ನು ಅವಲೋಕಿಸಿಕೊಳ್ಳುವ ಸಮಯ. ಸರ್ಕಾರಿ ನೌಕರರಿಗೆ ಬೇಡದ ವರ್ಗಾವಣೆಯಿಂದ ಮಾನಸಿಕ ಕಿರಿಕಿರಿ ಉಂಟಾಗುವುದು. ವಾರಾಂತ್ಯಕ್ಕೆ ಕುಟುಂಬ ಸಮೇತ ಮನೆದೇವರ ದರ್ಶನ ಅಗತ್ಯ ಮಾಡಿ. ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಹಣಕಾಸಿನ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತದೆ. ಪ್ರಿಯ ಜನರ ಭೇಟಿ ಮನಸ್ಸಿಗೆ ಮುದ ನೀಡುವುದು. ಹೊಸ ಮಿಷನರಿ ಸಾಮಾನು ಮನೆಗೆ ಬರುತ್ತದೆ. ಕೈಗೊಂಡ ಕೆಲಸ ಕಾರ್ಯಗಳಲ್ಲಿ ಅಡೆತಡೆಗಳು ಎದುರಾಗುತ್ತದೆ. ಆಸ್ತಿ ವಿವಾದಗಳು ಕಿರಿಕಿರಿ ಉಂಟು ಮಾಡುತ್ತದೆ. ವ್ಯಾಪಾರ, ವ್ಯವಹಾರಗಳಲ್ಲಿ ಎಷ್ಟೇ ಕಷ್ಟ ಪಟ್ಟು ಕೆಲಸ ಮಾಡಿದರೂ ಪ್ರಯೋಜನವಿಲ್ಲ.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ–5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಹೊಸ ವ್ಯಾಪಾರ, ವ್ಯವಹಾರಗಳು ಹುಡುಕಿಕೊಂಡು ಬರಲಿವೆ. ಪುಣ್ಯ ಕಾರ್ಯವನ್ನು ಎಸಗಿ ಜನಾದರಕ್ಕೆ ಭಾಜನರಾಗುವಿರಿ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಸಿಹಿ ಸುದ್ದಿ ಬರಲಿದೆ. ರಾಹು–ಕೇತು ಪ್ರಭಾವದಿಂದಾಗಿ ಸ್ತ್ರೀಯಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ. ವ್ಯಯಸ್ಥಾನದಲ್ಲಿ ಶನಿದೇವನಿದ್ದು ಕುಕೃತ್ಯಗಳಿಗೆ ಪ್ರೇರಣೆಯಾಗುವುದು. ಸಟ್ಟಾ–ಜೂಜುಗಳಿಂದ ನಷ್ಟವೇ ಜಾಸ್ತಿ.

ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ–4.

ಹುಲಿ ದಾಳಿ: ರತ್ನಮ್ಮ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರ

● ಶಾಸಕ ದರ್ಶನ್ ಸಮ್ಮುಖದಲ್ಲಿ ಚೆಕ್ ನೀಡಿದ ಅರಣ್ಯಾಧಿಕಾರಿ ● ಕುಟುಂಬಕ್ಕೆ ಸಾಂತ್ವನ ಹೇಳಿದ ಶಾಸಕರು, ಅರಣ್ಯಾಧಿಕಾರಿ ● ಅರಣ್ಯ ಇಲಾಖೆ ಅಧಿಕಾರಿಗಳ ಕಿತ್ತಾಟದಿಂದ ಮಹಿಳೆ ಸಾವು ● ತಕ್ಷಣದಿಂದ ಹುಲಿ ಸೆರೆಗೆ ಕಾರ್ಯಾಚರಣೆ ಆರಂಭ

ಮಲ್ಕುಂಡಿ, ನ.25– ಹುಲಿ ದಾಳಿಯಿಂದ ಸಾವನ್ನಪ್ಪಿದ ಬೆಳ್ಳೂರು ಹುಂಡಿ ನಿವಾಸಿ ರತ್ನಮ್ಮ ಅವರ ನಿವಾಸಕ್ಕೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಶಾಸಕ ದರ್ಶನ್ ಧ್ರುವನಾರಾಯಣ್ ಭೇಟಿ ನೀಡಿ ಸಾಂತ್ವನ ಹೇಳಿದರು.

ಶುಕ್ರವಾರ ಮಧ್ಯಾಹ್ನ ಬಳ್ಳೂರು ಹುಂಡಿ ಗ್ರಾಮದ ಹೊರ ವಲಯದಲ್ಲಿ ದನ ಮೇಯಿಸುತ್ತಿದ್ದ ಸಂದರ್ಭದಲ್ಲಿ ಹುಲಿ ದಾಳಿಗೆ ತುತ್ತಾದ ರತ್ನಮ್ಮ ಅವರ ನಿವಾಸಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್ ಹಾಗೂ ಅರಣ್ಯ ಇಲಾಖೆಯ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಮೇಶ್ ಕುಮಾರ್ ಪುಷ್ಕರ್ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಪರಿಹಾರದ ಚೆಕ್ ಅನ್ನು ರತ್ನಮ್ಮ ಅವರ ಪುತ್ರರಿಗೆ ನೀಡಿದರು.



ಎಸಿಎಫ್ ಮತ್ತು ಆರ್‌ಎಫ್‌ಓ ಅವರನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಬೇಕು ಎಂದು ಪಟ್ಟು ಹಿಡಿದ ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಶಾಸಕರು ಈ ವಿಚಾರವಾಗಿ ಅರಣ್ಯ ಸಚಿವರ ಜೊತೆ ಚರ್ಚಿಸುವುದಾಗಿ ಭರವಸೆ ನೀಡುವ ಮೂಲಕ ಮುನಿದಿದ್ದ ಗ್ರಾಮಸ್ಥರ ಮನವೊಲಿಸಿದರು.

ನಂತರ ಮಾತನಾಡಿದ ಶಾಸಕರು ಅರಣ್ಯ ಇಲಾಖೆಯ ಅಧಿಕಾರಿಗಳ ಕಾರ್ಯ ವೈಖರಿಯಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಇವರ ಕಿತ್ತಾಟದಿಂದ ಒಬ್ಬರನ್ನು ನಾವು ಕಳೆದುಕೊಂಡಿದ್ದೇವೆ. ನಾನು ಹಲವು ಬಾರಿ ಸೂಚನೆ ನೀಡಿದರೂ ಅರಣ್ಯಾಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಓಂಕಾರ್ ವಲಯ ಮತ್ತು ಯಡಿಯಾಲ ವಲಯದ ಅಧಿಕಾರಿಗಳ ಕಿತ್ತಾಟದಿಂದ ಮುಗ್ಧ ಜೀವ ಬಲಿಯಾಗಿದೆ. ಈ ಎರಡು ವಲಯದ ಅರಣ್ಯಾಧಿಕಾರಿಗಳು ತಮ್ಮ ಕೆಲಸದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ರೈಲ್ವೆ ಬ್ಯಾರಿಕೇಡ್ ಹಾಕಲು ಕಚ್ಚಾ ವಸ್ತುಗಳಿದ್ದರೂ ಸಹ ಇವರು ಕೆಲಸವನ್ನು ಮಾಡುತ್ತಿಲ್ಲ. ಇದರ ಬಗ್ಗೆ ನಾನು ಮುಂದಿನ ದಿನಗಳಲ್ಲಿ ಅರಣ್ಯ ಸಚಿವರ ಜೊತೆ ಮಾತನಾಡುತ್ತೇನೆ ಎಂದರು.

ಬಳ್ಳೂರು ಹುಂಡಿ ಗ್ರಾಮದಲ್ಲಿ ಅರಣ್ಯ ಇಲಾಖೆಯ ಕ್ವಾಟ್ರಸ್ ಇದ್ದರೂ ಸಹ ಇಲ್ಲಿ ಸಿಬ್ಬಂದಿಗಳಿಲ್ಲ. ಕೂಡಲೇ ಸಿಬ್ಬಂದಿಯನ್ನು ನೇಮಿಸಬೇಕು ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಆದಷ್ಟು ಬೇಗ ಹುಲಿ ಹಿಡಿಯುವ ಪ್ರಯತ್ನ ನಡೆಯಬೇಕು. ಇಲ್ಲದಿದ್ದರೆ ಮುಂದಿನ ಕ್ರಮ ನಾನು ತೆಗೆದುಕೊಳ್ಳುತ್ತೇನೆ ಎಂದು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಈ ವೇಳೆ ಮಾತನಾಡಿದ ರಮೇಶ್ ಕುಮಾರ್ ಪುಷ್ಕರ್ ಹುಲಿ ದಾಳಿಗೆ ರತ್ನಮ್ಮ ಬಲಿಯಾಗಿರುವುದು ನಿಜಕ್ಕೂ ನೋವಿನ ಸಂಗತಿ. ಇಂತಹ ಘಟನೆ ನಡೆಯಬಾರದಿತ್ತು. ಇದಕ್ಕೆ ಪರಿಹಾರವಾಗಿ ಮೃತರ ಕುಟುಂಬಕ್ಕೆ 15 ಲಕ್ಷ ರೂ.ಗಳು ಹಾಗೂ ತಿಂಗಳಿಗೆ 4000 ಮಾಶಾಸನ ಮತ್ತು ಗುತ್ತಿಗೆ ಆಧಾರದ ಮೇಲೆ ಕುಟುಂಬಸ್ಥರಲ್ಲಿ ಒಬ್ಬರಿಗೆ ನೌಕರಿ ನೀಡಲಾಗುವುದು. ರಾತ್ರಿ ವೇಳೆ ಗಸ್ತನ್ನು ಹೆಚ್ಚಿಸಲಾಗುವುದು. ಹುಲಿ ಸೆರೆ ಹಿಡಿಯುವ ಕಾರ್ಯಾಚರಣೆಗೆ 200 ಮಂದಿ ಹಾಗೂ ನಾಲ್ಕು ಸಾಕು ಆನೆಗಳನ್ನು ಬಳಸಿಕೊಳ್ಳಲಾಗಿದ್ದು, ಇಂದಿನಿಂದಲೇ ಕಾರ್ಯಾಚರಣೆ ಆರಂಭವಾಗಿದೆ ಎಂದರು.

ಮುಖ್ಯವಾಗಿ ಯಡಿಯಾಲ ವಲಯ ದಿಂದ ಓಂಕಾರ್ ವಲಯದವರೆಗೆ ಕಾಡಂಚಿನ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ದಾರಿಗಳಲ್ಲೂ ರೈಲ್ವೆ ಬ್ಯಾರಿಕೇಡ್‌ನಿಂದ ಮುಚ್ಚಲಾಗುವುದು. ಇಂತಹ ಘಟನೆ ನಡೆದಾಗ ನಮ್ಮ ಇಲಾಖೆಯ ಅಧಿಕಾರಿ ಮೇಲೆ ದಾಳಿ ಮಾಡುವುದು ಒಳ್ಳೆಯದಲ್ಲ ಎಂದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳಾದ ಮಾಲತಿ, ರಮೇಶ, ಪರಮೇಶ್, ಯಡಿಯಾಲ ಆರ್.ಎಫ್ ನಾರಾಯಣ್ ಕೆ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಇದ್ದರು.

ಶಿವಪಾರ್ವತಿ ಜ್ಞಾನ ವಿಕಾಸ ಕೇಂದ್ರ ಉದ್ಘಾಟನೆ

ಹುಣಸೂರು, ನ.25– ಜ್ಞಾನ ವಿಕಾಸ ಕೇಂದ್ರಗಳಲ್ಲಿ ಕುಟುಂಬ ನಿರ್ವಹಣೆ, ಆರೋಗ್ಯ ಮತ್ತು ಕಾನೂನಿನ ಅರಿವು ನೀಡಲಾಗುತ್ತಿದೆ ಎಂದು ತಾಪಂ ಮಾಜಿ ಸದಸ್ಯೆ ರೂಪಾ ನಂದೀಶ್ ತಿಳಿಸಿದರು.

ಹನಗೋಡು ಹೋಬಳಿ ಬಿ.ಆರ್. ಕಾವಲು ಗ್ರಾಮದಲ್ಲಿ ಶಿವಪಾರ್ವತಿ ಜ್ಞಾನ ವಿಕಾಸ ಕೇಂದ್ರ ಉದ್ಘಾಟಿಸಿ ಮಾತನಾಡಿ, ಸಾಕ್ಷರತೆ ಪ್ರಮಾಣ ಹೆಚ್ಚಿಸುವುದರಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಲವು ಪ್ರಯೋಜಗಳನ್ನು ಪಡೆದುಕೊಂಡು ಸ್ವಾವಲಂಬನೆ ಜೀವನ ನಡೆಸಲು ಸಹಕಾರಿ ಆಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಕಡೆಮನುಗನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕಾಳೇಗೌಡ ವಹಿಸಿದ್ದರು. ತಾಲೂಕು ಯೋಜನಾಧಿಕಾರಿ ನಾರಾಯಣ ಶೆಟ್ಟಿ ಜನಜಾಗೃತಿ ಸಮಿತಿ ಸದಸ್ಯ ದಾ.ರಾ. ಮಹೇಶ್, ಶಾಲೆಯ ಶಿಕ್ಷಕ ಪ್ರವೀಣ್, ಯೋಜನೆಯ ಮೇಲ್ವಿಚಾರಕಿ ಸುನಂದ ಹಾಗೂ ಇತರರು ಹಾಜರಿದ್ದರು

ರಾಮಾಯಣದಿಂದ ಆಧುನಿಕ ಭವ್ಯ ಭಾರತ ನಿರ್ಮಾಣ ಸಾಧ್ಯ

ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹರ್ಷವರ್ಧನ್ ಅಭಿಪ್ರಾಯ

ನಂಜನಗೂಡು, ನ.25– ಮಹರ್ಷಿ ವಾಲ್ಮೀಕಿ ಅವರು ರಚಿಸಿರುವ ರಾಮಾಯಣ ಸಾಮಾಜಿಕ ಕಳಕಳಿಯಿಂದ ಕೂಡಿದ್ದು, ಆಧುನಿಕ ಭವ್ಯ ಭಾರತ ನಿರ್ಮಾಣಕ್ಕೆ ಬುನಾದಿಯಾಗಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಅಭಿಪ್ರಾಯಪಟ್ಟಿದ್ದಾರೆ.



ತಾಲೂಕಿನ ಹರತಲೆ ಗ್ರಾಮದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಾಭಾರತ ಕೃತಿ ಹೆಚ್ಚು ರಾಜಕೀಯದಿಂದ ಕೂಡಿದೆ. ರಾಮಾಯಣ ಕೃತಿಯಲ್ಲಿ ಹೆಚ್ಚು ರಾಜಕೀಯವಿಲ್ಲ, ಸಾಮಾಜಿಕ ಕಳಕಳಿಯಿಂದ ಕೂಡಿದ್ದು ಸಮಾಜ ಹೇಗಿರಬೇಕು ಎಂಬ ಸಂದೇಶವನ್ನು ಸಾರುತ್ತದೆ. ಒಂದು ಸಂಸಾರ ರಾಮ, ಸೀತೆಯ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಜೊತೆಗೆ ಹನುಮಂತನಂತಹ ಸ್ವಾಮಿ ನಿಷ್ಠೆ, ಲಕ್ಷ್ಮಣನಂತಹ ಭ್ರಾತೃತ್ವವನ್ನು ಅನುಸರಿಸಿ ನಡೆದರೆ ಉತ್ತಮ ಸಮಾಜ ನಿರ್ಮಾಣವಾಗಲಿದೆ ಎಂದರು.

ರಾಮರಾಜ್ಯ ನಿರ್ಮಿಸುವ ಸಲುವಾಗಿ ಶ್ರಮಿಸುತ್ತಿರುವ ನಮ್ಮ ಹೆಮ್ಮೆಯ ಪ್ರಧಾನಿ ಮೋದಿ ಅವರು ರಾಮಜನ್ಮ ಭೂಮಿಯಲ್ಲಿ ರಾಮಮಂದಿರ ನಿರ್ಮಿಸಿ ಮಹರ್ಷಿ ವಾಲ್ಮೀಕಿ ಅವರಿಗೆ ಹೆಮ್ಮೆ ತಂದಿದ್ದಾರೆ. ಮಹರ್ಷಿ ವಾಲ್ಮೀಕಿ ಅವರ ಜಯಂತೋತ್ಸವನ್ನು ಹರತಲೆ ಗ್ರಾಮಸ್ಥರು ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಸಂತಸ ತಂದಿದೆ ಎಂದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿ ಸಾಮಾಜಿಕ ಬದಲಾವಣೆಗಾಗಿ ಶ್ರಮಿಸಿದಂತಹ ಬುದ್ಧ, ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್, ಭಗೀರಥ, ಭಕ್ತಕನಕದಾಸರಂತಹ ಸಂತರನ್ನು ಯಾವುದೇ ಒಂದೇ ಜಾತಿಗೆ ಸೀಮಿತಗೊಳಿಸಬಾರದು. ಅವರು ಸಮಾಜದ ಆಸ್ತಿಯಾಗಿದ್ದಾರೆ. ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ, ಯಾರೂ ಕನಿಷ್ಠರಲ್ಲ, ಪ್ರಯತ್ನವಿದ್ದಲ್ಲಿ ಏನನ್ನಾದರೂ ಸಾಧಿಸಬಹುದು ಎಂಬುದನ್ನು ಮಹರ್ಷಿ ವಾಲ್ಮೀಕಿರವರು ರಾಮಾಯಣ ಕೃತಿ ರಚನೆಯ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿಯನ್ನು ವಿಶೇಷ ಸಾರೋಟ್‌ನಲ್ಲಿ ಮೆರವಣಿಗೆ ಮಾಡಲಾಯಿತು. ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಸಮಾರಂಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಹೊರಳವಾಡಿ, ತಾಪಂ ಮಾಜಿ ಸದಸ್ಯರಾದ ಕೊಂಗಳ್ಳಿ ಬಸವರಾಜು, ಹುಲ್ಲಹಳ್ಳಿ ಶಿವಣ್ಣ, ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ಮುಖಂಡರಾದ ಹೆಮ್ಮರಗಾಲ ಸೋಮಣ್ಣ, ಮಸಗೆರಾಜು, ದೊಡ್ಡಂಕ ಶೆಟ್ಟಿ, ಶ್ರೀನಿವಾಸ್, ಸಿದ್ದರಾಜು, ಮಂಜು ಪಟೇಲ್, ನಗರಸಭಾ ಸದಸ್ಯರಾದ ಮಹದೇವ ಪ್ರಸಾದ್, ಗ್ರಾಪಂ ಸದಸ್ಯರಾದ ಗೋವಿಂದರಾಜು, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಹುಣಸೂರಲ್ಲಿ ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬ ಆಚರಣೆ



ಹುಣಸೂರು, ನ.25– ಮಾಜಿ ಸಚಿವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ ಹುಟ್ಟುಹಬ್ಬದ ಸರಳವಾಗಿ ಆಚರಿಸಲಾಯಿತು. ನಗರದ ಶ್ರೀ ದೇವರಾಜು ಅರಸು ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಹಂಪಲು ವಿತರಿಸಲಾಯಿತು. ಇದಕ್ಕೂ ಮುನ್ನ ಆಸ್ಪತ್ರೆ ಎದುರಿನ ಶ್ರೀ ಕನ್ನಾಕ ಪರಮೇಶ್ವರಿ ದೇವಸ್ಥಾನದಲ್ಲಿ ಜಿ.ಟಿ.ಡಿ ಹೆಸರಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಕಾರ್ಯ ಕ್ರಮದಲ್ಲಿ ನಗರಸಭೆ ಸದಸ್ಯರುಗಳಾದ ಹೆಚ್.ಪಿ. ಸತೀಶ್ ಕುಮಾರ್, ಕೃಷ್ಣರಾಜಗುಪ್ತ, ಹರೀಶ್, ದಿನೇಶ್, ಶರವಣ, ಸತೀಶ್ ಪಾಪಣ್ಣ, ಅಸ್ವಾಳು ಕೆಂಪೇಗೌಡ, ಕಿರಂಗೂರು ಬಸವರಾಜು, ವಾಸೇಗೌಡ, ಬಾಬು, ಸತ್ಯನಾರಾಯಣ, ಚಂದ್ರಶೇಖರ್, ವೆಂಕಟೇಶ್, ಶೇಖರ್, ಹರವೆ ಶ್ರೀಧರ್, ಸಿರಾಜ್ ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು.

ನ.30ಕ್ಕೆ ನಂಜನಗೂಡಲ್ಲಿ ಕನಕದಾಸ ಜಯಂತೋತ್ಸವ

ನಂಜನಗೂಡು, ನ.25– ತಾಲೂಕು ಆಡಳಿತದ ವತಿಯಿಂದ ನ.30 ರಂದು



ನಂಜನಗೂಡಲ್ಲಿ ಭಕ್ತ ಕನಕದಾಸರ ಜಯಂತೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ. ತಾಲೂಕು ಕುರುಬ ಸಂಘದ ವತಿಯಿಂದ ಸಂಪೂರ್ಣ ಸಹಕಾರ ನೀಡುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಲಾಗುವುದು ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ ಸುದ್ದಿಗಾರರಿಗೆ ತಿಳಿಸಿದರು.

ನಗರದ ಕನಕದಾಸ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ತಾಲೂಕು ಮಟ್ಟದಲ್ಲಿ ಸಂಘಟನೆ ಯನ್ನು ಬಲಗೊಳಿಸಲು ಡಿಸೆಂಬರ್ ತಿಂಗಳ ಕೊನೆಯಲ್ಲಿ ತಾಲೂಕು ಕುರುಬರ ಮಹಾ ಸಭೆಯನ್ನು ಸಹ ಹಮ್ಮಿಕೊಳ್ಳಲಾಗಿದೆ, ನ.30 ರಂದು ನಡೆಯುವ ಕನಕದಾಸರ ಜಯಂತೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಜನಪದ ತಂಡಗಳು ಪಾಲ್ಗೊಳ್ಳಲಿವೆ, ಅಂದು ನಗರದಲ್ಲಿ ಅದ್ಧೂರಿ ಮೆರವಣಿಗೆ ನಡೆಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು ಎಂದು ಅವರು ತಿಳಿಸಿದರು. ಸಭೆಯಲ್ಲಿ ಸಂಘದ ಕಾರ್ಯದರ್ಶಿ ಬಸವರಾಜು, ಟ್ರಸ್ಟಿಗಳಾದ ನಾಗೇಂದ್ರ ನೀಲಿ ಸಿದ್ದು, ಕೆ.ಎನ್.ನಂಜಯ್ಯ, ಎನ್.ದೇವಯ್ಯ, ಹೊಸೂರ್ ಕೃಷ್ಣ, ಗುರುರಾಜು, ಕಾಳೇಗೌಡ, ಸಿ.ಎಂ. ಶಂಕರ್, ಗಂಗಾಧರ ಉಪಸ್ಥಿತರಿದ್ದರು.

ಕನ್ನಡ ಉಳಿಸಲು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸಿ

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸುನೀಲ್ ಬೋಸ್ ಕರೆ

ತಿ.ನರಸೀಪುರ, ನ.25– ವಿವಿಧ ಪ್ರದೇಶದಲ್ಲಿದ್ದ ಕನ್ನಡಿಗರನ್ನು ಒಗ್ಗೂಡಿಸಿ ಮೈಸೂರು ರಾಜ್ಯವನ್ನಾಗಿ ಏಕೀಕರಣಗೊಳಿಸಲಾಗಿತ್ತು. ಈ ಹಿಂದೆ ಸಿಎಂ ಆಗಿದ್ದ ದಿವಂಗತ ದೇವರಾಜ ಅರಸು ಅವರು ಕರ್ನಾಟಕ ಎಂದು ನಾಮಕರಣ ಮಾಡಿದರು ಎಂದು ವಸತಿ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಕೆಡಿಪಿ ಸದಸ್ಯ ಸುನಿಲ್ ಬೋಸ್ ಹೇಳಿದರು.



ಪಟ್ಟಣದ ಹೌಸಿಂಗ್ ಬೋರ್ಡ್ ವಿದ್ಯಾನಗರದಲ್ಲಿ ಶ್ರೀ ವಿನಾಯಕ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕನ್ನಡಿಗರಿಗೆ ಕನ್ನಡಕ್ಕಿಂತ ಅನ್ಯ ಭಾಷೆಗಳ ಮೇಲೆ ಪ್ರೀತಿ, ಅಭಿಮಾನ ಜಾಸ್ತಿ. ಇದರಿಂದ ನಮ್ಮ ಭಾಷೆಯ ಬೆಳವಣಿಗೆಗೆ ಮಾರಕವಾಗುತ್ತಿದೆ. ಶ್ರೀಮಂತ ಭಾಷೆಯಾಗಿರುವ ಕನ್ನಡವನ್ನು ಉಳಿಸಲು ಜನರು ಮಕ್ಕಳಿಗೆ ಕನ್ನಡ ಮಾಧ್ಯಮ ಶಿಕ್ಷಣ ದೊರಕಿಸಬೇಕು. ಕನ್ನಡಿಗರು ಭಾಷಾಭಿಮಾನ ಮೆರೆಯಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತಾಡಿದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆಡಳಿತ ಮತ್ತು ವ್ಯವಹಾರಿಕ ಭಾಷೆಯಾಗಿ ನಿರಂತರವಾಗಿ ಬಳಕೆಯಾದಲ್ಲಿ ಕನ್ನಡ ಬೆಳೆಯಲು ಸಾಧ್ಯ ಎಂದು ಹೇಳಿದರು.

ಇದೇ ವೇಳೆ ಬಂಡಿಪುರ, ಬೆಂಗಳೂರು ಕನ್ನಡ ಲಿಪಿ ವಿನ್ಯಾಸಕ ಆರ್.ಮಂಜುನಾಥ್ ಅವರನ್ನು ವಿನಾಯಕ ಗೆಳೆಯರ ಬಳಗದ ವತಿಯಿಂದ ಸನ್ಮಾನಿಸಲಾಯಿತು.

ವಾಟಾಳ್ ಸಿಂಹಾಸನ ಮಠಾಧ್ಯಕ್ಷ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದರು.

ಪತ್ರಕರ್ತ ಎಂ ಮಹದೇವ್ ಕನ್ನಡದ ಬಗ್ಗೆ ಭಾಷಣ ಮಾಡಿದರು. ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ಮಾಜಿ ಅಧ್ಯಕ್ಷ ಕೆ ವಜ್ರೇಗೌಡ, ಮೈಮುಲ್ ನಿರ್ದೇಶಕ ಆರ್. ಚೆಲುವರಾಜು, ಕಾರ್ಯಕ್ರಮದ ಆಯೋಜಕ ರಜತ್ ಗೌಡ (ಸ್ವಾಮಿ), ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಸದ್ಯಸ್ಯರುಗಳಾದ ಮಹದೇವಮ್ಮ, ತುಂಬಲ ಪ್ರಕಾಶ್, ಮೆಡಿಕಲ್ ನಾಗರಾಜು, ಎಲ್. ಮಂಜುನಾಥ್, ಗಣೇಶ್, ಎಂ ಮಿಥುನ್, ಮೃಗಾಲಯ ಪ್ರಾಧಿಕಾರದ ಮಾಜಿ ಸದಸ್ಯ ಅಮ್ಜದ್ ಖಾನ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್, ಕಾರ್ಯದರ್ಶಿ ಕೊತ್ತೆಗಾಲ ಬಸವರಾಜು, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ. ಬಿ ಪ್ರದೀಪ್, ಗ್ರಾಪಂ ಅಧ್ಯಕ್ಷ ರಾಮನಂಜಯ್ಯ, ತಾ.ಪಂ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ಸದಸ್ಯ ರಮೇಶ್, ವಿದ್ವಾನ್ ದೊಡ್ಡಯ್ಯ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಮಾದೇಶ್, ಅನುಪ್ ಗೌಡ, ಸಮಾಜ ಕಲ್ಯಾಣ ಸಚಿವರ ಆಪ್ತ ಸಹಾಯಕ ಬಸವರಾಜು, ರೇವಣ್ಣ, ಮತ್ತಿತರು ಉಪಸ್ಥಿತರಿದ್ದರು.

ಚಾ.ನಗರ ಲೋಕಸಭೆ: ಸ್ಥಳೀಯರಿಗೆ ಬಿಜೆಪಿ ಟಿಕೆಟ್ ನೀಡಿ

ಜಿಪಂ ಮಾಜಿ ಸದಸ್ಯ ಹೆಚ್.ಸಿ.ಲಕ್ಷ್ಮಣ್ ಮನವಿ

ಹೆಚ್.ಡಿ.ಕೋಟೆ, ನ.25– ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಥಳೀಯ ನಿಷ್ಠಾವಂತ ಮತ್ತು ಪ್ರಾಮಾಣಿಕ ಬಿಜೆಪಿ ಕಾರ್ಯಕರ್ತರಿಗೆ ಟಿಕೆಟ್ ನೀಡುವಂತೆ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಎಚ್.ಸಿ. ಲಕ್ಷ್ಮಣ್ ಮನವಿ ಮಾಡಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಥಳೀಯರಿಗೆ ಅವಕಾಶ ಮಾಡಿಕೊಡಬೇಕು, ಅದರಲ್ಲಿ ನಾನೂ ಸ್ಥಳೀಕನಾಗಿದ್ದು, ನನಗೂ ಅವಕಾಶ ಮಾಡಿಕೊಡಿ ಎಂದು ವರಿಷ್ಠರಲ್ಲಿ ಮನವಿ ಮಾಡಿದರು.



ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ನನ್ನ ತಂದೆಯವರಾದ ಎಚ್.ಬಿ. ಚೆಲುವಯ್ಯ ಅವರು ಶಾಸಕರಾಗಿದ್ದು, ಕ್ಷೇತ್ರದ ಅಭಿವೃದ್ಧಿಗೆ ನಿಷ್ಠೆಯಿಂದ ದುಡಿದು ತಾರಕ ಏತ ನೀರಾವರಿ, ನುಗು ನೀರಾವರಿ ಯೋಜನೆ, ಪದವಿ ಕಾಲೇಜು, ಹೆಣ್ಣು ಮಕ್ಕಳ ಹಾಸ್ಟೆಲ್ ನಿರ್ಮಾಣ ಸೇರಿದಂತೆ ಇನ್ನು ಹಲವಾರು ಶಾಶ್ವತ ಅಭಿವೃದ್ಧಿ ಕೆಲಸ ನಿರ್ವಹಿಸಿ ಉತ್ತಮ ಹೆಸರು ಗಳಿಸಿದ್ದಾರೆ. ಅವರ ಮಕ್ಕಳಾದ ನಾವು ಸಹ ಅವರ ದಾರಿಯಲ್ಲಿ ನಡೆಯುತ್ತಿದ್ದು, ಎರಡು ಬಾರಿ ಜಿಲ್ಲಾ ಪಂಚಾಯಿತಿ ಸದಸ್ಯನಾಗಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ ಎಂದು ವಿವರಿಸಿದರು.

2004ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯ ಪರ ಪ್ರಚಾರ ಮಾಡಿದ್ದೇನೆ, 2011 ರಲ್ಲಿ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾಗಿದ್ದು, ಮೈಸೂರು ಜಿಲ್ಲಾ ದಲಿತ ಮೋರ್ಚಾ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೇನೆ. ಈವರೆಗೂ ಪಕ್ಷದ ಸಂಘಟನಾತ್ಮಕ ಕಾರ್ಯದಲ್ಲಿ ತೊಡಗಿದ್ದು, ಪಕ್ಷದ ಚಟುವಟಿಕೆಯಲ್ಲಿ ಸಕ್ರಿಯವಾಗಿದ್ದೇನೆ, ಈ ಬಾರಿ ನನಗೆ ಪಕ್ಷದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟರೆ ಪಕ್ಷದ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಅವರು ನುಡಿದರು.

ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಮತದಾರರಿಂದ ತಿರಸ್ಕೃತವಾಗಿರುವ ಯಾವುದೇ ಮಾಜಿ ಸದಸ್ಯರುಗಳಿಗೆ ಮತ್ತು ಸರಕಾರಿ ನೌಕರಿಯಿಂದ ನಿವೃತ್ತಿ ಪಡೆದು ವಿಶ್ರಾಂತಿ ಪಡೆಯುತ್ತಿರುವವರಿಗೆ ಯಾವುದೇ ಕಾರಣಕ್ಕೂ ಪಕ್ಷದಿಂದ ಟಿಕೆಟ್ ನೀಡಬಾರದು. ಸ್ಥಳೀಯರಾಗಿರುವ ನಮ್ಮಂತವರಿಗೆ ಪಕ್ಷದ ವರಿಷ್ಠರು ಗುರುತಿಸಿ, ಟಿಕೆಟ್ ನೀಡಿದರೆ ಸ್ಥಳೀಯರಿಗೆ ಆದ್ಯತೆ ನೀಡಿದಂತಾಗುತ್ತದೆ ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ವೆಂಕಟಸ್ವಾಮಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಆಗತ್ತೂರು ಎಂ. ದಾಸಪ್ಪ, ಬಿಜೆಪಿ ಮಾಜಿ ತಾಲೂಕು ಅಧ್ಯಕ್ಷರುಗಳಾದ ಶಿವರಾಜಪ್ಪ ಯೋಗೇಶ್ ಕುಮಾರ್, ಒಕ್ಕಲಿಗರ ಸಂಘದ ತಾಲೂಕು ಮಾಜಿ ಅಧ್ಯಕ್ಷ ಟಿ.ವೆಂಕಟೇಶ್, ನಟರಾಜ್, ಮುಖಂಡರಾದ ಮನುಗನಹಳ್ಳಿ ಮಂಜುನಾಥ್, ಗುರುಸ್ವಾಮಿ, ಜವರಪ್ಪ, ಸಿದ್ದು, ಗಣಪತಿ, ಸ್ಟುಡಿಯೋ ಸುರೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

> ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಸ್ಥಳೀಯರಾದ ಜಿಪಂ ಮಾಜಿ ಸದಸ್ಯ ಲಕ್ಷ್ಮಣ್ ಅವರಿಗೆ ಟಿಕೆಟ್ ನೀಡಿದರೆ, ಅವರ ಗೆಲುವು ಖಚಿತ. ಅವರು ಗೆದ್ದರೆ ತಾಲೂಕಿನಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆಯಲು ಸಾಧ್ಯವಾಗುತ್ತದೆ. ಲಕ್ಷ್ಮಣ್ ಅವರಿಗೆ ಈ ಬಾರಿ ಟಿಕೆಟ್ ನೀಡಿದರೆ ಇತರೆ ಪಕ್ಷಗಳ ಹಲವಾರು ಪ್ರಮುಖ ಮುಖಂಡರುಗಳು, ಲಕ್ಷ್ಮಣ್ ಅವರಿಗೆ ಬೆಂಬಲಿಸುವ ಭರವಸೆ ನೀಡಿದ್ದಾರೆ. ಇಂಥ ವ್ಯಕ್ತಿಯನ್ನು ಗುರುತಿಸಿ ವರಿಷ್ಠರು ಟಿಕೆಟ್ ನೀಡಬೇಕು.
> –**ವೆಂಕಟಸ್ವಾಮಿ,** ಜಿಪಂ ಮಾಜಿ ಸದಸ್ಯ

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಗರಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	2 ಪ್ರದರ್ಶನಗಳು
ರಾಜಕಮಲ್	
ಆಧಿಕೇಶವ (ತೆ)	4 ಪ್ರದರ್ಶನಗಳು
ಸಂಗಂ	
ಗರಡಿ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರಡಿ (ಕ)	4 ಪ್ರದರ್ಶನಗಳು
ಪ್ರಭಾ	
ಟಗರು ಫಲ್ಯ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಟೈಗರ್ 3(ಹಿಂ):** ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ.
ಸ್ಕ್ರೀನ್ 2	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, **ರಾಜಯೋಗ (ಕ):** ಮ.1.15ಕ್ಕೆ, **ನೇತ್ರಂ (ಕ):** ಸಂ.4.30ಕ್ಕೆ, **ಗರಡಿ (ಕ):** ರಾ.7.10ಕ್ಕೆ, **ಸ್ಪಾರ್ಕ್ ಲೈಫ್ (ತೆ):** ರಾ.10ಕ್ಕೆ.
ಸ್ಕ್ರೀನ್ 3	**ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ):** ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, **ಬೆಂಬಿಡದ ನಾವಿಕ (ಕ):** ಮ.1ಕ್ಕೆ, **ಶೇಶಮ್ ಮೈಕ್ ಇಲ್ ಫಾತಿಮಾ (ಮ):** ರಾ.7.30ಕ್ಕೆ, **ದಿ ಹಂಗರ್ ಗೇಮ್ಸ್ (ಇಂ):** ರಾ.10.10ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	**ಟೈಗರ್ 3 (ಹಿಂ):** ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	**ಮಂಗಳವಾರಂ (ತೆ):** ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, **ಗರಡಿ (ಕ):** ಮ.3.40ಕ್ಕೆ, **ಟೈಗರ್ 3 (ಹಿಂ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, ಸಂ.4.10ಕ್ಕೆ, **ರಾಜಯೋಗ (ಕ):** ಮ.1.05ಕ್ಕೆ, ಸಂ.6.15ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, **ಟೈಗರ್ 3 (ಹಿಂ):** ಸಂ.4.20ಕ್ಕೆ.
ಸ್ಕ್ರೀನ್ 3	**ಟೈಗರ್ 3(ಹಿಂ):** ಬೆ.11ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಟಗರುಪಲ್ಯ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, **ಟೈಗರ್ 3 (ಹಿಂ):** ಮ.1.05ಕ್ಕೆ, ರಾ.9.30ಕ್ಕೆ.


ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದನ ಮೇಯಿಸುತ್ತಿದ್ದ ಮಹಿಳೆ ಮೇಲೆ ಹೆಜ್ಜೇನು ದಾಳಿ

ನೀರಿಗೆ ಜಿದ್ದರೂ ಜಿಡದೆ ಕಚ್ಚಿದ ಹೆಜ್ಜೇನು



ಹಿರೀಕ್ಯಾತನಹಳ್ಳಿ, ನ.25– ಜಮೀನಿನಲ್ಲಿ ದನ ಮೇಯಿಸುತ್ತಿದ್ದ ಮಹಿಳೆ ಮೇಲೆ ಹೆಜ್ಜೇನು ದಾಳಿ ಮಾಡಿ ಕಚ್ಚಿರುವ ಘಟನೆ ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ತಮ್ಮ ಜಮೀನಿನಲ್ಲಿ ಲಲಿತಮ್ಮ ದನ ಮೇಯಿಸುತ್ತಿದ್ದಾಗ ಹೆಜ್ಜೇನು ದಾಳಿ ನಡೆಸಿದೆ. ಜೇನಿನ ದಾಳಿ ತಡೆಯಲಾರದೆ ಪಕ್ಕದಲ್ಲಿ ಹರಿಯುತ್ತಿದ್ದ ಹಾರಂಗಿ ನಾಲೆಗೆ ಧುಮುಕಿದ್ದಾರೆ. ಆದರೂ ಜೇನು ಬಿಡದೆ ಕಚ್ಚುತ್ತಿದ್ದ ದೃಶ್ಯವನ್ನು ಕಂಡ ದಾರಿಹೋಕರು ಹರಸಾಹಸದಿಂದ ಜೇನುಹುಳುಗಳನ್ನು ಓಡಿಸಿ ಅವರನ್ನು ನೀರಿನಿಂದ ಮೇಲೆತ್ತಿ ಗ್ರಾಮದ ಖಾಸಗಿ ಕ್ಲಿನಿಕ್‌ನಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದರು.

ನಾಗರಾಜು ನಿಧನ

ಕೆ.ಆರ್.ನಗರ: ಪಟ್ಟಣದ ಬಸವೇಶ್ವರ ಬಡಾವಣೆಯ ನಿವಾಸಿ ಆರ್.ಬಿ.ನಾಗರಾಜು(90) ಶನಿವಾರ ನಿಧನರಾದರು. ನೆರವೇರಲಿದೆ. ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ ನಗರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ಇವರು ಶ್ರೀ ಮಲೇ ಮಹದೇಶ್ವರ ದೇವಸ್ಥಾನದ ಉತ್ಸವ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದು ಪುರಸಭೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಶಾಸಕ ಡಿ.ರವಿಶಂಕರ್ ಸೇರಿದಂತೆ ಇತರ ಗಣ್ಯರು ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.



ಪುಟ್ಟಮಾದಯ್ಯ



ಟಿ.ನರಸೀಪುರ ನ 25–ತಾಲೂಕಿನ ಬೊಮ್ಮನಾಯಕನಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕ ಪುಟ್ಟ ಮಾದಯ್ಯ(65) ಶನಿವಾರ ತಮ್ಮ ನಿವಾಸದಲ್ಲಿ ನಿಧನರಾದರು

ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದು, ಇವರ ಅಂತ್ಯಕ್ರಿಯೆಯನ್ನು ಭಾನುವಾರ ಮಧ್ಯಾಹ್ನ 12 ಗಂಟೆಗೆ ಬೊಮ್ಮನಾಯಕನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಮಾಜಿ ಸಚಿವರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ
ಶಾಸಕರು, ಜೆಡಿಎಸ್ ಕೋರ್ ಕಮಿಟಿಯ ಅಧ್ಯಕ್ಷರಾದ
ಸನ್ಮಾನ್ಯ ಶ್ರೀ ಜಿ.ಟಿ. ದೇವೇಗೌಡ
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಜಿ.ಟಿ.ದೇವೇಗೌಡ ಅಭಿಮಾನಿಗಳ ಬಳಗ, ಮೈಸೂರು